MR. SPEAKER.— You have given it to-day.

SRI SHEERNALY CHANDRASHEKAR.— I will just explain and it is up to you to take it or not. It is a notice under rule 177 against the Chairman, PAC...

ಅಧ್ಯಕ್ಷರು.— ಈಗಲೇ ನೋಟೀಸ್ ಕೊಟ್ಟು ಬಿಟ್ಟು ಅದನ್ನು ಈಗಲೇ ತೆಗೆದುಕೊಳ್ಳಬೇಕು ಎಂದರೆ ಅದಾಗುವುದಿಲ್ಲ. ನೀವು ಕೊಟ್ಟ ತಕ್ಷಣ ಅದನ್ನು ಇಲ್ಲಿ ತೆಗೆದುಕೊಳ್ಳಬೇಕು ಅಂತ ಏನೂ ಇಲ್ಲ. ಅದನ್ನು ನಾನು ನೋಡುತ್ತೇನೆ.

SRI K. BHASKER NAIDU.— Sir, is it a day of senior members' indiscipline ?

MR. SPEAKER.— Mr. Sheeirnaly Chandrashekar, I have not permitted. I am calling Sri Gangadharan to call the attention of the Hon. Minister for Minor Irrigation.

SRI M. M. J. SADYOJATHA (Minister for Transport and Minor Irrigation).— Mr. Speaker, I request you to take this up tomorrow.

ಶ್ರೀ ಎಚ್. ಗಂಗಾಧರನ್.— ಸ್ವಾಮಿ, ಮಾನ್ಯ ಮುಖ್ಯಮಂತ್ರಿಯವರು ಈ ಸಭೆಯಲ್ಲೇ ಇದ್ದಾರೆ. ಅವರಲ್ಲಿ ನನ್ನ ಒಂದು ವಿನಂತಿ ಇದೆ. ನಿನ್ನೆ ಪತ್ರಿಕೆಯಲ್ಲಿಯಲ್ಲಿ ಆ ಒಂದು ವಿಚಾರ ಬಂದಿದೆ. ಮೈಸೂರಿನಲ್ಲಿ ಈ ಸಚಿವ ಸಂಪುಟದ ಸಭೆ ನಡೆದಂಥ ಕಾಲದಲ್ಲಿ ಸುಪ್ರೀಂ ಕೋರ್ಟ್ ಬೆಂಚನ್ನು ಬೆಂಗಳೂರಿಗೆ ತರುವುದಕ್ಕೆ ಪ್ರಯತ್ನ ಮಾಡಬೇಕೆಂದು ನಾನು ಅವರಲ್ಲಿ ವಿನಂತಿಸಿಕೊಂಡಿದೆ. ಆ ಬಗ್ಗೆ ಏನು ತೀರ್ಮಾನವಾಯಿತೋ ಗೊತ್ತಿಲ್ಲ. ಮದ್ರಾಸಿನಲ್ಲಿ ಈ ಬಗ್ಗೆ ವ್ಯವಸ್ಥೆ ಮಾಡಿ, ಕೋರ್ಟ್‌ನ ಲಾಯರ್‌ಗಳಿಗೆ ಕ್ವಾರ್ಟರ್ಸ್‌ನ್ನು ಕಟ್ಟುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ, ಈ ವಿಚಾರದಲ್ಲಿ ಅದಕ್ಕಾಗಿ ನಮ್ಮಲ್ಲಿ ಎಲ್ಲಾ ಸೌಲಭ್ಯಗಳೂ ಇವೆ. ಇಲ್ಲಿ ಅದಕ್ಕೆ ಸೌಲಭ್ಯಗಳು ಇಲ್ಲದಿದ್ದರೆ ಮೈಸೂರಿನಲ್ಲಿ ಲಲಿತ ಮಹಲ್ ಅರಮನೆಯನ್ನು ಕೊಂಡುಕೊಂಡು ಸುಪ್ರೀಂ ಕೋರ್ಟ್ ಬೆಂಚನ್ನು ಮಾಡುವುದಕ್ಕೆ ಬರುತ್ತದೆ. ಅದ್ದರಿಂದ ಮಾನ್ಯ ಮಂತ್ರಿಯವರು ತಮ್ಮ ಎಲ್ಲಾ ಪ್ರಭಾವವನ್ನು ಬಳಸಿ ಕರ್ನಾಟಕ ರಾಜ್ಯದಲ್ಲಿ ಒಂದು ಸುಪ್ರೀಂ ಕೋರ್ಟ್‌ನ ಬೆಂಚ್ ಬರುವುದಕ್ಕೆ ಪ್ರಯತ್ನ ಮಾಡಬೇಕು ಎಂದು ಹೇಳುತ್ತೇನೆ,

Financial Business

General Discussion on Budget.

† ಶ್ರೀ ಭೀಮಣ್ಣ ಎಸ್. ಖಂಡ್ರೆ(ಬಾಲ್ಕಿ)–ಮಾನ್ಯ ಅಧ್ಯಕ್ಷರೇ ನಮ್ಮ ಮಾನ್ಯ ಅರ್ಥ ಮಂತ್ರಿಗಳು ಮಂಡಿಸಿರುವ ಆಯವ್ಯಯ ಪತ್ರಕ್ಕೆ ನನ್ನ ಬೆಂಬಲವನ್ನು ವ್ಯಕ್ತ ಪಡಿಸುತ್ತಾ ನಾನು ಇದನ್ನು ಸ್ವಾಗತಿಸುತ್ತೇನೆ. ನಾನು ಸುಮಾರು ೧೫ ವರ್ಷಗಳಿಂದಲೂ ಸಹ ಎಷ್ಟೋ ಆಯವ್ಯಯ ಪತ್ರಗಳನ್ನು ನೋಡುತ್ತಿದ್ದೇನೆ. ಆದರ ಇಷ್ಟೊಂದು ವಿವರವಾದ ಆಯವ್ಯಯ ಪತ್ರವನ್ನು ಯಾರೂ ಮಂಡನೆ ಮಾಡಿಲ್ಲವೆಂದು ನನ್ನ ಭಾವನೆ. ನಮ್ಮ ಅರ್ಥ ಸಚಿವರು ಪ್ರತಿಯೊಂದು ವಿಷಯದ ಮೇಲೂ ಪ್ರಸ್ತಾಪ ಮಾಡಿದ್ದಾರೆ. ಅದರಲ್ಲಿ ಬಹಳ ಮುಖ್ಯವಾದ ವಿಷಯವೇನೆಂದರೆ ನಮ್ಮ ಸರ್ಕಾರದ ಧ್ಯೇಯ ಮತ್ತು ಉದ್ದೇಶಗಳು ಏನು, ಮುಂದೆ ಮಾಡಬೇಕಾದಂತಹ ಕೆಲಸಗಳಿಗೆ ಎಷ್ಟೆಷ್ಟು ಹಣ ಬೇಕಾಗುತ್ತದೆ, ಎಷ್ಟೆಷ್ಟು ಹಣ ಖರ್ಚು ಮಾಡಬೇಕಾಗುತ್ತದೆ, ಎಂಬುದನ್ನೆಲ್ಲಾ ವಿವರವಾಗಿ ಪ್ರಸ್ತಾಪ ಮಾಡಿದ್ದಾರೆ. ಅದಕ್ಕೆ ನಾನು ಮೊಟ್ಟಮೊದಲನೇಯದಾಗಿ ಸ್ವಾಗತಿಸುತ್ತೇನೆ. ಇದರ ಜೊತೆಗೆ ವ್ಯವಸಾಯದ ಬಗ್ಗೆ ಹರಿಜನ ಮತ್ತು ಗಿರಿಜನರ ಉದ್ಧಾರದ ಬಗ್ಗೆ ಹಾಗೂ ಹಿಂದುಳಿದ ವರ್ಗದ ಅಭಿವೃದ್ಧಿಯ ಬಗ್ಗೆ ಬೇರೆ ಬೇರೆ ಹೆಸರುಗಳಿಂದ ಅಂದರೆ ಜ್ಞಾನ ಮಂದಿರ, ಸಾಗರದೀಪ, ಆಶಾಕಿರಣ ಮುಂತಾದ ಹೆಸರುಗಳನ್ನು ಇಟ್ಟುಕೊಂಡು ಮುಂದೆ ಯಾವ ರೀತಿಯಲ್ಲಿ ಇವುಗಳನ್ನು ಅಭಿವೃದ್ಧಿ ಮಾಡಬೇಕು ಎನ್ನುವ ಒಂದು ಪ್ರೋಗ್ರಾಂನ್ನು ಕೊಟ್ಟಿದ್ದಾರೆ. ಈ ಒಂದು ಕಾರ್ಯಕ್ರಮದ ಪ್ರಕಾರ ಸರ್ಕಾರ ಇದನ್ನು ಕಾರ್ಯಗತ ಮಾಡ

ಬೇಕು. ಇದನ್ನು ಕಾರ್ಯಗತ ಮಾಡುತ್ತದೆ ಎನ್ನುವ ಭರವಸೆ ನನಗಿದೆ ಆದ್ದರಿಂದ ಇದನ್ನು ನಾನು ಸ್ವಾಗತಿಸುತ್ತೇನೆ. ಆದರೆ ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ ಸುಮಾರು ೨೫ ವರ್ಷಗಳಿಂದ ಅಂದರೆ ೧೯೫೬ನೇ ಇಸವಿಯಿಂದ ೫ ಭಾಗಗಳ ಜನರು ಕರ್ನಾಟಕದಲ್ಲಿ ಸೇರಿದ್ದೇವೆ. ಈ ೫ ಭಾಗಗಳಲ್ಲಿ ಎಲ್ಲಿ ಹಿಂದುಳಿದ ಜನರಿದ್ದಾರೆ ಎಲ್ಲಿ ಹಿಂದುಳಿದ ಪ್ರದೇಶವಿವೆ ಎಂಬುದನ್ನು ಸರ್ಕಾರ ಮನಗಂಡು ಅಲ್ಲಿ ಅಭಿವೃದ್ಧಿ ಕೆಲಸವನ್ನು ಮಾಡುವುದಕ್ಕೆ ಎಷ್ಟು ಹಣವನ್ನು ಕೊಡ ಬೇಕೋ ಅಷ್ಟು ಹಣವನ್ನು ಕೊಡಬೇಕೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ನಮ್ಮ ಅರ್ಥಮಂತ್ರಿಗಳಿಗೆ ಈ ಸಂದರ್ಭದಲ್ಲಿ ಒಂದು ಉದಾಹರಣೆಯನ್ನು ಕೊಡುತ್ತೇನೆ. ಕರ್ನಾಟಕ ಹೈದ್ರಾಬಾದ್, ಗುಲ್ಬರ್ಗ ಈ ಪ್ರದೇಶಗಳಲ್ಲಿ ಒಂದು ಡವಲಪ್‌ಮೆಂಟ್ ಕಮಿಟಿಯನ್ನು ನೇಮಕ ಮಾಡಿ ಆ ಕಮಿಟಿಯ ತೀರ್ಮಾನದ ಪ್ರಕಾರ ೧೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಆದರೆ ೩೫೦ ಕೋಟಿ ರೂಪಾಯಿಗಳನ್ನು ಕೊಡುತ್ತೇವೆ ಎಂದು ಕ್ಯಾಬಿನೇಟ್ ಮೀಟಿಂಗ್‌ನಲ್ಲಿ ತೀರ್ಮಾನ ತೆಗೆದುಕೊಂಡಿದ್ದಾರೆ. ಇದನ್ನು ನಾನು ಸ್ವಾಗತಿಸುತ್ತೇನೆ ಆದರೂ ಸಹ ನನಗೆ ಬಹಳ ವ್ಯಥೆಯಾಗುತ್ತದೆ. ನಮ್ಮ ಮಾನ್ಯ ಅರ್ಥ ಮಂತ್ರಿಗಳು ೧೯೮೦ನೇ ಇಸವಿಯ ಆಯುವ್ಯಯ ಭಾಷಣದಲ್ಲಿ ಮೊದಲನೇಯ ಪೇಜಿನಲ್ಲಿ ಈ ರೀತಿ ಹೇಳಿದ್ದಾರೆ. ಅದು ಕರ್ನಾಟಕ ವಿಧಾನ ಸಭೆಯ ನಡವಳಿಕೆಯ ಪುಟ ೩೮ರಲ್ಲಿ ಈ ರೀತಿ ಹೇಳಿದ್ದಾರೆ.

> "Although about Rs. 650 crores have already been invested in major and medium irrigation till March 1980, there are certain districts which have derived no benefit at all and others which have received a very small benefit. Such districts are Bidar, Gulbarga, Chitradurga Dakshina Kannada, Kodagu Bangalore, Tumkur and Hassan. Government, therefore, feel that some priority in allocation of funds has to be given to such districts where stepping up the investiments help to being substantial areas under irrigation in the next year itself".

ಇದರಲ್ಲಿ ನಮ್ಮ ಬೀದರ್ ಜಿಲ್ಲೆಗೆ ಎಷ್ಟು ಹಣವನ್ನು ಕೊಟ್ಟಿದ್ದಾರೆ ಎಂಬುದನ್ನು ನಾನು ಹೇಳುತ್ತೇನೆ. ನಮ್ಮ ಬೀದರ್ ಜಿಲ್ಲೆಯಲ್ಲಿ ಎರಡು ದೊಡ್ಡ ನದಿಗಳು ಇವೆ. ಒಂದು ಕಾರಂಜಿ ಎರಡನೇಯದು ಮಾಂಜರ. ಈ ಇರಿಗೇಷನ್ ಸ್ಕೀಮ್‌ನಲ್ಲಿ ಇನ್‌ವೆಸ್ಟಿಗೇಷನ್ ಆಗಲು ಇನ್ನೂ ೫ ವರ್ಷಗಳು ಬೇಕು ಎಂದು ಹೇಳಿದ್ದಾರೆ. ಇದರಲ್ಲಿ ೯೦ ಸಾವಿರ ಎಕರೆ ಭೂಮಿ ಇರಿಗೇಷನ್ ಆಗಬೇಕು. ಈ ಕಾರಂಜಿ ಪ್ರಾಜೆಕ್ಟನ್ನು ಸ್ಟಾರ್ಟ್ ಮಾಡಿ ಸುಮಾರು ೧೨ ವರ್ಷಗಳು ಮೇಲಾಗಿದೆ. ಇದರ ಬಗ್ಗೆ ನಾನು ಒಂದು ಪ್ರಶ್ನೆಯನ್ನು ಕೇಳಿದಾಗ ಮಾನ್ಯ ಮಂತ್ರಿಗಳು ಈ ವಿಷಯ ಸರ್ಕಾರಕ್ಕೆ ಮನವರಿಕೆಯಾಗಿದೆಯೆಂದು ತಿಳಿಸಿರುತ್ತಾರೆ. ಅಂದರೆ ಸರ್ಕಾರದವರು ಈ ಪ್ರಾಜೆಕ್ಟಿಗೆ ಹಣವನ್ನು ಕೊಡುತ್ತೇವೆ ಎಂದು ಒಪ್ಪಿಕೊಂಡಿದ್ದಾರೆ. ೧೯೮೪ನೇ ಇಸವಿಯ ಒಳಗೆ ಈ ಕಾರಂಜಿ ಪ್ರಾಜೆಕ್ಟನಲ್ಲಿ ನೀರನ್ನು ಒದಗಿಸಿಕೊಡುತ್ತೇವೆ ಎಂದು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಗುಲ್ಬರ್ಗದಲ್ಲಿ ಕ್ಯಾಬಿನೇಟ್ ಮೀಟಿಂಗ್ ನಡೆದಾಗ ಡಿಕ್ಲೇರ್ ಮಾಡಿದರು ಅದಕ್ಕೆ ನನಗೆ ಬಹಳ ಸಂತೋಷವಾಗಿದೆ. ಆದರೆ ಈ ಸಾಲಿನ ಆಯುವ್ಯಯ ಪತ್ರದಲ್ಲಿ ಮಾತ್ರ ಏನೂ ಪ್ರಸ್ತಾಪ ಮಾಡಿಲ್ಲವಾದ್ದರಿಂದ ನನಗೆ ಬಹಳ ವ್ಯಥೆಯಾಗುತ್ತದೆ. ನಮ್ಮ ಜಿಲ್ಲೆ ಬರಗಾಲ ಪೀಡಿತ ಪ್ರದೇಶವಾಗಿದೆ. ನಮ್ಮ ಜಿಲ್ಲೆಯಲ್ಲಿ ೧೨ ಇಂಚ್ ಮಳೆ ಸಹ ಆಗುವುದಿಲ್ಲ. ನಮ್ಮ ಜಿಲ್ಲೆಯಲ್ಲಿ ಸುಮಾರು ೧೯ ಸಾವಿರ ಬಾವಿಗಳು ಇವೆ. ಈ ೧೯ ಸಾವಿರ ಬಾವಿಗಳಲ್ಲಿ ಕುಡಿಯುವುದಕ್ಕೆ ಸಹ ನೀರು ಸಿಗುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಅಲ್ಲಿ ಸರಾಸರಿ ೬ ಪರ್ಸೆಂಟ್ ಮಾತ್ರ ಇರಿಗೇಷನ್ ಆಗುತ್ತದೆ. ಎಂದು ನಮ್ಮ ಬೆಂಗಳೂರು ನಗರದಲ್ಲಿರುವ ವ್ಯವಸಾಯ ಇಲಾಖೆಯ ಅಂಕಿ ಅಂಶಗಳಿಂದ ತಮಗೆ ಗೊತ್ತಾಗುತ್ತದೆ, ಒಟ್ಟು ರಾಜ್ಯದಲ್ಲಿ ಶೇಕಡ ೨೧–೨೨ ಪರ್ಸೆಂಟ್ ಇರುವಾಗ ನಮ್ಮ ಬೀದರ್ ಜಿಲ್ಲೆಯಲ್ಲಿ ಇಷ್ಟೊಂದು ಕಡಿಮೆ ಪ್ರಮಾಣದಲ್ಲಿರುವಾಗ ನೀರಾವರಿ ಸೌಕರ್ಯವನ್ನು ಒದಗಿಸಿಕೊಡುವುದಕ್ಕೆ ತಾವು ಕೂಡ ಒಪ್ಪಿಕೊಂಡಿದ್ದೀರಿ. ಇದಕ್ಕೆ ೯ ಕೋಟಿ ರೂಪಾಯಿಗಳ ಎಸ್ಟಿಮೇಟ್ ಸಹ ತಯಾರಾಗಿತ್ತು. ಆದರೆ ಈಗ ಸುಮಾರು ೪೪ ಕೋಟಿ ರೂಪಾಯಿಗಳಷ್ಟು ಆಗುತ್ತದೆ. ಮತ್ತು ಒಂದು ಕೋಟಿ ರೂಪಾಯಿಗಳು ಕಂಟ್ರಾಕ್ಟದಾರರ ಕ್ಲೈಮ್ ಇದೆ. ಇದರಲ್ಲಿ ನಮ್ಮ ಅಧಿಕಾರಿಗಳ

ಜವಾಬ್ದಾರಿಯೂ ಸಹ ಇದೆ. ಇದರ ಬಗ್ಗೆ ಅವರು ಉದಾಸೀನ ಮಾಡುತ್ತಿದ್ದಾರೆಯೇ ? ಈ ಕಂಟ್ರಾಕ್ಟ್‌ದಾರರ ಒಂದು ಕೋಟಿ ರೂಪಾಯಿಗಳ ಕ್ಲೈಮ್‌ನಲ್ಲಿ ಸುಮಾರು ೭೫ ಲಕ್ಷ ರೂಪಾಯಿಗಳು ಕೊಟ್ಟಿದ್ದಾರೆ. ಆದರೂ ಇನ್ನೂ ೫೦ ಲಕ್ಷ ರೂಪಾಯಿಗಳು ಇದೆ ಎಂದು ಅವರು ಹೇಳುತ್ತಿದ್ದಾರೆ. ಆದರೆ ಕಂಟ್ರಾಕ್ಟ್‌ದಾರರು ಡ್ಯಾಮ್ ಕಟ್ಟಿದ್ದಾರೆಯೇ ಇಲ್ಲವೇ ಎಂಬುದನ್ನು ವಿಚಾರ ಮಾಡಬೇಕಾಗಿದೆ. ಇದರ ಜೊತೆಗೆ ನಮ್ಮ ನೀರಾವರಿ ಖಾತೆಯನ್ನು ಹೊಂದಿರುವ ಶ್ರೀ ಚಿಮ್ಮನಕಟ್ಟಿಯವರು ಒಂದು ಪ್ರಶ್ನೆಗೆ ಉತ್ತರ ಕೊಡುವಾಗ ಹೇಳಿದರು ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ೧೬ ಕೋಟಿ ರೂಪಾಯಿಗಳನ್ನು ಈ ಕಾರಂಜಿ ಪ್ರಾಜೆಕ್ಟ್‌ಗೆ ಕೊಡುತ್ತೇವೆ ಎಂದು ಹೇಳಿದ್ದಾರೆ. ಆದರೆ ನಮ್ಮ ಮಾನ್ಯ ಮಂತ್ರಿಗಳು ಹೇಳಿದ ಪ್ರಕಾರ ಇನ್ನು ಮೂರು ವರ್ಷಗಳಲ್ಲಿ ನೀರು ಕೊಡುವುದಕ್ಕೆ ಸಾಧ್ಯವಿಲ್ಲ. ಎರಡು ವರ್ಷಗಳಿಂದ ಸುಮಾರು ೨ ಕೋಟಿ ೫೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೂ ಸುಮಾರು ೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದಂತಾಗಿದೆ. ಆದರೆ ಕೆಲಸವಾಗಿಲ್ಲ ಹೀಗೆ ಪ್ರತಿ ವರ್ಷ ೪ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಎಂದು ನಾನು ಬಹಳ ಖೇದವಾಗಿ ಹೇಳಬೇಕಾಗಿದೆ. ೧೯೭೯–೮೦, ೧೯೮೦–೮೧ ಮತ್ತು ೧೯೮೧–೮೨ನೇ ಸಾಲಿನಲ್ಲಿ ಸುಮಾರು ಎರಡು ಕೋಟಿ ೫೦ ಲಕ್ಷ ರೂಪಾಯಿಗಳನ್ನು ಒದಗಿಸಿದ್ದರೂ ಕೂಡ ೨ ಕೋಟಿ ೬೫ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಆದರೆ ೧೯೮೨–೮೩ನೇ ಸಾಲಿನಲ್ಲಿ ೨ ಕೋಟಿ ೨೦ ಸಾವಿರ ರೂಪಾಯಿಗಳನ್ನು ಒದಗಿಸಿ ಕೊಟ್ಟಿದ್ದಾರೆ. ಆದರೆ ೧೯೮೪ನೇ ಇಸವಿಯ ಒಳಗೆ ನೀರು ಒದಗಿಸಿಕೊಡಬೇಕಾದರೆ ೩ ಕೋಟಿ ೫೦ ಸಾವಿರ ರೂಪಾಯಿಗಳನ್ನು ಒದಗಿಸಿಕೊಡಬೇಕಾಗಿತ್ತು. ಆದರೆ ೨ ಕೋಟಿ ೨೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ೧೯೮೪ನೇ ಇಸವಿಯ ಒಳಗೆ ನೀರು ಒದಗಿಸಿಕೊಡುವುದಕೆ ಸಾಧ್ಯವಾಗುವುದಿಲ್ಲ. ಈ ವಿಷಯವನ್ನು ನಮ್ಮ ಮಾನ್ಯ ಅರ್ಥಮಂತ್ರಿಗಳ ಜೊತೆಯಲ್ಲಿ ಪ್ರಸ್ತಾಪ ಮಾಡಿದಾಗೆ ಅವರು ಹೇಳಿದರು ಈಗ ಹಣವಿಲ್ಲ. ಕೇಂದ್ರ ಸರ್ಕಾರದಿಂದ ಹಣ ಬಂದ ಮೇಲೆ ಕೊಡುತ್ತೇವೆ ಎನ್ನುವ ಒಂದು ಮಾತನ್ನು ಹೇಳಿದರು. ಆದ್ದರಿಂದ ನಾನು ಕೇಳುವುದೇನೆಂದರೆ ಮಾನ್ಯ ಅರ್ಥ ಮಂತ್ರಿಗಳು ಈ ಮನೆಯಲ್ಲಿ ಒಂದು ಆಶ್ವಾಸನೆಯನ್ನು ಕೊಟ್ಟರೆ ನನಗೆ ಬಹಳ ಸಂತೋಷವಾಗುತ್ತದೆ. ಈ ಕಾರಂಜಿ ಪ್ರಾಜೆಕ್ಟನ್ನು ಎಲ್ಲಿಯವರಿವಿಗೂ ಕಾರ್ಯಗತ ಮಾಡುವುದಿಲ್ಲವೋ ಅಲ್ಲಿಯವರಿವಿಗೂ ಈ ಜಿಲ್ಲೆ ಬರಗಾಲದಿಂದ ವಿಮೋಚನೆಯಾಗುವುದಿಲ್ಲ. ಈ ದೃಷ್ಟಿಯಿಂದ ಅನುಕೂಲ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ.

೩–೦೦ ಪಿ. ಎಂ.

ಇನ್ನು ಒಂದು ಮಾತು ಹೇಳುತ್ತೇನೆ ಏನೆಂದರೆ, ಅಗ್ರಿಕಲ್ಚರಲ್ ಫಾರ್ಮರ್ಸ್‌ಗೆ ನಮ್ಮ ಸರ್ಕಾರ ಒಳ್ಳೆಯ ಕೆಲಸ ಮಾಡಿದೆ, ಇದನ್ನು ನಾನು ಅಪ್ರಿಸಿಯೇಟ್ ಮಾಡುತ್ತಾ ಇದ್ದೇನೆ. ಅಗ್ರಿಕಲ್ಚರಲ್ ಫಾರ್ಮರ್ಸ್‌ಗೆ ಸಮಸ್ಯೆ ಇದೆ, ೫ ಎಕರೆಗೆ ರೆವಿನ್ಯೂ ಅಸೆಸ್‌ಮೆಂಟ್ ಇತ್ತು, ಅದು ಎಕ್ಸಂಪ್ಟ್ ಆಗಿದೆ. ೫ ಎಕರೆ ಇದ್ದುದನ್ನು ಈಗ ೧೦ ಎಕರೆ ಮಾಡಿದ್ದಾರೆ. ಅಬಾಲಿಷನ್ ಆಫ್ ಬೆಟರ್‌ಮೆಂಟ್ ಲೆವಿ ಮಾಡಿದ್ದಾರೆ ಎಲೆಕ್ಟ್ರಿಸಿಟಿಯಲ್ಲಿ ಒಂದು ಹಾರ್ಸ್ ಪವರ್‌ಗೆ ೫೦ ರೂಪಾಯಿ ಮಾಡಿದ್ದಾರೆ. ಸೇಲ್ಸ್ ಟ್ಯಾಕ್ಸ್ ಒಂದು ಪರ್ಸೆಂಟ್ ಕಡಿಮೆ ಮಾಡಿದ್ದಾರೆ. ಈಗ ನಾನು ಒಂದು ಸಲಹೆ ಕೊಡುತ್ತಾ ಇದ್ದೇನೆ. ನಾವು ಬಹಳ ಸಂತೋಷದಿಂದ ಹೇಳುತ್ತಾ ಇದ್ದೇವೆ. ಅದು ವಾಸ್ತವಿಕ, ಸ್ವಾಗತಾರ್ಹ. ನಮ್ಮ ರಾಜ್ಯದಲ್ಲಿ ಲ್ಯಾಂಡ್ ರಿಫಾರ್ಮ್ಸ್ ಬಗ್ಗೆ ಎಷ್ಟು ಕೇಸಸ್ ಆಗಿದೆ, ಆದರೆ ಇಡೀ ಭಾರತದಲ್ಲಿ ಏನೂ ಆಗಿಲ್ಲ. ನಮ್ಮ ರಾಜ್ಯದಲ್ಲಿ ಒಳ್ಳೆಯ ರೀತಿಯಲ್ಲಿ ಭೂಮಿಯನ್ನು ಹಂಚಿದ್ದೇವೆ, ಅದಕ್ಕೆ ಸರ್ಕಾರಕ್ಕೆ ಶಹಭಾಸ್‌ಗಿರಿ ಕೊಡಬೇಕು. ಲ್ಯಾಂಡ್ ಗ್ರ್ಯಾಂಟ್ ಕಮಿಟಿಯಿಂದ ಒಂದೆರಡು ಎಕರೆ ಕೊಟ್ಟು, ಅದಕ್ಕೆ ಎಲ್ಲಾ ಪರಿಸ್ಥಿತಿ ಸರಿಯಾಗಿದೆ ಎನ್ನುವುದನ್ನು ನಾವು ನಂಬುವುದಿಲ್ಲ. ೫೪ ಎಕರೆ ಸೀಲಿಂಗ್ ಮಾಡಿದರೂ ವಾಸ್ತವಿಕವಾಗಿ ಚಪ್ರಾಸಿಗೆ ಎಷ್ಟು ಸಾಲರಿ ಬರುತ್ತದೋ ಅಷ್ಟು ಆದಾಯ ಅದರಿಂದ ಬರುವುದಿಲ್ಲ. ೫೪ ಎಕರೆ ಭೂಮಿ ಇರತಕ್ಕ ಮನುಷ್ಯನಿಗೆ ಹೊಟ್ಟೆಗೆ ಸರಿಯಾಗಿ ಊಟ ಇಲ್ಲ, ಬಟ್ಟೆ ಇಲ್ಲ. ಫ್ಯಾಮಿನ್ ಬಂದಾಗ ಮೂರು ವರ್ಷ ಬೆಳೆಯಲಾರದೆ ಭೂಮಿಯನ್ನು ಮಾರಬೇಕಾಗಿದೆ. ಮಾನ್ಯ ಅರ್ಥ ಮಂತ್ರಿಗಳು ತಮ್ಮ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ, ಅಗ್ರಿಕಲ್ಚರಿಸ್ಟ್ಸ್‌ಗೆ ಲೋನ್ ಕೊಡುವ ಸಲುವಾಗಿ ಕೇಂದ್ರ ಸರ್ಕಾರದವರು ಪಾರ್ಲಿಮೆಂಟ್‌ನಲ್ಲಿ ಪಾಸ್ ಮಾಡಿದ್ದಾರೆ. ಅಗ್ರಿಕಲ್ಚರ್ಸ್ ಬಗ್ಗೆ ಬ್ಯಾಂಕ್ ತೆರೆದು ಆ ಒಂದು ಬ್ಯಾಂಕಿನ ಬ್ರ್ಯಾಂಚನ್ನು ಇಲ್ಲಿ ತೆಗೆದು ೪ ಅಥವಾ ೨ ರೂಪಾಯಿ ಬಡ್ಡಿ ಮಾಡಿಕೊಟ್ಟರೆ ಒಳ್ಳೆಯದು. ಈ ಒಂದು ಸಲಹೆಯನ್ನು ನಾನು ಸರ್ಕಾರದ ಮುಂದೆ ಇಡುತ್ತಾ ಇದ್ದೇನೆ. ಅಗ್ರಿಕಲ್ಚರಲ್ ಎಕ್ಸ್‌ಪರ್ಟ್.

ಜಾಯಿಂಟ್ ವೆಂಚರ್ ತೆಗೆದರೆ ಒಳ್ಳೆಯದು ಎಂದು ಹೇಳಿದ್ದಾರೆ. ಸಣ್ಣ ಸಣ್ಣ ಕಾರ್ಖಾನೆಯಾಗಲಿ, ದೊಡ್ಡ ದೊಡ್ಡ ಕಾರ್ಖಾನೆಯಾಗಲಿ ಬೇರೆಯವರ ಕೊಲಾಬರೇಷನ್ ಮಾಡುತ್ತಾ ಇದ್ದಾರೆ, ಬೇರೆಯವರ ಸಹಾಯ ತೆಗೆದುಕೊಂಡು ತನ್ನ ಷೇರ್ ಹಾಕಿ ಎರಡು ಎಕರೆ, ಮೂರು ಎಕರೆ, ನಾಲ್ಕು ಎಕರೆ ಇರತಕ್ಕ ಜನರು ಟ್ರಾಕ್ಟರ್‌ಗೆ ಆಗಲಿ, ಫರ್ಟಿಲೈಸರ್‌ಗೆ ಆಗಲಿ ತಾನು ಖರ್ಚು ಮಾಡಿ ಏನು ಬೆಳೆಯುತ್ತಾನೆ ಅದರಲ್ಲಿ ನಾಲ್ಕಾಣೆ ಭಾಗ ಅವನು ತೆಗೆದುಕೊಂಡು, ಲಾಭ ಅವರು ತೆಗೆದುಕೊಳ್ಳಲಿ, ಅದಕ್ಕೋಸ್ಕರ ಜಾಯಿಂಟ್ ವೆಂಚರ್ ಮಾಡಿದರೆ ಮಾತ್ರ ಅವರು ಬದುಕಬಹುದು. ಒಬ್ಬ ಲೇಬರ್ ಮನುಷ್ಯ ಬೆಳಿಗ್ಗೆಯಿಂದ ಸಂಜೆವರೆಗೆ ಗಂಡಹೆಂಡತಿ ಇಬ್ಬರೂ ಕೆಲಸ ಮಾಡಿದರೆ ೨೦ ರೂಪಾಯಿ ಗಳಿಸಬಹುದು. ನಮ್ಮಲ್ಲಿ ಈ ಪ್ರಕಾರ ಆಗುತ್ತಾ ಇದೆ. ಆದರೆ ಭೂಮಿ ಇದ್ದ ಮನುಷ್ಯ ೧೦ ಎಕರೆ, ೨೦ ಎಕರೆ ಇದ್ದರೂ ದಿವಸ ೧೦ ರೂಪಾಯಿ ಕೂಲಿ ಅವನಿಗೆ ಬೀಳುವುದಿಲ್ಲ. ಆ ದೃಷ್ಟಿಯಿಂದ ವಿಚಾರ ಮಾಡಿದರೆ ನಮಗೆ ಅರ್ಥವಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಹಾಕುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದಾರೆ. ಮಾನ್ಯ ಮುಖ್ಯಮಂತ್ರಿಗಳು ಬಹಳ ದೊಡ್ಡ ಮನಸ್ಸಿನಿಂದ ಅಗ್ರಿಕಲ್ಚರಲ್ ಇನ್‌ಕಂ ಟ್ಯಾಕ್ಸ್ ಇರಬಾರದು ಎಂದು ಹೇಳಿದಾಗ ಇವರು ಡ್ರೈ ಲ್ಯಾಂಡ್ ಮೇಲೆ ಇರಬಾರದು ಎಂದು ಹೇಳಿದರು. ಸೆಕ್ರೆಟರಿಗಳು ಬಿಲ್ ತಯಾರು ಮಾಡುವ ಪ್ರಸಂಗ ಬಂದಾಗ ಡ್ರೈಲ್ಯಾಂಡ್ ಡೆಫಿನಿಷನ್ ಚೇಂಜ್ ಮಾಡಿದರು. ಸರ್ಕಾರದ ಉದ್ದೇಶ ಒಂದು ಇದ್ದರೆ, ಮಿನಿಸ್ಟರುಗಳ ಉದ್ದೇಶ ಒಂದು ಇದ್ದರೆ, ಕ್ಯಾಬಿನೆಟ್ ಮಿನಿಷ್ಟರ್ ಉದ್ದೇಶ ಒಂದು ಇದ್ದರೆ ಸೆಕ್ರೆಟರಿಯವರಿಗೆ ಅದರ ಕಲ್ಪನೆ ಇರುವುದಿಲ್ಲ ಡ್ರೈ ಲ್ಯಾಂಡ್ ಡೆಫಿನಿಷನ್ ಚೇಂಜ್ ಮಾಡಿದ್ದಾರೆ, ನಮ್ಮ ಲಾ ಮಿನಿಷ್ಟರಿಗೆ ಗೊತ್ತು. ಲ್ಯಾಂಡ್ ರಿಫಾರ್ಮ್ಸ್‌ನಲ್ಲಿ ಡ್ರೈ ಲ್ಯಾಂಡ್‌ಗೆ ಡೆಫಿನಿಷನ್ ಇದೆ ಎಲ್ಲಿ ಮನುಷ್ಯ ತಾನು ಬಾವಿ ಹೊಡೆದು ೧೦–೨೦ ಸಾವಿರ ರೂಪಾಯಿಗಳನ್ನು ಖರ್ಚುಮಾಡಿ, ಓನ್ ಎಕ್ಸ್‌ಪೆಂಡಿಚರ್ ಮಾಡುತ್ತಾನೆ ಅದು ಡ್ರೈಲ್ಯಾಂಡ್ ಎಂದು ಡೆಫಿನಿಷನ್ ಇದೆ. ಅದೇ ಪ್ರಕಾರ ನಮ್ಮ ಲ್ಯಾಂಡ್ ರೆವಿನ್ಯೂ ಆಕ್ಟ್‌ನಲ್ಲಿ ಡೆಫಿನಿಷನ್ ನೋಡಿದರೆ ಇದೇ ಪ್ರಕಾರ ಇದೆ. ಎಲ್ಲಿ ಸ್ವಂತ ಮನುಷ್ಯ ಬಾವಿ ಹೊಡೆದು ಉಪಯೋಗ ಮಾಡುತ್ತಾನೆ ಅದು ಡ್ರೈಲ್ಯಾಂಡ್ ಎಂದು ಹೇಳುತ್ತಾರೆ. ಇದು ತೋಳ ಕುರಿಮರಿಯನ್ನು ತಿಂದ ಕತೆಯಂತೆ ಆಯಿತು. ಹಾಗೆ ನಮ್ಮ ಸೆಕ್ರೆಟರಿಗಳು ಟ್ಯಾಕ್ಸ್ ಮಾತ್ರ ಕೊಡಿಸಬೇಕು ಟ್ಯಾಕ್ಸ್ ಇರಲಿ, ಇಲ್ಲದಿರಲಿ, ಟ್ಯಾಕ್ಸ್ ಮಾತ್ರ ಕೊಡಿಸಬೇಕು ಎಂದು ಮಾಡಿದ್ದಾರೆ. ಆ ದೃಷ್ಟಿಯಿಂದ ನಮ್ಮ ನಾಯಕರು, ನಮ್ಮ ಮುಖ್ಯಮಂತ್ರಿಗಳು ಡ್ರೈಲ್ಯಾಂಡ್‌ಗೆ ಯಾವ ದೃಷ್ಟಿಯಿಂದಲೂ ಟ್ಯಾಕ್ಸ್ ಹಾಕಬಾರದು ಎಂದು ಇದ್ದರೂ ಇವರು ಈ ಪ್ರಕಾರವಾಗಿ ತರುವುದಕ್ಕೆ ಪ್ರಯತ್ನ ಮಾಡಿದ್ದರು ಎಂದು ನಾನು ತಿಳಿಸಬೇಕಾಗಿದೆ. ಈಗ ಒಂದು ಉದಾಹರಣೆಯನ್ನು ಮಾನ್ಯ ಸದಸ್ಯರಿಗೆ ತಿಳಿಸಬೇಕು, ಯಾವ ಪ್ರಕಾರ ಇಟ್ಟಿದ್ದಾರೆಂದು, ಏನೆಂದರೆ ಸೆಕ್ರೆಟರಿಗಳಿಗೆ ಹೊಲ ಗೊತ್ತಿಲ್ಲ. ಅವರು ಒಂದೊಂದು ಎಕರೆಗೆ ೧೫೦೦ ಗ್ರಾಂಡ್‌ನೆಟ್ ಆಗುತ್ತದೆ, ಇನ್‌ಕಂ ಆಗುತ್ತದೆ ಎಂದು ತಿಳಿದುಕೊಂಡರು, ಆದರ ಮೇಲೆ ಇನ್‌ಕಂ ಟ್ಯಾಕ್ಸ್ ಹಾಕುವುದಕ್ಕೆ ಪ್ರಯತ್ನ ಮಾಡಿದ್ದಾರೆ ಇದರ ಜೊತೆಗೆ ಕಬ್ಬು ಬೆಳೆಸುತ್ತಾ ಇದ್ದರು ಅದಕ್ಕೆ ೪೫೦೦ ರೂಪಾಯಿಗಳ ಟ್ಯಾಕ್ಸನ್ನು ಹಚ್ಚಿದ್ದಾರೆ. ನನಗೆ ಈ ಸೀಲಿಂಗನ್ನು ನೋಡಿ ಆಶ್ಚರ್ಯವಾಗುತ್ತದೆ. ೧೯೫೦ರಲ್ಲಿ ಅಗ್ರಿಕಲ್ಚರ್ ಇನ್‌ಕಂ ಟ್ಯಾಕ್ಸ್ ಬಂತು. ಆಗ ಲ್ಯಾಂಡ್ ರಿಫಾರ್ಮ್ಸ್ ಆಕ್ಟ್ ಇಂಪ್ಲಿಮೆಂಟ್ ಆಗಿರಲಿಲ್ಲ. ಆ ಕಾಲಕ್ಕೆ ಒಂದು ಸಾವಿರ ಎಕರೆ ಭೂಮಿ ಇದ್ದರೂ ಟ್ಯಾಕ್ಸ್ ಹಾಕುತ್ತಿದ್ದರು. ಸೀಲಿಂಗ್ ಆದ ನಂತರ ೧೦ ಎಕರೆಗಿಂತ ಹೆಚ್ಚು ಇರುವುದಕ್ಕೆ ಸಾಧ್ಯವಿಲ್ಲ. ಇದರಲ್ಲಿ ಇವತ್ತಿನ ಕಾಲಕ್ಕೆ ಖರ್ಚು ಎಲ್ಲಾ ಹೋಗಿ ೧೦ ಸಾವಿರ ಉಳಿಯುವುದಕ್ಕೆ ಸಾಧ್ಯವಿಲ್ಲ. ಸೆಂಟ್ರಲ್ ಗೌರ್ನ್‌ಮೆಂಟ್ ಕಾನೂನು ಮಾಡಿದ ಪ್ರಕಾರ ೧೫ ಸಾವಿರದಿಂದ ೨೦ ಸಾವಿರದವರೆಗೆ ಇನ್‌ಕಂ ಯಾರಿಗೆ ಇರುತ್ತದೆ ಅವರಿಗೆ ಇನ್‌ಕಂ ಟ್ಯಾಕ್ಸ್ ಇಲ್ಲ. ಆದರೂ ಇಲ್ಲಿ ನಮ್ಮ ಜನ ಪ್ರಯತ್ನ ಮಾಡುತ್ತಾ ಇದ್ದಾರೆ, ನಮ್ಮ ಸೆಕ್ರೆಟರಿಗಳ ಬಗ್ಗೆ ಹೇಳುತ್ತಾ ಇದ್ದೇನೆ. ಇದು ಬ್ಯೂರೋಕ್ರಟಿಕ್ ಸೆಟ್‌ಅಪ್ ಇದೆ. ಇದು ಈ ಪ್ರಕಾರ ಆಗುತ್ತಾ ಇದೆ. ನಮ್ಮ ಮಿನಿಸ್ಟರ್ ಹಾಗೆ ಇಲ್ಲ. ಅವರಿಗೆ ವಾಸ್ತವಿಕವಾಗಿ ಏನಿದೆ, ಏನು ದುಃಖ ಇದೆ, ಏನು ಪರಿಸ್ಥಿತಿ ಇದೆ ಎಂದು ಅವರಿಗೆ ಗೊತ್ತು, ಅದನ್ನು ತಿಳಿದುಕೊಂಡು ಮಾನ್ಯ ಮುಖ್ಯಮಂತ್ರಿಗಳು ಡ್ರೈಲ್ಯಾಂಡ್ ಇನ್‌ಕಂ ಟ್ಯಾಕ್ಸ್ ಬೇಡ ಎಂದು ಹೇಳಿದರು. ನಮ್ಮ ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತೇನೆ. ಈ ಪ್ರಕಾರ ನಡೆಯುವಾಗ ದಯಮಾಡಿ ನಿಮ್ಮ ಉದ್ದೇಶ ಪೂರ್ತಿಗಾಗಿ ಈ ಪ್ರಕಾರ ಮಾಡಬೇಕು ಎಂದು ನಾನು ಹೇಳುತ್ತಾ ಇದ್ದೇನೆ. ಇವತ್ತಿನ ದಿವಸ ನಾನು ಬಹಳ ಸಂತೋಷದಿಂದ ಹೇಳುತ್ತೇನೆ. ಏನೆಂದರೆ, ನಮ್ಮ ಕಡೆ ಮುಸ್ಕರಿಗಳು ಎಂದು ಹೇಳುತ್ತಾರೆ, ಇಲ್ಲಿ ಅವರಿಗೆ ತಳವಾರ್ ಎಂದು ಹೇಳುತ್ತಾರೆ, ಈ ಮುಸ್ಕರಿಗಳು ೭೫ ರೂಪಾಯಿ ಕೊಡಬೇಕು ಎಂದು ಮಾಡಿದರು. ಆದುದರಿಂದ ಇವರನ್ನು ಖಾಲಾಸೆ ಮಾಡಬೇಕು ಎಂದು ನಾನು ಕೇಳಿಕೊಳ್ಳು

ತ್ತೇನೆ. ಮಾನ್ಯ ಮಂತ್ರಿಗಳು ತಮ್ಮ ಉತ್ತರದಲ್ಲಿ ಇವರ ಬಗ್ಗೆ ಹೇಳಬೇಕು ಎಂದು ನಾನು ಕೇಳಿಕೊಳ್ಳು ತ್ತೇನೆ. It is said that those persons who are not having any land and if their income is less than Rs. 4,500– ಅದನ್ನು ಸ್ವಲ್ಪ ಖುಲಾಸೆ ಮಾಡಬೇಕು. ಯಾರಿಗೆ ೨ ಎಕರೆ ಭೂಮಿ ಇದೆ, ಒಂದು ಸಾವಿರ ರೂಪಾಯಿ ಇನ್‌ಕಂ ಇಲ್ಲ, ಇದ್ದರೂ ಲ್ಯಾಂಡ್ ಬಿಡುವುದಕ್ಕೆ ಸಾಧ್ಯವಿಲ್ಲ. ಆದುದರಿಂದ ಅದನ್ನು ಖುಲಾಸೆ ಮಾಡಿ. ಯಾರಿಗೆ ಲ್ಯಾಂಡ್ ಇರಲಿ ಇಲ್ಲದಿರಲಿ ಯಾರ ಇನ್‌ಕಂ ೪೫೦೦ ರೂಪಾಯಿಗಿಂತ ಕಡಿಮೆ ಇದೆ ಅಂಥವರು ನಮ್ಮ ರಾಜ್ಯದಲ್ಲಿ ೨೦ ಸಾವಿರ ಜನ ಇದ್ದಾರೆ. ಅವರಿಗೆ ಈ ಪ್ರಕಾರ ಕೊಟ್ಟರೆ ಒಳ್ಳೆಯದು ಎಂದು ನಾನು ಸಲಹೆ ಮಾಡುತ್ತಿದ್ದೇನೆ. ಇದರ ಜೊತೆಗೆ ಪೋಲೀಸ್ ಪಟೇಲರುಗಳಿಗೆ, ಪಟ್ವಾರಿಗಳಿಗೆ ೧೦ ವರ್ಷಗಳಿಂದ ಲಂಸಂ ಅಮೌಂಟ್ ಕೊಟ್ಟಿದ್ದೀರಿ, ಅವರಿಗೆ ಪೆನ್‌ಷನ್ ಅಥವಾ ಕಾಂಪನ್‌ಸೇಷನ್ ಕೊಡಬೇಕು. ಬಹಳಷ್ಟು ಜನ ಮೊದಲಿನಿಂದಲೂ ಕೆಲಸ ಮಾಡುತ್ತಿದ್ದಾರೆ. ೫೦ ವರ್ಷಗಳಿಂದ. ೪೦ ವರ್ಷಗಳಿಂದ. ೨೩ ವರ್ಷಗಳಿಂದ ಇವರಿಗೆ ಯಾವುದೇ ಪ್ರಕಾರ ಪೆನ್‌ಷನ್ ಇಲ್ಲ. ಆದುದರಿಂದ ಇವರಿಗೆ ಪೆನ್‌ಷನ್ ಕೊಡುವ ಬಗ್ಗೆ ವಿಚಾರ ಮಾಡಬೇಕು ಎಂದು ನಾನು ಸಲಹೆ ಮಾಡುತ್ತಿದ್ದೇನೆ. ತಮಗೆ ನಮ್ರವಾಗಿ ವಿನಂತಿ ಮಾಡಿಕೊಳ್ಳುತ್ತೇನೆ. ಏನೆಂದರೆ, ಪೋಲೀಸ್ ಪಟೇಲರ ಜಾಗದಲ್ಲಿ ಯಾರು ದಳಪತಿ ಎಂದು ಕೆಲಸ ಮಾಡುತ್ತಿದ್ದಾರೆ, They must be given the salaries and other benefits. Then only we can expect good work from them. We must try to improve their scales of pay. ಅವರು ಎಷ್ಟು ಸಾರಿ ವಿನಂತಿ ಮಾಡಿಕೊಂಡರೂ ಬರಲಿಲ್ಲ. ಹೋದಸಾರಿ ಸರ್ಕಾರ ವಿಚಾರ ಮಾಡುತ್ತೇವೆಂದು ಪ್ರಾಮಿಸ್ ಮಾಡಿತ್ತು, ಇನ್ನೂ ವಿಚಾರ ಮಾಡಲಿಲ್ಲ. ಈ ಪ್ರಕಾರ ಕೆಲಸ ಮಾಡಿದರೆ ಅದು ಸಾಧ್ಯವಾಗುವುದಿಲ್ಲ. ಕರಪ್ಟ್ ಕಲಿಸಿದಂತಾಗುತ್ತದೆ. ಆದುದರಿಂದ ದಳಪತಿಗಳಿಗೆ ಸ್ಯಾಲರಿ ಫಿಕ್ಸ್ ಮಾಡಬೇಕು, ಸ್ಟೈಫಂಡರಿ ಗ್ರಾಜುಯೇಟ್ಸ್ ಏನಿದ್ದಾರೆ, ಆ ಪ್ರಕಾರ ಮಾಡಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಬಹಳ ಸಂತೋಷದಿಂದ ಹೇಳಬೇಕಾಗಿದೆ, ನಮ್ಮ ರಾಜ್ಯದಲ್ಲಿ ಏನು ರಿಜರ್ವೇಷನ್ ಪಾಲಿಸಿ ಇಟ್ಟಿದ್ದೀರಿ ಅದು ತಮಗೆಲ್ಲಾ ಗೊತ್ತಿದೆ ಹಾವನೂರ್ ರಿಪೋರ್ಟನ್ನು ಜಾರಿಗೆ ತರಬಾರದೆಂದು ಎಷ್ಟೊಂದು ಚಳುವಳಿ ನಮ್ಮ ರಾಜ್ಯದಲ್ಲಿ ನಡೆಯಿತು. ಇಡೀ ರಾಜ್ಯಾದ್ಯಂತ ಅದರ ವಿರುದ್ಧ ಪ್ರೊಸೆಷನ್‌ಗಳು, ಅಜಿಟೇಷನ್‌ಗಳು ಉಂಟಾದ ಮೇಲೆ ಮಾನ್ಯ ಶ್ರೀಮತಿ ಇಂದಿರಾಗಾಂಧಿಯವರು ೪ನೇ ಮಾರ್ಚ್ ೧೯೮೨ ರಂದು ರಾಜ್ಯ ಸಭೆಯಲ್ಲಿ ಮಾತನಾಡುತ್ತಾ ಏನು ಹೇಳಿದರು ಎಂದರೆ ಜಾತಿ ಹೆಸರಿನಲ್ಲಿ ಏನು ರಿಜರ್ವೇಷನ್ ಏನಿದೆ ಅದು ಹೋಗಬೇಕು. "It is not ideal and it creates confusion and caste feelings and that is why it should go." ಅದರ ಬದಲು ಆರ್ಥಿಕ ದೃಷ್ಟಿಯಿಂದ ಯಾರು ಹಿಂದುಳಿದ್ದಾರೆ ಅದರ ಆಧಾರದ ಮೇಲೆ ಸರ್ಕಾರ ಗಮನಕ್ಕೆ ತೆಗೆದುಕೊಳ್ಳಬೇಕು ಎನ್ನತಕ್ಕ ಮಾತನ್ನು ಹೇಳಿದ್ದಾರೆ. ಮಾನ್ಯ ಹಾವನೂರ್‌ರವರ ವರದಿ ಬಂದಾಗ ನಾನು ಆಗ ಅದನ್ನು ಸುಟ್ಟು ಹಾಕಿ ಏತಕ್ಕೆ ಪ್ರತಿಭಟನೆ ಮಾಡಿದ್ದೇ ಎಂದರೆ ಇದರಿಂದ ನಮ್ಮ ದೇಶದಲ್ಲಿ ಕ್ಯಾಸ್ಟಿಜಂ ಬೆಳೆಯುತ್ತದೆ, ದೇಶ ಹಾಳಾಗ ತ್ತದೆ ಎನ್ನತಕ್ಕ ಮಾತನ್ನು ಹೇಳಿದ್ದೆ. ವೀರಶೈವರು ಸಹ ಮುಖ್ಯಮಂತ್ರಿಗಳವರನ್ನು ಕಂಡು ನಮಗೂ ರಿಜರ್ವೇಷನ್ ಕೊಡಬೇಕೆಂದು ಕೇಳಿದ್ದಾರೆ ಆದರೆ ಅದನ್ನು ನಾನು ಅಪೋಜ್ ಮಾಡುತ್ತೇನೆ. ಏತಕ್ಕೆಂದರೆ ನಮ್ಮ ದೇಶದಲ್ಲಿ ೫ ಸಾವಿರ ವರ್ಷಗಳಿಂದ ನಡೆದುಕೊಂಡು ಬಂದಿರತಕ್ಕ ಚರಿತ್ರೆಯನ್ನು ನಾವು ನೋಡುವು ದಾದರೆ ಜಾತಿಯ ಕಲಹದಿಂದ ಏನೇನು ಅನಾಹುತಗಳು ಆಗಿ ಹೋಗಿವೆ ಎಂಬುದು ಎಲ್ಲರಿಗೂ ಗೊತ್ತಿರ ತಕ್ಕ ವಿಚಾರವೇ ಆಗಿದೆ. ಅದರಿಂದ ನಮ್ಮ ದೇಶದ ಯೂನಿಟಿ ಕೂಡ ಹಾಳಾಗಿ ಹೋಗುತ್ತದೆ, ಆದುದ ರಿಂದ ಕ್ಯಾಸ್ಟಿಜಂ ಹೋಗಬೇಕು, ನೀವು ಕ್ಯಾಸ್ಟಿಜಂನ್ನು ಬೆಳೆಸಿಕೊಂಡು ಹೋಗುವುದಾದರೆ ದೇಶ ಹಾಳಾ ಗುತ್ತದೆಂದು ಹೇಳಬಯಸುತ್ತಿದ್ದೇನೆ. ಇದರಿಂದಾಗಿ ಏನಾಗಿದೆ ಎಂದರೆ ಇವತ್ತಿನ ದಿವಸ ನಮ್ಮ ದೇಶದಲ್ಲಿ ಸಿಕ್ಕರು ಸಿಖ್ ಪ್ರಾಂತವನ್ನು ಕೇಳುತ್ತಿದ್ದಾರೆ, ನೇಪಾಳಿಗಳು ಅವರು ಅವರ ರಾಜ್ಯವನ್ನು ಕೇಳುತ್ತಿದ್ದಾರೆ, ಮುಸ್ಲಿಮರು ಅವರು ಸಹ ನಾಳೆಯ ಒಂದು ದಿವಸ ಪ್ರತ್ಯೇಕ ರಾಜ್ಯವೇ ಬೇಕು ಎಂದು ಬೇಡುತ್ತಾರೆ...

ಒಬ್ಬ ಸದಸ್ಯರು.— ನಾವು ಆ ರೀತಿಯಾಗಿ ಪ್ರತ್ಯೇಕ ರಾಜ್ಯ ಬೇಕೆಂದು ಕೇಳಿಲ್ಲ...

ಶ್ರೀ ಭೀಮಣ್ಣ ಖಂಡ್ರೆ.— ನನ್ನ ಹತ್ತಿರ ಪ್ರತಿಯೊಂದು ರೆಕಾರ್ಡ್ ಇದೆ. ಅದರ ಆಧಾರದ ಮೇಲೆಯೇ ನಾನು ಮಾತನಾಡುತ್ತಿರುವುದು. ಆದುದರಿಂದ ಇವತ್ತಿನ ದಿವಸ ನಮ್ಮ ದೇಶದಲ್ಲಿ ಯೂನಿಟಿ ಉಳಿಯಬೇಕಾಗಿದ್ದರೆ, ದೇಶ ಬೆಳೆಯಬೇಕಾಗಿದ್ದರೆ, ರಾಷ್ಟ್ರೀಯತೆ ಬೆಳೆಯಬೇಕಾಗಿದ್ದರೆ ಇವತ್ತಿನ ದಿವಸ ಜಾತೀಯತೆ ಹೋಗಲೇಬೇಕಾಗಿದೆಂದು ನಾನು ಮೊದಲಿನಿಂದಲೂ ಹೇಳುತ್ತಿದ್ದೇನೆ, ಇವತ್ತೂ ಹೇಳುತ್ತಿ ದ್ದೇನೆ. ನನಗೆ ಮಾಹಿತಿ ಬಂದಿರುವ ಪ್ರಕಾರ ರಾಷ್ಟ್ರಪತಿಯವರು, ಉಪ ರಾಷ್ಟ್ರಪತಿಯವರು ಜನತಾ

ನಾಯಕರು, ಕಾಂಗ್ರೆಸ್ ನಾಯಕರುಗಳೂ ಎಲ್ಲಾ ಇವತ್ತಿನ ದಿವಸ ಜಾತೀಯತೆ ಹೋಗಬೇಕೆಂದು ಹೇಳುತ್ತಿದ್ದಾರೆ ಇದರ ಜೊತೆಗೆ ಬಹಳ ಸಂತೋಷದ ಸಂಗತಿ ಹೇಳುವುದಾದರೆ ನಮ್ಮ ಪ್ರೈಮ್ ಮಿನಿಸ್ಟರ್‌ರವರಾದ ಶ್ರೀಮತಿ ಇಂದಿರಾಗಾಂಧಿಯವರು ಏನಿದ್ದಾರೆ. ಯಾರ ಕೈಯಲ್ಲಿ ಇಡೀ ರಾಷ್ಟ್ರದ ಅಧಿಕಾರವೇ ಇದೆ ಮತ್ತೆ ಯಾರು ಮನಸ್ಸು ಮಾಡಿದರೆ ಆಗಬಹುದೋ ಅವರೇ ಒಂದು ಹೇಳಿಕೆಯನ್ನು ಇದರ ಬಗ್ಗೆ ಮೊನ್ನೆ ರಾಜ್ಯ ಸಭೆಯಲ್ಲಿ ಕೊಟ್ಟಿದ್ದಾರೆ. ಇದರ ಬಗ್ಗೆ ಕೇಂದ್ರ ಸರ್ಕಾರದವರು ಒಂದು ಮಂಡಲ್ ಕಮಿಟಿಯನ್ನು ಸಹ ನೇಮಕ ಮಾಡಿದ್ದಾರೆ, ಅವರ ವರದಿ ಬಂದ ನಂತರ ಅದನ್ನು ಸಂಪೂರ್ಣವಾಗಿ ಜಾರಿಗೆ ತರುತ್ತಾರೆ ಎನ್ನತಕ್ಕ ವಿಶ್ವಾಸ ನನಗಿದೆ, ಪ॥ ಜವಹರ್‌ಲಾಲ್ ನೆಹರೂರವರ ಕಾಲದಲ್ಲಿಯೂ ಸಹ ಕಾಕಾ ಕಾಲೇಲ್ಕರ್‌ರವರು ವರದಿಯನ್ನು ಕೊಟ್ಟಾಗ ಜಾತಿ ಆಧಾರದ ಮೇಲೆ ಮಾಡಿದರೆ ದೇಶ ಕೆಟ್ಟು ಹೋಗುತ್ತದೆಂದು ಆಗ ಅವರೂ ಸಹ ಒಪ್ಪಿರಲಿಲ್ಲ, ಈ ದೇಶದ ಯಾವ ಜನತೆಯೂ ಸಹ ಅದನ್ನು ಒಪ್ಪುವುದಿಲ್ಲ. ಆದುರಿಂದ ಆರ್ಥಿಕ ಪರಿಸ್ಥಿತಿಯನ್ನು ಆಧಾರವಾಗಿಟ್ಟುಕೊಂಡು ಮಾಡಬೇಕೆಂದು ಏನು ೭೯-೮೦ ಲೆಜಿಸ್ಲೇಚರ್‍ಸ್ ಇವತ್ತಿನದಿವಸ ಮಾನ್ಯ ಮುಖ್ಯಮಂತ್ರಿಗಳವರಿಗೆ ಮತ್ತುಮಾನ್ಯ ಪ್ರಧಾನಮಂತ್ರಿಯವರಿಗೂ ಮನವಿಗಳನ್ನು ಸಲ್ಲಿಸಿದ್ದಾರೆ. ಅದರ ಬಗ್ಗೆ ವಿಚಾರ ಮಾಡಿ, ಏತಕ್ಕೆಂದರೆ ಈಗಿರುವ ಪಾಲಿಸಿ ಸರಿಯಾಗಿಲ್ಲ, ಯಾರು ಯಾರು ಯಾವ ಜಾತಿಯಲ್ಲಿಯೇ ಆಗಲಿ ಗರೀಬರು ಇದ್ದಾರೆ, ಯಾರು ಆರ್ಥಿಕವಾಗಿ ಹಿಂದುಳಿದಿದ್ದಾರೆ ಅಂಥವರನ್ನು ಮುಂದುವರಿಸುವುದಕ್ಕೆ ಎಲ್ಲಾ ಸೌಭಾಗ್ಯವನ್ನೂ ಒದಗಿಸಿ ಕೊಡಿ. ಇವತ್ತಿನ ದಿವಸ ನಾವು ಏನು ಸಮತಾವಾದವೆಂದು ಹೇಳುತ್ತೇನೆ ಅದಕ್ಕಾಗಿ ಟಾಟಾ, ಬಿರ್ಲಾರವರಂಥರವರ ಹತ್ತಿರ ಏನು ಸಂಪತ್ತು ಇದೆ ಅದನ್ನು ಎಲ್ಲರಿಗೂ ಹಂಚಿ ನಾವು ಬೇಡವೆಂದು ಹೇಳುವುದಿಲ್ಲ ಅದಕ್ಕೆ ನಮ್ಮ ಸಂಪೂರ್ಣವಾದ ಬೆಂಬಲ ತಮಗಿದೆಂದು ಹೇಳಬಯಸುತ್ತೇನೆ. ಈ ದೇಶವನ್ನು ಸೆಕ್ಯೂಲರಿಜಿಂ ಸ್ಟೇಟ್ ಎಂದು ಹೇಳಿ ಜಾತಿ ಆಧಾರದ ಮೇಲೆ ನಡೆಸುವುದು ಸರಿಯಲ್ಲ ಇದರಿಂದ ದೇಶದಲ್ಲಿ ಅರಾಜಕತೆ, ಅಶಾಂತತೆ ಉಂಟಾಗುತ್ತದೆ, ನ್ಯಾಶನಾಲಿಟಿ ಉಳಿಯುವುದಿಲ್ಲ ಆದುದರಿಂದ ಇದರ ಬಗ್ಗೆ ಮಾನ್ಯ ಪ್ರಧಾನ ಮಂತ್ರಿಗಳವರು ಹೇಳಿರತಕ್ಕ ಮಾತು ಏನಿದೆ ಅದನ್ನು ನಿಜವಾಗಿಯೂ ಮೆಚ್ಚತಕ್ಕ ಮಾತಾಗಿದೆ. ಅದೇ ರೀತಿ ಮಾನ್ಯ ಮುಖ್ಯಮಂತ್ರಿಗಳವರು ನಡೆದುಕೊಳ್ಳಬೇಕು, ಮತ್ತು ಅದರ ಬಗ್ಗೆ ಸರಿಯಾದ ಡಿಸಿಷನ್ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ. ಆಮೇಲೆ ಇನ್ನೊಂದು ಮುಖ್ಯವಾದ ವಿಷಯವನ್ನು ಮಾನ್ಯ ಅರ್ಥ ಮಂತ್ರಿಗಳವರಲ್ಲಿ ಕೇಳಿಕೊಳ್ಳುವುದೇನೆಂದರೆ ನಮ್ಮಲ್ಲಿ ಇರುವ ಕಾರಂಜಾ ಪ್ರಾಜೆಕ್ಟ್ ಬಗ್ಗೆ ನಿಮ್ಮ ವರದಿಯಲ್ಲಿ ಏನೂ ಹೇಳಿಲ್ಲ, ಮತ್ತೆ ನಮ್ಮ ಭಾಗದಲ್ಲಿರುವ ರೋಡ್‌ಗಳು ಯಾವ ಪರಿಸ್ಥಿತಿಯಲ್ಲಿದೆ ಎಂಬುದು ಮಾನ್ಯ ಉಪಾಧ್ಯಕ್ಷರಿಗೂ ಚೆನ್ನಾಗಿ ಗೊತ್ತಿದೆ. ಬಸವಕಲ್ಯಾಣದಿಂದ ಭಾಲ್ಕಿಗೆ ಹೋಗುವುದಕ್ಕೆ ೪ ತಿಂಗಳ ಕಾಲ ದಾರಿಯೇ ಇರುವುದಿಲ್ಲ. ಇವತ್ತು ಬೀದರ್ ತಾಲ್ಲೂಕಿನಲ್ಲಿ ಒಂದು ತಾಲ್ಲೂಕು ಹೆಡ್ ಕ್ವಾಟರ್‍ಸ್‌ನಿಂದ ಇನ್ನೊಂದು ತಾಲ್ಲೂಕಿನ ಹೆಡ್ ಕ್ವಾಟರ್‍ಸ್‌ಗೆ ಹೋಗುವುದಕ್ಕೆ ದಾರಿನೇ ಇಲ್ಲದೇ ಇರುವುದರಿಂದ ಇದರ ಬಗ್ಗೆ ಮಾನ್ಯ ಪಿಡಬ್ಲ್ಯೂಡಿ ಮಂತ್ರಿಯವರು ಗಮನಹರಿಸಬೇಕು. ಆದರೆ ಮಾನ್ಯ ಕಾಗೋಡು ಮಂತ್ರಿಯವರು ಇಲ್ಲಿ ಇಲ್ಲ ಎಲ್ಲಿ ಹೋಗಿದ್ದಾರೋ ಗೊತ್ತಿಲ್ಲ. ಅವರು ಇದರ ಕಡೆಗೆ ಗಮನಹರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಇದರ ಬಗ್ಗೆ ನಾವು ಸೆಂಟ್ರಲ್ ಮಿನಿಸ್ಟರ್ ಶ್ರೀ ವೀರೇಂದ್ರಪಾಟೀಲ್‌ರವರನ್ನು ಭೇಟ್ಟಿಯಾದಾಗ ನಾವು ರಾಜ್ಯ ಸರ್ಕಾರಕ್ಕೆ ಕೊಡಬೇಕಾಗಿರತಕ್ಕ ಹಣವನ್ನು ಕೊಟ್ಟಿದ್ದೇವೆ ಆದುದರಿಂದ ನೀವು ರಾಜ್ಯ ಸರ್ಕಾರದಿಂದ ಹಣ ಪಡೆದುಕೊಂಡು ರಸ್ತೆಯನ್ನು ಮಾಡಿಸಿಕೊಳ್ಳಿ ಎಂದು ಹೇಳುತ್ತಾರೆ ಮಾನ್ಯ ಶ್ರೀ ಕಾಗೋಡು ತಿಮ್ಮಪ್ಪನವರನ್ನು ಕೇಳಿದರೆ ಅವರು ಕೇಂದ್ರ ಸರ್ಕಾರದಿಂದ ಹಣ ಬರಬೇಕೆಂದು ಹೇಳುತ್ತಾರೆ. ಹೀಗಾಗಿ ಇವತ್ತಿನ ದಿವಸ ನಮಗೆ ರಸ್ತೆ ಇಲ್ಲದ ಹಾಗಾಗಿದೆ ಆದುದರಿಂದ ಇದರ ಕಡೆಗೆ ಸರ್ಕಾರ ಲಕ್ಷ್ಯ ನೀಡಬೇಕೆಂದು ಒತ್ತಾಯಪಡಿಸಿ. ಇನ್ನು ಕೊನೆಯದಾಗಿ ಪ್ರಾಹಿಬಿಷನ್ ಬಗ್ಗೆ ಹೇಳಬೇಕೆಂದರೆ ಬಡ್ಜೆಟ್‌ನಲ್ಲಿ ಒಂದೂ ವರ್ಡ್‌ನ್ನೂ ಸಹ ಹೇಳಿಲ್ಲ. ವಾಸ್ತವಿಕವಾಗಿ ಹೇಳಬೇಕೆಂದರೆ ಇವತ್ತು ನೀವು ಇದನ್ನು ತಡೆಗಟ್ಟದೇ ಜನತೆಯನ್ನೂ ಇನ್ನೂ ಕುಡಿಯುವುದನ್ನು ಕಲಿಸುತ್ತಿದ್ದೀರಿ, ನೈತಿಕ ದೃಷ್ಟಿಯಿಂದ ಇದು ಸರಿಯಾದುದಲ್ಲವೆಂದು ಇಷ್ಟು ಹೇಳಿ, ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಜೆ. ಎಚ್. ಪಟೇಲ್ (ಚನ್ನಗಿರಿ).— ಸನ್ಮಾನ್ಯ ಉಪಾಧ್ಯಕ್ಷರೇ, ಈ ವರ್ಷದ ಆಯವ್ಯಯ ಪತ್ರದ ಮೇಲೆ ವಿವರಗಳನ್ನು ಈಗಾಗಲೇ ಸಾಕಷ್ಟು ವಿರೋಧ ಪಕ್ಷದ ನಾಯಕರು ಮತ್ತಿತರ ಸದಸ್ಯರುಗಳು ಮಾತನಾಡಿ ತಿಳಿಸಿದ್ದಾರೆ. ಮಾನ್ಯ ಸಚಿವರೇ ಹೇಳಿರುವ ಪ್ರಕಾರವೇ ಇನ್ನೂ ಬಹಳಷ್ಟು ಕೆಲಸ ಆಗುವುದು ಇದೆ, ಮತ್ತು ಏನೇನನ್ನು ಸಾಧಿಸಬೇಕೆಂದಿದ್ದೇವೆ ಎನ್ನುವುದನ್ನು ಹೇಳಿದ್ದಾರೆ. ಅವರು ಹೋದ ವರ್ಷ ಹೇಳಿದ ಘೋಷಣೆಗೂ ಅವರು ವಾಸ್ತವಿಕವಾಗಿ ಮಾಡಿರತಕ್ಕ ಕೆಲಸಕ್ಕೂ ಎಷ್ಟು ವ್ಯತ್ಯಾಸವಿದೆ ಎಂಬುದನ್ನು ಮಾತ್ರ ತೋರಿಸುವುದಕ್ಕೆ ಇಷ್ಟಪಡುತ್ತೇನೆ.

ಭೂ ಸುಧಾರಣೆಯ ಕ್ಷೇತ್ರದಲ್ಲಿ ಅವರು ಮಾಡಿರತಕ್ಕ ಪ್ರಗತಿಯ ಸಾಧನೆಯನ್ನು ಮೆಚ್ಚಿದ್ದೇನೆ. ಏತಕ್ಕೆಂದರೆ ಅವರು ಏನೇನು ಕೆಲಸ ಮಾಡಿಲ್ಲವೆಂದು ಹೇಳದೇ ಅವರು ಮಾಡಿರತಕ್ಕ ೨-೩ ವಿಷಯಗಳ ಬಗ್ಗೆ ಮೊದಲು ಹೇಳಬಯಸುತ್ತೇನೆ. ಅನಂತರ ಸ್ಪೋರ್ಟ್‌ಮೆನ್‌ಗಳೇನಿದ್ದಾರೆ ಕ್ರಿಕೆಟ್, ಬ್ಯಾಡ್ ಮಿಂಟನ್, ಸ್ನೂಕರ್ಸ್‌ಗಳು ನಮ್ಮ ರಾಜ್ಯಕ್ಕೆ ಒಳ್ಳೆಯ ಹೆಸರನ್ನು ಕೀರ್ತಿಯನ್ನು ತಂದಿದ್ದಾರೆ ಅದಕ್ಕಾಗಿ ಅವರಿಗೆ ಪ್ರೋತ್ಸಾಹ ನೀಡತಕ್ಕ ಕೆಲಸವನ್ನು ಏನು ಮಾಡಿದ್ದಾರೆ ಅದು ಬಹಳ ಒಳ್ಳೆಯ ಕೆಲಸ ಮಾಡಿದ್ದಾರೆ

ಇವರು ಕೆಲವು ಘೋಷಣೆಗಳನ್ನು ಮಾಡಿದ್ದಾರೆ, ಅದರಲ್ಲಿ 'ನೇಗಿಲ ಭಾಗ್ಯ' ಎಂಬುದು ಒಂದು ಇದರ ಉದ್ದೇಶ ಬಹಳ ಒಳ್ಳೆಯದು. ಗೇಣೀದಾರರಾದ್ದರಿಂಥವರಿಗೆ ಮತ್ತು ಭೂರಹಿತರಾಗಿದ್ದವರಿಗೆ ಭೂಮಿ ಸಿಕ್ಕಿದ ಮೇಲೆ ಆ ಭೂಮಿಯನು ಅಭಿವೃದ್ಧಿ ಮಾಡುವುದಕ್ಕೋಸ್ಕರ ಒಂದು ಯೋಜನೆಯನ್ನು ರೂಪಿಸಲಾಗಿದೆ ಎಂದು ಹೇಳಿದ್ದಾರೆ. ಈ ಯೋಜನೆಗೂ ಮತ್ತು 'ಸಾಗರದೀಪ, ಯೋಜನೆಗೂ ಹೋಲಿಸಿದರೆ ಇದರ ವ್ಯತ್ಯಾಸ ಗೊತ್ತಾಗುತ್ತದೆ. ನೇಗಿಲ ಭಾಗ್ಯ ಯೋಜನೆ ಎಂಬ ಒಂದು ಅವರ ಆಶಯವನ್ನು ವ್ಯಕ್ತಪಡಿಸಿದ್ದಾರೆ ಆದರೆ ಅದಕ್ಕೆ ನಿಶ್ಚತವಾಗಿ ಯಾವುದೇ ಹಣಕಾಸಿನ ವ್ಯವಸ್ಥೆಯನ್ನು ಮಾಡಿಲ್ಲ. ಬರೀ ಉದ್ದೇಶವನ್ನು ಹೇಳಿದ್ದಾರೆ. ಅವರು ಹೇಳಿರತಕ್ಕ ಘೋಷಣೆಗಳಿಗೆ ಬೇಕಾದ ಹಣಕಾಸಿನ ವ್ಯವಸ್ಥೆ ಮಾಡಿಕೊಂಡಿರುವುದು ಮಾತ್ರ ಇಲ್ಲ. ಆದರೆ 'ಸಾಗರ ದೀಪ' ಯೋಜನೆಗೆ ಮಾತ್ರ ಈ ರೀತಿ ಹೇಳಿದ್ದಾರೆ.

> "ಕಡಲತೀರದಿಂದ ೫ ಕಿಲೋಮಿಟರ್ ಅಂತರದಲ್ಲಿರುವ ಜಲ ಪ್ರದೇಶವನ್ನು ಈ ಪರಂಪರಾಗತ ಬೆಸ್ತರ ಪೂರ್ಣ ಉಪಯೋಗಕ್ಕಾಗಿ ಮೀಸಲಿರಿಸಲು ಒಂದು ಶಾಸನವನ್ನು ರಚಿಸಲು ಆಲೋಚಿಸುತ್ತಿದೆ. ಇದಕ್ಕಾಗಿ ಬಜೆಟ್‌ನಲ್ಲಿ ೨೩೬ ಲಕ್ಷ ರೂಪಾಯಿ ಒದಗಿಸಿದೆ. ಕರ್ನಾಟಕದಲ್ಲಿ ಕಡಲು ಮೀನುಗಾರರಿಗೆ ಅಭಿವೃದ್ಧಿಗಾಗಿ ೩೩.೨ ಕೋಟಿ ರೂಪಾಯಿಗಳ ವೆಚ್ಚದ ಒಂದು ಯೋಜನೆಯನ್ನು ರೂಪಿಸಲಾಗಿದ್ದು, ೧೯೮೨-೮೩ರಲ್ಲಿ ಇದನ್ನು ಕಾರ್ಯಗತ ಗೊಳಿಸುವ ನಿರೀಕ್ಷೆ ಇದೆ.

ಹೀಗೆ ಇಲ್ಲಿ ಬೆಸ್ತರ ಹಿತರಕ್ಷಣೆಯನ್ನು ಆಲೋಚನೆ ಮಾಡಿ ೨೩೬ ಲಕ್ಷ ರೂಪಾಯಿಗಳನ್ನು ಈ ಒಂದು ಯೋಜನೆಗಾಗಿ ಒದಗಿಸಿದ್ದೀರಿ ಮತ್ತು ಮುಂದಿನ ಅಭಿವೃದ್ಧಿ ಕಾರ್ಯಗಳಿಗಾಗಿ ೩೩.೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವವರಿದ್ದೀರಿ. ಮುಂದೆ ಖರ್ಚು ಮಾಡುತ್ತೀರಾ ಬಿಡುತ್ತೀರಾ ಆ ವಿಷಯ ಇರಲಿ. ಆದರೆ ಈಗ ನೀವು ೨.೩೬ ಕೋಟಿ ರೂಪಾಯಿಗಳನ್ನು ಹೇಗೆ ಈ ಒಂದು ಯೋಜನೆಗಾಗಿ ಇಟ್ಟಿದ್ದೀರೋ ಹಾಗೆ ನೀವು ಹೇಳಿರತಕ್ಕ 'ನೇಗಿಲ ಭಾಗ್ಯವಾಗಲಿ, ಆಶಾಕಿರಣವಾಗಲಿ, ಬೃಹತ್ ಕಲ್ಯಾಣವಾಗಲಿ ಅಥವಾ ಯಾವುದೇ ಯೋಜನೆಗಾಗಲಿ ಏಕೆ ಹಣವನ್ನು ಒದಗಿಸಲಿಲ್ಲ? ಇವುಗಳ ಬಗ್ಗೆ ನಿಮ್ಮ ಮನಸ್ಸಿನಲ್ಲಿರುವ ಇಚ್ಛೆಯನ್ನು ಮಾತ್ರ ವ್ಯಕ್ತಪಡಿಸಿದ್ದೀನೆ, ಆದರೆ ಅವಕ್ಕೆ ಬೇಕಾದ ಹಣಕಾಸಿನ ವ್ಯವಸ್ಥೆಯನ್ನು ಮಾಡಿಕೊಂಡಿಲ್ಲ. ಹಿಂದೆ ಹಣಕಾಸಿನ ವ್ಯವಸ್ಥೆಯನ್ನು ಮಾಡಿಕೊಳ್ಳದೆ ರೂಪಿಸಲಾದ ಎಷ್ಟೋ ಯೋಜನೆಗಳು ಏನಾಗಿವೆ ಎಂಬುದು ನಮ್ಮ ಅನುಭವಕ್ಕೆ ಬಂದಿದೆ. ಈಗ ನೀವು ಹೇಳಿರತಕ್ಕ ೫ ಘೋಷಣೆಗಳ ಪೈಕಿ 'ಸಾಗರದೀಪ' ಒಂದಕ್ಕೆ ಮಾತ್ರ ಹಣಕಾಸಿನ ವ್ಯವಸ್ಥೆಯನ್ನು ಮಾಡಿಕೊಂಡಿದ್ದೀರಿ ಅದರಂತೆ ಬೇರೆ ಯೋಜನೆಗಳ ಬಗ್ಗೆ ಏಕೆ ಯೋಚನೆ ಮಾಡಲಿಲ್ಲ? ಇದು ಜನಸಾಮಾನ್ಯರ ಅವಶ್ಯಕತೆಗಳನ್ನು ಪೂರೈಸತಕ್ಕ ಆಯವ್ಯಯ ಪತ್ರ ಎಂದು ಹೇಳಿದ್ದೀರಿ. ಇದರೆ ವಾಸ್ತವಿಕವಾಗಿ ನಿಮ್ಮ ಆರ್ಥಿಕ ಸಮೀಕ್ಷೆಯಲ್ಲಿ ನೀವು ಹೇಳಿದ ಮಾತಿಗೆ ತದ್ವಿರುದ್ಧವಾದ ಚಿತ್ರ ಕಾಣುತ್ತದೆ. ಅದರ ಪುಟ ೧೯ರಲ್ಲಿ 'ಮಿನಿಮಂ

---

† Indicates that remarks or speeches have not been revised by the member concerned.

ನೀಡ್ಸ್ ಪ್ರೋಗ್ರಾಂ ಎಂದು ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ಹಾಕಿಕೊಂಡಿರುವ ಯೋಜನೆಯನ್ನು ನೋಡಿದರೆ ಸ್ಪಷ್ಟವಾಗುತ್ತದೆ. ನೀವು ರೂರಲ್ ಎಲೆಕ್ಟ್ರಿಫಿಕೇಷನ್ನಿಗಾಗಿ ಹಾಕಿರತಕ್ಕ ಯೋಜನೆ ೬೦ ಲಕ್ಷ ರೂಪಾಯಿನದು ಆದರೆ ಅಪ್ರೂವ್ ಆಗಿರುವುದು ೩೦ ಲಕ್ಷಕ್ಕೆ ಮಾತ್ರ. ಗ್ರಾಮಾಂತರ ಪ್ರದೇಶಗಳ ರಸ್ತೆಗಳಿಗಾಗಿ ಎಂದು ೫ ಕೋಟಿ ೮೩ ಲಕ್ಷ ರೂಪಾಯಿಗಳನ್ನು ಆಯವ್ಯಯದಲ್ಲಿ ಸೇರಿಸಿದ್ದೀರಿ. ಆದರೆ ಅಪ್ರೂವ್ ಆಗಿರುವುದು ೩ ಕೋಟಿಗೆ ಮಾತ್ರ. ಅದರಲ್ಲಿ ಅರ್ಧಕ್ಕಿಂತಲೂ ಕಡಿಮೆ ಹಣವನ್ನು ಖರ್ಚು ಮಾಡಿದ್ದೀರಿ. ಇದೇ ರೀತಿ ಎಲಿಮೆಂಟರಿ ಎಜುಕೇಷನ್, ರೂರಲ್ ಹೆಲ್ತ್, ರೂರಲ್ ವಾಟರ್ ಸಪ್ಲೈ, ರೂರಲ್ ಹೌಸಿಂಗ್ ಸ್ಕೀಂ, ಸ್ಲಂ ಕ್ಲಿಯರೆನ್ಸ್, ನ್ಯೂಟ್ರಿಷನ್ ಎಂದು ನಾನಾ ಯೋಜನೆಗಳನ್ನು ಹಾಕಿಕೊಂಡು ನಾವು ಇವನ್ನೆಲ್ಲ ಸಾಧಿಸಿದ್ದೇವೆಂದು ಹೇಳಿದ್ದೀರಿ, ಆದರೆ ಅವಕ್ಕೆ ತದ್ವಿರುದ್ಧವಾಗಿ ನೀವು ಅದರ ಅರ್ಧದಷ್ಟನ್ನು ಸಾಧಿಸಿಲ್ಲ. ಹಾಗಾದರೆ ನೀವು ಏನನ್ನು ಸಾಧಿಸಿದ್ದೀರಿ ? ನೀವು ಸಾಧಿಸಿರುವುದು ಕೆಲವು ಇವೆ. ಅವಕ್ಕೆ ನೀವು ಜವಾಬ್ದಾರರಲ್ಲ, ಜನತೆ ಜವಾಬ್ದಾರರು. ಆಗಿರುವ ಸಾಧನೆ ಏನು ಎಂದರೆ ಪ್ರಜಾಸಂಖ್ಯೆ ಜಾಸ್ತಿಯಾಗಿದೆ. ಅದಕ್ಕೆ ಜನರು ಅವರೇ ಸ್ವತಃ ಜವಾಬ್ದಾರರು. ಎರಡನೆಯದಾಗಿ ಕೃಷಿ ಉತ್ಪಾದನೆ ಜಾಸ್ತಿಯಾಗಿದೆ. ರೈತರಿಗೆ ನೀವು ಯಾವುದೇ ರೀತಿಯ ಸವಲತ್ತುಗಳನ್ನು ಅವರು ನಿರೀಕ್ಷಿಸಿದಂತೆ ಕೊಡದೆ ಹೋದರೂ, ನೀವು ಅವರಿಗೆ ಕೊಡತಕ್ಕ ಎಲ್ಲ ಕಷ್ಟಗಳನ್ನು ಕೊಟ್ಟಾಗ್ಯೂ ಅವರು ಉತ್ಪಾದನೆಯನ್ನು ಹೆಚ್ಚಿಸಿದ್ದಾರೆ. ಮೂರನೆಯದಾಗಿ ಕೈಗಾರಿಕೋದ್ಯಮದಲ್ಲಿ ಶ್ರಮಜೀವಿಗಳು (ಕೆಲಸ ಮಾಡತಕ್ಕವರು) ಏನಿದ್ದಾರೆ ಅವರು ಸಹ ದಿನೇ ದಿನೇ ಏರುತ್ತಿರುವ ಬೆಲೆಗಳಿಗೆ ಸಮಾನವಾಗಿ ಅವರಿಗೆ ಬರತಕ್ಕ ಕೂಲಿಯಲ್ಲಿ ಜೀವನ ಮಾಡುವುದು ಕಷ್ಟವಾಗಿದ್ದರೂ ಕೂಡ ಉತ್ಪಾದನೆಯನ್ನು ಹೆಚ್ಚು ಮಾಡಿದ್ದಾರೆ. ರೈತರು ಮತ್ತು ಕಾರ್ಮಿಕರು ಈ ಎರಡು ವರ್ಗದವರು ಮಾತ್ರ, ನೀವು ಅವರಿಗೆ ಏನು ಕಷ್ಟ ಕೊಟ್ಟರೂ ಅದನ್ನೆಲ್ಲ ಸಹಿಸಿಕೊಂಡು ಉತ್ಪಾದನೆ ಹೆಚ್ಚಿಸಿದ್ದಾರೆ. ನೀವು ಏನು ಮಾಡುತ್ತೀರಿ ಎಂಬುದನ್ನು ನೋಡಿ ಅವನು ಬದುಕುವುದಿಲ್ಲ. ಅವನು ಹೊಲ ಉಳಬೇಕು. ಬೆಳೆ ಬರಲಿ, ಬರದೇ ಇರಲಿ ಅವನು ಹೊಲ ಉಳಲೇ ಬೇಕು. ಕಾರ್ಮಿಕ, ಹೊಟ್ಟೆಪಾಡಿಗೋಸ್ಕರ ಕೆಲಸ ಮಾಡಲೇಬೇಕು. ಅದೇ ರೀತಿ, ಕೃಷಿ ಕಾರ್ಮಿಕರು ಕೆಲಸ ಮಾಡಬೇಕು. ಹೀಗೆ ಯಾರು ಸರ್ಕಾರವನ್ನು ಅವಲಂಬಿಸದೆ ತಮ್ಮ ಜೀವನಕ್ಕೋಸ್ಕರ ದುಡಿಯಬೇಕೋ ಅಂಥ ಜನರು ರಾಜ್ಯ ಸರ್ಕಾರಕ್ಕೆ ಉತ್ಪಾದನೆಯನ್ನು ಹೆಚ್ಚು ಮಾಡಿರುವುದರ ಜೊತೆಗೆ ೧೧೪೭ ಕೋಟಿ ರೂಪಾಯಿಗಳನ್ನು ನಾನಾ ರೀತಿಯ ತೆರಿಗೆಗಳ ಮೂಲಕ ರಾಜಸ್ವ ಲೆಕ್ಕದಲ್ಲಿ ನಿಮ್ಮ ಬೊಕ್ಕಸಕ್ಕೆ ಹಾಕಿದ್ದಾರೆ. ಕ್ಯಾಪಿಟಲ್ ಅಕೌಂಟಿನಲ್ಲಿ ನಿಮ್ಮದೇನೂ ಇಲ್ಲ. ಹಿಂದಿನ ವರ್ಷ ರೈತರಿಗೆ ಸುಸ್ತಿ ಬಡ್ಡಿಯನ್ನು ವಜಾ ಮಾಡುತ್ತೇವೆಂದು ಹೇಳಿದ್ದು ವಾಸ್ತವಿಕವಾಗಿ ೩೨ ಕೋಟಿ ರೂಪಾಯಿಗಳ ಸಾಲವನ್ನು ಒದ್ದು ಬಡಿದು ವಸೂಲ್ಮಾಡಿದ್ದೀರಿ. ಅದನ್ನು ಬಿಟ್ಟರೆ ಬೇರೆ ಯಾವುದೇ ರೀತಿಯಲ್ಲಿ ನೀವು ತೊಡಗಿಸಿರತಕ್ಕ ಬಂಡವಾಳ ಇಲ್ಲ. ಸರ್ಕಾರೀ ಉದ್ಯಮಗಳಲ್ಲಿ ೬೦೦ ಕೋಟಿ ರೂಪಾಯಿಗಳನ್ನು ತೊಡಗಿಸಿದ್ದೀರಿ. ಆದ್ದರಿಂದ ನಿಮ್ಮ ಖಜಾನೆಗೆ ೨.೧ ಪರ್ಸೆಂಟ್ ರಿಟನ್ ಬರುತ್ತದೆ. ಇನ್ನು ಕೆಲಸ ನಿಗಮಗಳು ಏನಿವೆ (ಕರ್ನಾಟಕ ಪವರ್ ಕಾರ್ಪೊರೇಷನ್, ವಿದ್ಯುತ್ ಮಂಡಲಿ, ರಸ್ತೆ ಸಾರಿಗೆ ನಿಗಮ) ಅವುಗಳಲ್ಲಿ ಒಟ್ಟು ೧೫೦೦ ಕೋಟಿ ರೂಪಾಯಿಗಳನ್ನು ತೊಡಗಿಸಿದ್ದೀರಿ ಈ ಕಾರ್ಪೊರೇಷನ್‌ಗಳೇನಿವೆ ಇವುಗಳಿಂದ ನಿಮಗೆ ಏನು ಹಣ ಬರುತ್ತಿಲ್ಲ. ರೈತರು ಮತ್ತು ದುಡಿಮೆಗಾರರು ಮಾಡತಕ್ಕ ಶ್ರಮದಿಂದ ಮತ್ತು ಅವರು ಕೊಡತಕ್ಕ ತೆರಿಗೆಯಿಂದ ನೀವು ಬದುಕಿದ್ದೀರಿ. ನೀವು ಅವರಿಗೆ ಏನು ಸಹಾಯ ಮಾಡಬೇಕಾಗಿತ್ತೋ ಅದಕ್ಕೆ ತದ್ವಿರುದ್ಧವಾಗಿ ಅವರ ಮೇಲೆ ತೆರಿಗೆಗಳನ್ನು ಹಾಕಿದ್ದೀರಿ. ಇದು ಖಂಡಿತ ನ್ಯಾಯವಲ್ಲ. ಧರ್ಮವಲ್ಲ. ಇವತ್ತಿನ ದಿವಸ, ಸರ್ಕಾರೀ ನೌಕರರಿಗೆ ಸಂಬಳ ಕೊಡುತ್ತಿರತಕ್ಕದ್ದು ೨೭೪ ಕೋಟಿ ರೂಪಾಯಿಗಳು ಮತ್ತು ೫೧ ಕೋಟಿ ರೂಪಾಯಿಗಳ ಪೆನ್‌ಷನ್ ಅನ್ನು ಕೊಡುತ್ತಿದ್ದೀರಿ. ಇದನ್ನು ನಾನು ಅಲ್ಲಗೆಳೆಯುತ್ತೇನೆಂದು ಯಾರೂ ತಿಳಿಯಬಾರದು. ಏಕೆಂದರೆ ಇದನ್ನು ಪಡೆಯತಕ್ಕವರು ಯೋಗ್ಯರು ಮತ್ತು ಅಯೋಗ್ಯರು ಇದ್ದಾರೆ. ಇನ್ನು ನೀವು ಸಾಧನೆಯನ್ನಾಗಲೀ ಸುಧಾರಣೆಯನ್ನಾಗಲಿ ತೋರಿಸುವುದಾದರೂ ಹೇಗೆ ? ನಿಮಗೆ ಒಂದು ಮಾತು ಹೇಳುವುದಾದರೆ, ನಿಮ್ಮ ಉದ್ದೇಶಿತ ಹಣ ಏನಿತ್ತು ಅಷ್ಟನ್ನು ನೀವು ಖರ್ಚು ಮಾಡಿಲ್ಲ. ಕೌನ್ಸಿಲ್ ಆಫ್ ಮಿನಿಸ್ಟರ್ಸ್‌ಗೆ ಮಾತ್ರ ಖರ್ಚು ಗಣನೀಯವಾಗಿ ಸುಧಾರಿಸಿದೆ. ವಿದ್ಯಾಭ್ಯಾಸದಲ್ಲಿ ಖರ್ಚು ಸುಧಾರಣೆಯಾಗಿಲ್ಲ.

೨-೩೦ ಪಿ.ಎಂ.

ಇದರಲ್ಲಿ ಹೆಚ್ಚೇನೂ ಆಗಿಲ್ಲ. ಒಂದು ಕೋಟಿ ರೂಪಾಯಿ ಮಾತ್ರ ಜಾಸ್ತಿ ಖರ್ಚು ಮಾಡಿದ್ದೀರಿ. ಹೋದ ವರ್ಷ ೯ ಕೋಟಿ ಆಗಿದ್ದರೆ ಈ ವರ್ಷ ೧೦ ಕೋಟಿ ರೂಪಾಯಿ ಖರ್ಚಾಗಿರಬಹುದು. ಮಂತ್ರಿಮಂಡಲಕ್ಕೆ ೫೯ ಲಕ್ಷ ರೂಪಾಯಿಗಳನ್ನು ನೀವು ಒದಗಿಸಿಕೊಂಡಿದ್ದಿರಿ. ಆದರೆ ೭೧ ಲಕ್ಷ ಖರ್ಚು ಮಾಡಿದ್ದೀರಿ. ಇದರಲ್ಲಿ ನಿಮ್ಮ ಸಾಮರ್ಥ್ಯ ತೋರಿಸಿದ್ದೀರಿ ಎಂದು ಹೇಳಬಹುದು. ತಾವು ಹೇಳ ಬಹುದು, ೧೦-೧೨ ರೂಪಾಯಿ ಹೆಚ್ಚಿಗೆ ಖರ್ಚಾಗುವುದು ಸಾಮಾನ್ಯ ಎಂದು. ಮಂತ್ರಿಮಂಡಲ ಕ್ಕೋಸ್ಕರ ೧೦-೧೨ ಲಕ್ಷ ರೂಪಾಯಿ ಖರ್ಚು ಮಾಡುವುದು ಜಾಸ್ತಿಯೇನಲ್ಲ. ಆದರೆ ನಿಮ್ಮ ದೃಷ್ಟಿಕೋಣ ಯಾವ ಕಡೆ ಇದೆ ಎಂಬುದನ್ನು ಹೇಳುತ್ತಿದ್ದೇನೆ. ಅದು ಕೋಣದೃಷ್ಟಿ ಆಗುತ್ತದೋ ಏನೋ ಗೊತ್ತಿಲ್ಲ. ನೀರಾವರಿ, ವಿದ್ಯುಚ್ಛಕ್ತಿ ಮುಂತಾದ ಯೋಜನೆಗಳಿಗೆ ನೀವು ಹಣ ಖರ್ಚು ಮಾಡಿರುವ ಬಗ್ಗೆ ನಾನು ಹೇಳುವುದಿಲ್ಲ. ಏಕೆಂದರೆ ಎಷ್ಟು ಕೆಲಸ ಮಾಡಬೇಕೋ ಅಷ್ಟು ಕೆಲಸವನ್ನು ನೀವು ಮಾಡಿಲ್ಲ. ಭದ್ರಾ ಯೋಜನೆ ಒಂದನ್ನು ಉದಾಹರಣೆಯಾಗಿ ನಿಮಗೆ ಹೇಳುತ್ತೇನೆ. ಭದ್ರ ಯೋಜನೆಗೆ ಸಂಬಂಧಪಟ್ಟಹಾಗೆ ಏನೂ ಹಣವನ್ನು ಒದಗಿಸಿ ಕೊಂಡಿಲ್ಲ. ಅದನ್ನು ಪೂರ್ಣಗೊಂಡಿರತಕ್ಕ ಯೋಜನೆ ಎಂದು ಹೇಳಿದ್ದೀರಿ. ಆದರೆ ಇವತ್ತು ಎರಡು ಲಕ್ಷ ೪೦ ಸಾವಿರ ಎಕರೆಗೆ ನೀರು ಬರತಕ್ಕ ಭದ್ರಾ ಅಣೆಕಟ್ಟಿನಿಂದ ಸುಮಾರು ೪೦೦ ಕ್ಯೂಸೆಕ್ಸ್ ನೀರು ಪೋಲಾಗಿಹೋಗುತ್ತಿದೆ. ಅದರಿಂದ ಮೂರು ನಾಲ್ಕು ವಿಭಾಗಗಳಲ್ಲಿರತಕ್ಕ ರೈತರ ಸ್ಥಿತಿ ಬಹಳ ಉದ್ವಿಗ್ನತೆಯ ಸ್ಥಿತಿಯಲ್ಲಿದೆ. ರಾಜ್ಯ ಸರ್ಕಾರ ಅದನ್ನು ತಕ್ಷಣ ರಿಪೇರಿ ಮಾಡದೇಹೋದರೆ ಒಂದು ಊರಿನವರು ಇನ್ನೊಂದು ಊರಿನವರ ಮೈಮೇಲೆ ಬೀಳತಕ್ಕ ಪರಿಸ್ಥಿತಿ ಬರುತ್ತದೆ. ಕಾಲುವೆ ರಿಪೇರಿಯಾಗಬೇಕು, ರಸ್ತೆಗಳ ರಿಪೇರಿಯಾಗಬೇಕು ಎಂದು ಎಷ್ಟು ಸಾರಿ ಹೇಳಿದರೂ ಅದನ್ನು ಸರ್ಕಾರದವರು ಮಾಡಲಿಲ್ಲ. ಭದ್ರ ಅಣೆಕಟ್ಟಿನ ಕೆಳಗಿರತಕ್ಕ ಕಮ್ಯಾಂಡ್ ಏರಿಯಾ ದುಸ್ಥಿತಿಗೆ ಬಂದಿದೆ. ಆದ್ದರಿಂದ ಈ ಕಡೆ ಸರ್ಕಾರ ಗಮನ ಹರಿಸಬೇಕೆಂದು ಕೇಳಿ ಕೊಳ್ಳುತ್ತೇನೆ. ಈ ವರ್ಷದ ಆಯವ್ಯಯದ ಬಗ್ಗೆ ಏನಾದರೂ ಪ್ರಯೋಜನ ಇದೆಯೋ ಎಂದು ನಾನು ನಾಲ್ಕಾರು ಜನರನ್ನು ಕೇಳಿದೆ. ಯಾವುದಾದರೂ ರೀತಿಯಲ್ಲಿ ನಿಮ್ಮ ಬಜೆಟ್ಟಿನಿಂದ ಜನರಿಗೆ ಉಪಯೋಗ ವಾಗಿದೆಯೇ? ಬೆಲೆಗಳು ಇಳಿದಿವೆಯೇ? ನಿರ್ದಿಷ್ಟವಾದ ವರಮಾನ ಇರತಕ್ಕ ಮನುಷ್ಯನ ಜೀವನ ಸುಧಾರಿಸುವುದಕ್ಕೆ ನಿಮ್ಮ ಆಯವ್ಯಯ ಪತ್ರದಿಂದ ಏನಾದರೂ ಸಹಾಯ ಸಿಕ್ಕಿದೆಯೇ? ನೀವೇ ಹೇಳಿ, ನಿಮ್ಮ ಸ್ವಂತ ಅನುಭವವನ್ನು ಹೇಳಿ. ಮಂತ್ರಿಗಳು ಪ್ರಾಮಾಣಿಕರಾಗಿದ್ದಾರೆಂದು ಭಾವಿಸಿಕೊಂಡು ಹೇಳುವುದಾದರೆ ನಿಮ್ಮ ಸಂಬಳದಲ್ಲಿ ನೀವು ಹೇಗೆ ಜೀವನ ಮಾಡುವುದಕ್ಕೆ ಸಾಧ್ಯ ಎಂಬುದನ್ನು ಆಲೋಚನೆ ಮಾಡಿ. ಹುಣಸೇಹಣ್ಣಿನ ಬೆಲೆ ಎಷ್ಟು ಎಂಬುದು ತಮಗೇನಾದರೂ ಗೊತ್ತೇ ಸ್ವಾಮಿ.

ಶ್ರೀ ವೈ. ರಾಮಕೃಷ್ಣ.—ಹೇಳಿ.

ಶ್ರೀ ಜೆ.ಹೆಚ್. ಪಟೇಲ್.—ನಿಮಗೆ ಗೊತ್ತಿಲ್ಲ. ಹುಣಸೇಹಣ್ಣಿನ ಬೆಲೆ, ಖಾದ್ಯ ತೈಲಗಳ ಬೆಲೆ, ಮೆಣಸಿನಕಾಯಿಯ ಬೆಲೆ ನೋಡಿದರೆ ಸಾಮಾನ್ಯ ಮನುಷ್ಯ ಕೊಳ್ಳುವುದಕ್ಕೆ ಸಾಧ್ಯವಿಲ್ಲ. ನೀವು ಕೇಳ ಬಹುದು, ಅದಕ್ಕೂ ಬಜೆಟ್ಟಿಗೂ ಏನು ಸಂಬಂಧ ಇದು? ಹಾಗಾದರೆ ನಿಮ್ಮ ಆಯವ್ಯಯ ಪತ್ರ ಏತಕ್ಕಾಗಿರುವುದು? ನಿಮ್ಮ ಆಯವ್ಯಯ ಪತ್ರ ಮಂಡನೆಯಲ್ಲಿ ರಾಜ್ಯದ ಜನರ ದಿನನಿತ್ಯದ ಜೀವನದ ಮೇಲೆ ಪರಿಣಾಮ ಬೀರತಕ್ಕ ಉದ್ದೇಶವೇನಾದರೂ ಇದೆಯೇ? ಅಥವಾ ಅಂಕಿ ಅಂಶಗಳನ್ನು ಜೋಡಿಸಿ ಕೊಂಡು ಏನೋ ಹೇಳಬೇಕೆಂಬ ಉದ್ದೇಶವಿದೆಯೇ? ನೀವು ಪ್ರತಿ ವರ್ಷ ಜನರ ಜೇಬನ್ನು ತೆರಿಗೆ ಮೂಲಕ ಕತ್ತರಿಸಿ ೨೫-೩೦ ಕೋಟಿ ರೂಪಾಯಿಗಳನ್ನು ಸೇರಿಸಿಕೊಳ್ಳುತ್ತಾ ಹೋಗುತ್ತಿದ್ದೀರಿ. ಹೀಗೆ ಜೇಬುಗಳ್ಳತನ ಮಾಡುವುದು ನಿಮ್ಮ ಆಯುವ್ಯಯದ ಉದ್ದೇಶವೆ? ಎಲ್ಲ ವರ್ಗದ ಜನರಿಗೆ ಏನಾದರೂ ಸಹಾಯ ಮಾಡಬೇಕು ಎಂಬ ಉದ್ದೇಶ ನಿಮ್ಮ ಆಯುವ್ಯಯ ಪತ್ರದಲ್ಲಿ ಏನಾದರೂ ಇದೆಯೇ? ಕೆಲವು ಒಳ್ಳೆಯ ಕೆಲಸ ಮಾಡಿರುವುದನ್ನು ನಾನು ಹೇಳಿದ್ದೇನೆ. ಆದರೆ ಅದು ಇಡೀ ಸಮಾಜದಲ್ಲಿರುವ ಎಲ್ಲೋ ಸಣ್ಣ ಅಂಶದ ಜನರಿಗೆ ಮಾತ್ರ ಲಭ್ಯವಾಗುತ್ತದೆ. ದುಡಿಯತಕ್ಕ ರೈತ ಮತ್ತು ಕಾರ್ಮಿಕನಿಗೆ ಮತ್ತಷ್ಟು ಪ್ರೋತ್ಸಾಹ ಸಿಗತಕ್ಕ ಕೆಲಸವನ್ನು ಆಯವ್ಯಯಪತ್ರದಲ್ಲಿ ಮಾಡಿಲ್ಲ. ಹಳ್ಳಿಗಾಡಿನ ಜನರಿಗೆ ಅನುಕೂಲ ವಾಗುವಂಥ ಕೆಲಸವನ್ನು ಆಯುವ್ಯಯದಲ್ಲಿ ಮಾಡಿಲ್ಲ. ನೀವು ಹಾಲು ಕೊಡತಕ್ಕ ಹಸುವಿಗೆ ಒಣದಂಟು ಹಾಕಿ ಬರಡು ಹಸುವಿಗೆ ತಿಂಡಿ ಇಟ್ಟಿದ್ದೀರಿ. ನಿಮ್ಮಲ್ಲಿರತಕ್ಕ ಸಾಮಾಜಿಕ ಕಲ್ಪನೆಯೇ ಹೀಗೆ. ಇಡೀ ಬಜೆಟ್ಟಿನಲ್ಲಿ ನಾನ್-ಪ್ರೊಡಕ್ಟೀವ್ ಇನ್‌ವೆಸ್ಟ್‌ಮೆಂಟ್ ಜಾಸ್ತಿ ಇದೆ. ಪ್ರೊಡಕ್ಟಿವ್ ಇನ್‌ವೆಸ್ಟ್‌ಮೆಂಟ್ ಮಾಡಿ ಹಣ ಜನರೇಟ್ ಮಾಡದೇಹೋದರೆ ನೀವು ರಾಜ್ಯವನ್ನು ಹೇಗೆ ನಿಭಾಯಿಸುತ್ತೀರಿ? ಪ್ರತಿವರ್ಷ

ಕೇಂದ್ರಸರ್ಕಾರದಿಂದ, ಅಲ್ಲಿಂದ, ಇಲ್ಲಿಂದ ಸಾಲ ತರುತ್ತೀರಿ. ಈಗಲೂ ಸಾಕಷ್ಟು ಸಾಲದ ಹೊರೆ ನಮ್ಮ ಮೇಲಿದೆ. ಕೇಂದ್ರ ಬಜೆಟ್ ಪ್ರಕಟಣೆಯಾದಾಗಲೇ ಪ್ರತಿಯೊಬ್ಬ ವ್ಯಕ್ತಿಯ ಮೇಲೆ ಒಂದು ಸಾವಿರ ರೂಪಾಯಿಗಳವರೆಗೆ ಸಾಲದ ಹೊರೆ ಇತ್ತು. ಇದು ಕೇಂದ್ರ ಸರ್ಕಾರ ಜನರಿಗೆ ಮಾಡಿರುವ ಸೇವೆ, ಮತ್ತೆ ನೀವೂ ಸ್ವಲ್ಪ ಸೇರಿಸಿ ಪ್ರತಿಯೊಬ್ಬ ಮನುಷ್ಯನ ಮೇಲೆ ೧೦೦-೧೫೦ ರೂಪಾಯಿ ಸಾಲದ ಹೊರೆಯನ್ನು ಹೊರಿಸುತ್ತಿದ್ದೀರಿ, ಇದು ಯಾತಕ್ಕೆ? ಮಾನ್ಯ ಬಸವಲಿಂಗಪ್ಪನವರು ಭಾಷಣ ಮಾಡುತ್ತಾ ನಮ್ಮ ಕಾರ್ಯಕ್ರಮಗತನ್ನು ಆಚರಣೆಗೆ ಬರದೇ ಇರಬೇಕಾದರೆ ಅದಕ್ಕೆ ಜವಾಬ್ದಾರರು ಅಧಿಕಾರಿಗಳು ಎಂದು ಹೇಳಿದರು. ಅವರು ಒಂದು ಹೊಸ ಥಿಯರಿ ಹೇಳಿದರು ಸರ್ಕಾರಗಳು ಬರುತ್ತವೆ, ಹೋಗುತ್ತವೆ, ಖಾಯಂ ಆಗಿರತಕ್ಕವರು ಅಧಿಕಾರಿಗಳು, ಅವರ ಮೇಲೆ ಎಲ್ಲ ಜವಾಬ್ದಾರಿ ಇರುತ್ತದೆ ಎಂದು ಹೇಳಿದರು. ಆದರೆ ಮಂತ್ರಿಗಳ ಮೇಲೆ ಎಷ್ಟು ಜವಾಬ್ದಾರಿ ಇದೆ ಎಂಬುದನ್ನು ಅವರು ಹೇಳಲಿಲ್ಲ. ಮಂತ್ರಿಗಳು ನೀತಿ ನಿರೂಪಕರಾಗಿರಬೇಕು. ಅಧಿಕಾರಿಗಳು ಅದನ್ನು ಕಾರ್ಯಾಚರಣೆಯಲ್ಲಿ ತರುವವರು. ನಾನು ಹೇಳಿದೆ, ಅವನು ಮಾಡಲಿಲ್ಲ, ನಾನೇನು ಮಾಡಲಿ ಎಂದು ಮಂತ್ರಿಗಳು ಹೇಳುವುದಾದರೆ ನೀವು ಏತಕ್ಕಿರುವುದು? ಜನರಿಗೆ ಜವಾಬ್ದಾರರಾಗಿರತಕ್ಕವರು ನೀವು. ಕಾರ್ಯಾಂಗದ ಮೇಲಿರತಕ್ಕವರು ನೀವು. ನೀವು ನೀತಿ ನಿರೂಪಣೆ ಮಾಡುವಾಗ ಜನರ ಅವಶ್ಯಕತೆಗಳೇನು ಎಂಬುದನ್ನು ತಿಳಿದುಕೊಳ್ಳಬೇಕು. ಐ.ಎ.ಎಸ್. ಅಧಿಕಾರಿಗಳಿಗೆ ಜನರಿಗೆ ಏನು ಬೇಕು ಎಂಬುದು ಗೊತ್ತಿರುತ್ತದೋ ಇಲ್ಲವೋ. ಆದ್ದರಿಂದ ನೀವು ನೀತಿ ನಿರೂಪಣೆ ಮಾಡುವುದರ ಜೊತೆಗೆ ಅದು ಜಾರಿಗೆ ಬರುವಂತೆ ನೋಡಿಕೊಳ್ಳಬೇಕು. ಈಗ ನಮ್ಮ ದೇಶದಲ್ಲಿ ಇದಕ್ಕೆ ತದ್ವಿರುದ್ಧವಾಗಿ ನಡೆಯುತ್ತಿದೆ. ಪಾಲಿಸಿ ಮೇಕರ್ಸ್ ಮಂತ್ರಿಗಳಾಗುವ ಬದಲು ಐ.ಎ.ಎಸ್. ಅಧಿಕಾರಿಗಳಾಗಿದ್ದಾರೆ. ಐ.ಎ.ಎಸ್ ಅಧಿಕಾರಿಗಳು ಹೇಳಿರುವ ಪಾಲಿಸಿಯನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಮಂತ್ರಿಗಳಾಗಿದ್ದಾರೆ. ಹಳ್ಳಿಗಳಿಗೆ ಹೋಗಿ ಮಂತ್ರಿಗಳು ವಿವರಣೆ ಮಾಡುತ್ತಾರೆ. ಇದು ತಲೆಗೆ ಟೋಪಿ ಹಾಕಿದಂತಾಗಿಲ್ಲ. ಟೋಪಿಗೆ ತಕ್ಕಂತೆ ತಲೆ ಹೊಂದಿಸಿಕೊಂಡಂತಾಗಿದೆ. ಹೀಗೆ ಪಾಲಿಸಿ ಮೇಕಿಂಗ್ ಕೆಲಸವನ್ನು ಅಧಿಕಾರಿಗಳಿಗೆ ಕೊಟ್ಟು ಅದನ್ನು ಕಾರ್ಯಾಚರಣೆಗೆ ತರುವ ಜವಾಬ್ದಾರಿಯನ್ನು ನೀವು ತೆಗೆದುಕೊಂಡಿದ್ದೀರಿ. ಆದ್ದರಿಂದ ಬಸವಲಿಂಗಪ್ಪನವರ...

ಶ್ರೀ ಎ. ಲಕ್ಷ್ಮೀಸಾಗರ್.—ಬಸವಲಿಂಗಪ್ಪನವರ ವಾದವನ್ನು ನೀವು ಹೆಚ್ಚು ಕಡಿಮೆ ಮಾಡುತ್ತಿದ್ದೀರಲ್ಲ.

ಶ್ರೀ ಜೆ.ಹೆಚ್. ಪಟೇಲ್.—ನಾನು ಮಾನ್ಯ ಬಸವಲಿಂಗಪ್ಪನವರು ಹೇಳುವುದರಲ್ಲಿ ಪೂರ್ಣ ಸತ್ಯವಿಲ್ಲ ಎಂದು ಹೇಳುತ್ತಿದ್ದೇನೆ. ಮಂತ್ರಿಗಳು ಬರುತ್ತಾರೆ ಹೋಗುತ್ತಾರೆ, ಆದರೆ ಜವಾಬ್ದಾರಿ ಹೊಂದಿರುವವರು ಅಧಿಕಾರಿಗಳು ಎಂದು ಸ್ವಲ್ಪ ಮೊಗಂ ಆಗಿ ಹೇಳಿದರು. ಅವರು ಇನ್ನೂ ಸ್ವಲ್ಪ ಸ್ಪಷ್ಟವಾಗಿ ಹೇಳಬೇಕಾಗಿತ್ತು. ಅಧಿಕಾರಿಗಳೆಲ್ಲಾ ಮೇಲು ಜಾತಿಯವರು, ಸಾಮಾನ್ಯ ಜನರ ಕಾರ್ಯಕ್ರಮಗಳನ್ನು ಜಾರಿ ಮಾಡುವುದಕ್ಕೆ ಅವರಿಗೆ ಇಚ್ಛೆ ಇಲ್ಲ, ನಾವು ಏನೇ ಮಾಡಿದಂತೂ ಅವರನ್ನು ತಿದ್ದುವುದಕ್ಕೆ ಆಗುವುದಿಲ್ಲ ಎಂದು ಹೇಳಿದ್ದರೆ ನಾನು ಅದನ್ನು ಒಪ್ಪುತ್ತಿದ್ದೆ. ಅದನ್ನು ಅವರು ಹೇಳುವುದಿಲ್ಲ. ಅವರು ಯಾವಾಗಲೂ ಸತ್ಯವನ್ನು ನೇರವಾಗಿ ಹೇಳುವುದಿಲ್ಲ. ಒಂದು ತರಹ ಸುತ್ತಿ ಬಳಸಿ ಹೇಳುತ್ತಾರೆ. ನಮ್ಮಲ್ಲಿರತಕ್ಕ ಸಾಮಾಜಿಕ ವ್ಯವಸ್ಥೆಯಲ್ಲಿ ಜನರಿಗೇನು ಸಹಾಯ ಬೇಕೋ ಅದನ್ನು ಮಾಡುವುದಕ್ಕೆ ಖಾಯಂ ಆಗಿರತಕ್ಕ ಬ್ಯೂರೋಕ್ರಸಿಗೆ ಇಚ್ಛೆ ಇಲ್ಲ. ಏತಕ್ಕೆಂದರೆ ಅವರು ನೇರವಾಗಿ ಜನರಿಗೆ ಜವಾಬ್ದಾರರಲ್ಲ. ಆ ಮಾತು ಸರಿ. ಆದರೆ ಇಲ್ಲಿ ಜನರಿಗೆ ಜವಾಬ್ದಾರರಾಗಿರತಕ್ಕ ಜನ ಏನು ಮಾಡುತ್ತಿರುತ್ತಾರೆ. ಸುಮ್ಮನೆ ಸಭೆಗಳಿಗೆ ಹೋಗುವುದು, ಅಲ್ಲಿ ಘೋಷಣೆಗಳನ್ನು ಮಾಡುವುದು, ಇಷ್ಟೇ ಕೆಲಸವೇ ಇವರಿಗೆ? ನೀವು ಘೋಷಣೆ ಮಾಡಿದ ಕೆಲಸಗಳು ಆಗದಿದ್ದರೆ ಏತಕ್ಕೆ ಆಗಿಲ್ಲ ಎಂದು ಕೇಳುವುದು ನಿಮ್ಮ ಕೆಲಸ. ಆ ಕೆಲಸವನ್ನು ನೀವು ಮಾಡದಿದ್ದರೆ ನೀವು ಯಾರೂ ಬೇಕಾಗಿಯೇ ಇಲ್ಲ. ಎಲ್ಲಾ ಅಧಿಕಾರಿಗಳೇ ನಡೆಸಿಕೊಂಡು ಹೋಗುವುದಾದರೆ ಮಂತ್ರಿಗಳೇ ಅನಾವಶ್ಯಕ. ವಾಸ್ತವವಾಗಿ ಬ್ಯೂರೋಕ್ರಸಿ ಜನ ಏನಿದೆ ಅದು ನಮ್ಮ ಜನರ ಜೀವನವನ್ನು ಹಿಡಿದು ಹಿಸುಕುತ್ತಿದ್ದಾರೆ. ಈ ಕೆಲಸ ಎಲ್ಲಾ ಸರ್ಕಾರಗಳಲ್ಲೂ ಆಗುವುದಿಲ್ಲ. ತನ್ನ ಅಧಿಕಾರವನ್ನು ಚಲಾಯಿಸತಕ್ಕ ಮಂತ್ರಿಮಂಡಲ ಇದ್ದರೆ. ಅಧಿಕಾರಗಳನ್ನು ಹತೋಟಿಯಲ್ಲಿ ಇಡತಕ್ಕ ಮಂತ್ರಿಮಂಡಲ ಇದ್ದರೆ ಆಗ ವರ್ತಿಸತಕ್ಕ ರೀತಿಯೇ ಬೇರೆ. ಯಾವಾಗಲೂ ಕುದುರೆಗೆ ಗೊತ್ತಿರುತ್ತದೆ ಸವಾರ ಯಾರು ಎಂದು. ಆತನನ್ನು ನೋಡಿಕೊಂಡು ಅದು ಓಡುತ್ತದೆ. ಇದೇ ರೀತಿ ಬ್ಯೂರೋಕ್ರಸಿ ಕೆಲಸ ನಡೆಯುತ್ತಿದೆ. ಇವರು ನಿಮ್ಮನ್ನು ನೋಡಿಕೊಂಡು ಕೆಲಸ ಮಾಡುತ್ತಾರೆ,

ಇನ್ನು ಈಗ ರೈತರ ಸ್ಥಿತಿ ಬಹಳ ಉದ್ವಿಗ್ನವಾಗಿದೆ. ಇವರು ಏನು ಹೇಳಿದರೂ ಕೂಡ ಹೋದ ವರ್ಷ ಹೇಳಿದ ಯಾವ ಒಂದು ಮಾತನ್ನೂ ನಡೆಸಿಕೊಟ್ಟಿಲ್ಲ. ೮೭ ಕೋಟಿ ರೂಪಾಯಿಗಳ ಸೌಕರ್ಯ ವನ್ನು ಒದಗಿಸಿಕೊಡುತ್ತೇವೆಂದು ಹೇಳಿದರು. ಆದರೆ ವಾಸ್ತವವಾಗಿ ಆರು–ಆರೂವರೆ ಕೋಟಿ ರೂಪಾಯಿಗಳ ಸಹಾಯವನ್ನು ಮಾಡಿದ್ದೀರೆಯೇ ಹೊರತು ಇನ್ನುಳಿದ ೮೦ ಕೋಟಿ ರೂಪಾಯಿ ಅವರ ಬಗ್ಗೆ ಖರ್ಚಾಗಿಲ್ಲ. ಇವತ್ತು ಅವರು ಬೆಳೆದಿರುವ ಬೆಳೆಯು ಬೆಲೆಯು ಬಗ್ಗೆ ಚಿಂತಾಕ್ರಾಂತರಾಗಿದ್ದಾರೆ. ಇದು ಒಂದು ಕಡೆ. ಇನ್ನು ನಿಶ್ಚಿತವಾಗಿ ಸಂಬಳ ಬರತಕ್ಕ ಜನರು ಏನಿದ್ದಾರೆ ಅವರು ಏನಾದರೂ ವ್ಯವಸ್ಥೆಯಿಂದ, ಬೇರೆ ವಾಮಮಾರ್ಗದಿಂದ ಬದುಕತಕ್ಕ ಬಗ್ಗೆ ಕಾರ್ಯನಿರತರಾಗಿದ್ದಾರೆ. ಇವತ್ತು ನಿಮಗೆ ಕೃಷಿಯಿಂದ ಬರತಕ್ಕದ್ದು ೮೨ ಭಾಗವಾದರೆ, ಆ ಕೃಷಿಕನಿಗೆ ನೀವು ಖರ್ಚು ಮಾಡಿರತಕ್ಕದ್ದು ಕೇವಲ ೧೩ ಭಾಗ ಮಾತ್ರ ಇದನ್ನು ನೀವೇ ಎಕನಾಮಿಕ್ ಸರ್ವೇನಲ್ಲಿ ಹೇಳಿದ್ದೀರಿ. ರೈತರ ಸಮಸ್ಯೆ ಬಂದಾಗ, ನೀರಾವರಿ ಪ್ರದೇಶದಲ್ಲಿ ಇರತಕ್ಕವರ ಸಮಸ್ಯೆ ಬಂದಾಗ, ಬಯಲು ಸೀಮೆಯಲ್ಲಿರುವವರ ಸಮಸ್ಯೆ ಬಂದಾಗ ನೀವು ಸಪೋರ್ಟ್ ಪ್ರೈಸ್ ಕೊಡುತ್ತೇವೆಂದು ಹೇಳಿದ್ದೀರಿ. ಖುಷ್ಕಿ ಜಮೀನನ್ನು ಇಟ್ಟುಕೊಂಡಿರುವವರ ಬಗ್ಗೆ ಏನೇನೋ ಹೇಳಿದ್ದೀರಿ. ಅವರಿಗೆ ಬೀಜ, ಗೊಬ್ಬರ, ಕ್ರಿಮಿನಾಶಕ ಮುಂತಾದವನ್ನು ಕೊಡುತ್ತೇವೆಂದು ಹೇಳಿದ್ದೀರಿ. ವಾಸ್ತವವಾಗಿ ನಿಮ್ಮ ಕೃಷಿ ಇಲಾಖೆ ನೀವು ಹೇಳಿದ ರೀತಿಯಲ್ಲಿ ನಡೆದುಕೊಳ್ಳುತ್ತಾ ಇಲ್ಲ. ಕೃಷಿ ಇಲಾಖೆ ಸರಿಯಾಗಿ ಕೆಲಸ ಮಾಡದಿದ್ದರೆ ಚೆನ್ನಾಗಿ ಇರುತ್ತಿತ್ತು. ನಾನು ಅಲ್ಲಿಯ ಒಬ್ಬ ಇಬ್ಬರು ಅಧಿಕಾರಿಗಳ ಬಗ್ಗೆ ಹೇಳುತ್ತಾ ಇಲ್ಲ. ಪೂರ್ತಿ ಕೃಷಿ ಇಲಾಖೆಯೇ ಇವತ್ತು ಅತ್ಯಂತ ಬೇಜವಾಬ್ದಾರಿಯಿಂದ ವರ್ತಿಸುತ್ತಿದೆ. ಅಲ್ಲಿಯ ಯಾವ ಒಬ್ಬ ಅಧಿಕಾರಿಯೂ ಸ್ವತಃ ರಾಜಕಾರಣ ಇಲ್ಲವೇ ಜಾತಿಯ ವಿಷಯದಲ್ಲಿ ಪರಿಣತಿ ಹೊಂದುತ್ತಿದ್ದಾರೆಯೇ ಹೊರತು ನಿಜವಾಗಿಯೂ ಹಳ್ಳಿಗಳ ಕಡೆ ಹೋಗಿ ಸಂದರ್ಶನ ಮತ್ತು ವಗೈರೆಗಳನ್ನು ಮಾಡುತ್ತಾ ಇಲ್ಲ. ಇವತ್ತು ನಮ್ಮ ಕೃಷಿ ಇಲಾಖೆಯ ವ್ಯವಸ್ಥೆ ಏನಾಗಿದೆ? ಇವರು ಒದಗಿಸತಕ್ಕ ಔಷಧಿಗಳ ಗುಣಮಟ್ಟ ಸರಿಯಿರುವುದಿಲ್ಲ. ಇವರಿಗೆ ಕೊಡತಕ್ಕ ಬೀಜಗಳು ಕಲಬೆರೆಕೆಯಿಂದ ಕೂಡಿರುತ್ತವೆ. ಈ ಇಲಾಖೆ ಯಿಂದ ಕೊಡತಕ್ಕ ಬಿತ್ತನೆ ಬೀಜಗಳಿಂದ ಒಳ್ಳೆಯ ಬಿತ್ತನೆ ಬರುತ್ತದೆಯೇ ಎನ್ನುವ ಅನುಮಾನ ರೈತರಲ್ಲಿ ತಲೆದೋರಿದೆ. ಇಂತಹ ಬಿತ್ತನೆಗಳನ್ನು ವಿತರಣೆ ಮಾಡುತ್ತಿದ್ದಾರೆ. ಇವತ್ತು ತಂಬಾಕು ಬೆಳೆಗಾರ ತಂಬಾಕನ್ನು ಬೆಳೆಯುತ್ತಾನೆ. ೧ ಕೇಜಿ ತಂಬಾಕಿನ ಬೆಲೆ ೧೦ ರೂಪಾಯಿ ಮಾರುಕಟ್ಟೆಯಲ್ಲಿ ಇದೆ. ಅದೇ ತಂಬಾಕಿನಿಂದ ಸಿಗರೇಟಾದಾಗ ಆ ತಂಬಾಕಿನ ಬೆಲೆ ೧೯೦ರಿಂದ ೨೦೦ ರೂಪಾಯಿಗಳಾಗುತ್ತವೆ. ೧ ಕೇಜಿ ತಂಬಾಕು ಉತ್ತಮ ಮಟ್ಟದ ಸಿಗರೇಟಾಗಿ ಪ್ಯಾಕಾಗಿ ಬಂದಾಗ ಅದರ ಬೆಲೆ ೧೮೦ ರಿಂದ ೨೦೦ ರೂಪಾಯಿಗಳಾಗುತ್ತದೆ. ಈ ಬೆಲೆಯನ್ನು ಸಿಗರೇಟು ಸೇದುವವನು ಕೊಡುತ್ತಾನೆ. ಇದರಿಂದ ಬೆಳೆಗಾರರಿಗೆ ಲಾಭ ಸಿಗುವುದಿಲ್ಲ ಇದೆಲ್ಲಾ ಮಧ್ಯವರ್ತಿಗಳಿಗೆ ಹೋಗುತ್ತಿದೆ. ಇದರಿಂದ ತಂಬಾಕು ಬೆಳೆಗಾರರಿಗೆ ಏನು ಒಳ್ಳೆಯದು ಮಾಡಿದಂತಾಯಿತು? ಇವತ್ತು ಒಂದು ಕ್ವಿಂಟಾಲ್ ಶೇಂಗಾ ವನ್ನು ಮಾರಿದರೆ ೩೨೦ ರೂಪಾಯಿ ಸಿಗುತ್ತದೆ. ಆ ಶೇಂಗಾದಿಂದ ತಯಾರು ಮಾಡಿದ ಎಣ್ಣೆ ೬೦೦ ರೂಪಾಯಿಗೆ ಮಾರಾಟವಾಗುತ್ತಿದೆ. ಈ ಹಣವೆಲ್ಲಾ ಯಾರಿಗೆ ಹೋಗುತ್ತದೆ? ಕೇಜಿ ಎಣ್ಣೆಗೆ ೧೪ ರೂಪಾಯಿ ಕೊಟ್ಟು ಕೊಳ್ಳುವಂತಹವರ ತಲೆಗೆ ಟೋಪಿ ಹಾಕಿದ್ದೀರಿ, ಈಗ ಇದರ ಬೆಲೆ ಕಡಿಮೆ ಯಾಗುತ್ತಿದೆ. ಹೀಗೆ ಅನಿಶ್ಚಿತತೆಯ ಡೋಲಾಯಮಾನ ಸ್ಥಿತಿಯಲ್ಲಿ ರೈತರಿದ್ದಾರೆ. ಯಾರು ಮಧ್ಯ ವರ್ತಿಗಳು ಇದ್ದಾರೆ ಯಾರು ಕಾಳಸಂತೆ ಕೋರರು ಇದ್ದಾರೆ, ಯಾರು ಒಂದಕ್ಕೆ ನೂರರಷ್ಟು ಲಾಭವನ್ನು ಪಡೆಯತಕ್ಕ ಜನ ಇದ್ದಾರೆ ಅಂತಹ ಜನರನ್ನು ನೀವು ಸಂರಕ್ಷಣೆ ಮಾಡುತ್ತಿದ್ದೀರಿ. ಇವರ ಆಸ್ತಿಪಾಸ್ತಿ ಗಳನ್ನು ಸಂರಕ್ಷಣೆ ಮಾಡುವುದಕ್ಕೆ ನೀವು ಹಣ ಖರ್ಚು ಮಾಡುತ್ತಿದ್ದೀರಿ. ಯಾರನ್ನು ನೀವು ರಕ್ಷಣೆ ಮಾಡಬೇಕೋ ಅಂತಹ ಜನರನ್ನು ನೀವು ರಕ್ಷಣೆ ಮಾಡುತ್ತಾ ಇಲ್ಲ. ಇದು ಸ್ಥಿತಿ ಇದೆ. ನಾನು ಯಾವುದೇ ಸಣ್ಣಪುಟ್ಟ ವಿಷಯದ ಬಗ್ಗೆ, ತಂಬಾಕು, ಬೀಡಿ ಬಗ್ಗೆ ರಿಲೀಫ್ ಕೇಳುವುದಿಲ್ಲ. ಏಕೆಂದರೆ ಅನೇಕ ವಿಷಯಗಳ ಬಗ್ಗೆ ಜನರು ರೋಸಿ ಹೋಗಿದ್ದಾರೆ. ಅವರ ಜೀವನದ ಆರೋಗ್ಯ ಇಲಾಖೆ ತೆಗೆದು ಕೊಳ್ಳಿ: ಪೋಲೀಸ್ ಇಲಾಖೆ ತೆಗೆದುಕೊಳ್ಳಿ, ಶಿಕ್ಷಣ ಇಲಾಖೆ ತೆಗೆದುಕೊಳ್ಳಿ. ಇವತ್ತು ಜನರಲ್ಲಿ ಸರ್ಕಾರದ ಬಗ್ಗೆ ವಿಶೇಷತೆ ಕಾಣುತ್ತಿಲ್ಲ. ಸರ್ಕಾರದ ಕಾರ್ಯಕ್ರಮಗಳ ಬಗ್ಗೆ ಅವರಲ್ಲಿ ಆಸಕ್ತಿ ಇಲ್ಲ. ಒಂದಲ್ಲಾ ಒಂದು ಕಡೆ ಅಸಮಾಧಾನ ಇದ್ದೇ ಇದೆ, ಹೇಗಾದರೂ ಅದು ಹೊರಗೆ ಬರಬೇಕು. ಇವತ್ತು ವಿಶ್ವವಿದ್ಯಾನಿಲಯಗಳಲ್ಲಿ ಚಾಕು ಚೂರಿ ಉಪಯೋಗಿಸತಕ್ಕ ವಿದ್ಯಾರ್ಥಿಗಳು ತಯಾರಾಗುತ್ತಿದ್ದಾರೆ. ಇಲಾಖೆಗಳಲ್ಲಿ ಮೇಲಿನ ದರ್ಜೆ ನೌಕರ ಕೆಳಗಿನ ದರ್ಜೆ ನೌಕರನಿಗೆ ದೈಹಿಕವಾಗಿ ಹೊಡೆಯುವ ಸ್ಥಿತಿ ಇರತಕ್ಕಂಥ ಒಂದು ಆಡಳಿತ ಇದೆ. ಇನ್ನು ನಗರಗಳಲ್ಲಿ ಸಂಜೆ ೬ ಗಂಟೆ ಮೇಲೆ ಮರ್ಯಾದಸ್ಥರು ಓಡಾಡು

ವುದಕ್ಕೆ ಆಗದೇ ಇರುವಂತಹ ಪರಿಸ್ಥಿತಿ ಎದ್ದು ಕಾಣುತ್ತಿದೆ. ಹಳ್ಳಿಗಾಡಿನಲ್ಲಿನ ಸುಮಾರು ಅರ್ಧಕ್ಕರ್ಧ ನಿರುದ್ಯೋಗಿ ಯುವಕರು ಸಾಮಾಜಿಕ ಸಮಸ್ಯೆಯಾಗಿ ಪಟ್ಟಣಗಳಿಗೆ ಬರುತ್ತಿದ್ದಾರೆ. ಹಾಗಾದರೆ ಯಾವ ರಂಗದಲ್ಲಿ ಸಮಾಧಾನಕರವಾಗತಕ್ಕ ಒಂದು ಆರ್ಥಿಕ ನೀತಿಯನ್ನು ಹಾಕಿಕೊಂಡಿದ್ದೀರಿ? ನೀವು ಆಯವ್ಯಯದಲ್ಲಿ ತಕ್ಕ ವ್ಯವಸ್ಥೆ ಇವಕ್ಕೆ ಮಾಡಿದ್ದೀರಾ? ಯಾವುದೂ ಇಲ್ಲ. ಕೆಲವು ಆಂಶಿಕವಾದ ಕೆಲಸಗಳನ್ನು ಮಾಡಿದ್ದೀರಿ. ಈ ಆಂಶಿಕ ಕಾರ್ಯಕ್ರಮಗಳಿಂದ ಒಟ್ಟು ಪ್ರಯೋಜನ ಏನೂ ಆಗು ವುದಿಲ್ಲ. ನೀವು ಎಷ್ಟು ಮಾಡಿದರೂ ಕೂಡಾ ನಿಮ್ಮ ಪ್ರಕಾರ ೧೩,೩೮೦ ಹಳ್ಳಿಗಳಿಗೆ ಸರಿಯಾದ ರಸ್ತೆ ಗಳು ಇಲ್ಲ. ಒಟ್ಟು ೨೬,೮೨೬ ಹಳ್ಳಿಗಳ ಪೈಕಿ ೧೩,೩೮೦ ಹಳ್ಳಿಗಳಿಗೆ ಸರಿಯಾದ ರಸ್ತೆಯಿಲ್ಲವೆಂದು ಹೇಳಿದ್ದೀರಿ. ನೀವು ಈ ಬಗ್ಗೆ ಇಟ್ಟುಕೊಂಡಿರುವ ಹಣ ಕೇವಲ ೧೧ ಕೋಟಿ ರೂಪಾಯಿಗಳು ಈ ೧೩.೩೮೦ ಹಳ್ಳಿಗಳಿಗೆ ರಸ್ತೆ ಸೌಕರ್ಯವನ್ನು ಬರುವ ಮೂರು ವರ್ಷದಲ್ಲಿ ಒದಗಿಸಲು ೧೧ ಕೋಟಿ ರೂಪಾಯಿ ಒದಗಿಸಲಾಗಿದೆಯೆಂದು ಹೇಳಿದ್ದೀರಿ. ೧ ಕಿಲೋಮೀಟರ್ ರಸ್ತೆಯನ್ನು ಸರಿಯಾಗಿ ಮಾಡುವುದಕ್ಕೆ ಬೇಕಾಗತಕ್ಕ ಹಣ ೧ ಲಕ್ಷ ರೂಪಾಯಿಗಳು. ಈ ಪ್ರಕಾರ ನೋಡಿದರೆ ಈ ಬಾಬಿಗೇ ೭೫೦ ಕೋಟಿ ರೂಪಾಯಿಗಳು ಬೇಕಾಗುತ್ತದೆ. ನೀವು ಒದಗಿಸುವುದು ೧೧ ಕೋಟಿ ರೂಪಾಯಿಗಳು. ಇದು ನಿಮ್ಮ ಎಸ್ಟಿಮೇಟ್ ಹಾಗೂ ಆಕ್ಚ್ಯುಯಲ್ಸ್. ಇದರಲ್ಲಿ ಎಷ್ಟು ವ್ಯತ್ಯಾಸ ಇದೆ ಎಂಬುದನ್ನು ನಾವು ನೋಡಬಹುದು. ೮,೦೦೦ ಗ್ರಾಮಗಳಿಗೆ ಇನ್ನೂ ವಿದ್ಯುತನ್ನು ಕೊಟ್ಟಿಲ್ಲ. ಅವರು ಕತ್ತಲಿನಲ್ಲಿ ದ್ದಾರೆ. ಪಕ್ಕದ ತಮಿಳುನಾಡಿನವರು ೯ ಲಕ್ಷ ಪಂಪುಸೆಟ್ಟುಗಳನ್ನು ಎನರ್‌ಜೈಸ್ ಮಾಡಿದ್ದಾರೆ. ೧೦೦ ಪರ್ಸೆಂಟ್ ರೂರಲ್ ಎಲೆಕ್ಟ್ರಿಫಿಕೇಷನ್ ಮಾಡಿದ್ದಾರೆ. ನೀವು ೨೬.೦೦೦ ಹಳ್ಳಿ ಗಳಲ್ಲಿ ಇನ್ನೂ ೮ಸಾವಿರ ಹಳ್ಳಿಗಳಿಗೆ ವಿದ್ಯುತ್ತನ್ನು ಒದಗಿಸಿಲ್ಲ. ಇನ್ನು ಜ್ಞಾನಮಂದಿರಗಳ ಬಗ್ಗೆ ಹೇಳಿದ್ದೀರಿ. ಇವನ್ನು ಹಿಂದಿನ ಸರ್ಕಾರ ಮಾಡಿದ್ದು. ನೀವು ಕೆಲವು ಹಿಂದಿನ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಹೋಗು ತ್ತಿದ್ದೀರಿ. ಸರ್ಕಾರೀ ಉದ್ಯಮಗಳು ಏನಿವೆ ಅವುಗಳು ಬಹಳ ಚೆನ್ನಾಗಿ ಕೆಲಸ ಮಾಡಿಕೊಂಡು ಹೋಗು ತ್ತವೆಂದು ಹೇಳಿದ್ದೀರಿ. ಇದಕ್ಕಿಂತ ತಪ್ಪುದಾರಿಗೆ ಎಳೆಯತಕ್ಕಂಥ ಹೇಳಿಕೆ ಮತ್ತೊಂದಿಲ್ಲ. ೪೬ ಉದ್ದಿಮೆಗಳಲ್ಲಿ ಸರ್ಕಾರ ತನ್ನ ಬಂಡವಾಳವನ್ನು ತೊಡಗಿಸಿದೆ, ಅವುಗಳ ಪೈಕಿ ೫ ಉದ್ದಿಮೆಗಳು ಮಾತ್ರ ಲಾಭದಲ್ಲಿವೆ. ಇನ್ನು ೪೦ ಉದ್ದಿಮೆಗಳು ನಷ್ಟದಲ್ಲಿವೆ. ಇದನ್ನು ನೋಡಿ ಬಹಳ ನಷ್ಟವಾಗುತ್ತದೆಂದು ಹೇಳಿದ್ದೀರಿ. ಇದ್ದುದನ್ನು ಇದ್ದಹಾಗೆ ಹೇಳುವುದಕ್ಕೆ ನಿಮಗೆ ಇರತಕ್ಕ ಕಷ್ಟವಾದರು ಏನು ? ಕಬ್ಬಿಗೆ ಬೆಲೆಯನ್ನು ನಿಗದಿ ಮಾಡಿದಿರಿ, ಇನ್ನು ಅನಿಶ್ಚತತೆಯಲ್ಲಿಯೇ ಇದೆ. ೬ ಲಕ್ಷ ಟನ್ ಸಕ್ಕರೆ ಉತ್ಪಾದನೆ ಮಾಡುತ್ತೇವೆಂದು ಹೇಳಿದಿರಿ, ಬೆಲೆ ಬಗ್ಗೆ ದಾರಿ ತಪ್ಪಿದರೆ ಮೂರುವರೆ ಲಕ್ಷ ಟನ್ ಜನ ವಾಪಸ್ಸು ಹೋಗುತ್ತಾರೆ. ಸರ್ಕಾರ ನಿಶ್ಚಿತವಾದಂಥ ಬೆಲೆಯನ್ನು ಕೊಟ್ಟು ಜನರಲ್ಲಿ ವಿಶ್ವಾಸ ಬರುವಹಾಗೆ ಮಾಡ ಬೇಕು. ಒಂದು ಕಡೆ ಬೆಲೆ ಹತೋಟಿಯಲ್ಲಿಟ್ಟಿದ್ದೇವೆಂದು ಹೇಳುತ್ತೀರಿ. ಕಳೆದ ವರ್ಷಕ್ಕಿಂತ ಸಗಟು ವ್ಯಾಪಾರ ಬೆಲೆ ಶೇಕಡ ೧೪ ಪರ್ಸೆಂಟ್ ಜಾಸ್ತಿಯಾಗಿದೆ. ಈ ವರ್ಷ ೩.೦೯ಕ್ಕೆ ಇಳಿದಿದೆಯೆಂದು ಹೇಳಿದ್ದೀರಿ. ವಾಸ್ತವಿಕವಾಗಿ ೧೪ ಪರ್ಸೆಂಟ್ ಕಾಯಂ ಆಗಿ ೩.೦೮ ಪರ್ಸೆಂಟ್ ಹೆಚ್ಚಾಗಿದೆ. ನಿಮ್ಮ ಹೋಲ್‌ಸೇಲ್ ಪ್ರೈಸ್ ಇಂಡೆಕ್ಸ್ ಪ್ರಕಾರ ೨.೨೦ಕ್ಕೆ ಅಕ್ಕಿ ಕೊಡಿ ಅಂದರೆ ಯಾರು ಕೊಡುತ್ತಾರೆ ? ೩.೮೦ ಪೈಸೆಯನ್ನೇ ಕೊಡಬೇಕು. ಸಾಮಾನ್ಯ ಜನತೆಯನ್ನು ಅಂಕಿ ಸಂಖ್ಯೆಗಳ ಕಾಡಿನಲ್ಲಿ ದಾರಿ ತಪ್ಪಿಸುವುದಕ್ಕೆ ಪ್ರಯತ್ನ ಮಾಡಿದ್ದೀರಿ. ಮೊದಲನೆಯದಾಗಿ ನಿಮಗೆ ನೀವೆ ವಂಚನೆ ಮಾಡಿಕೊಳ್ಳು ತ್ತಿದ್ದೀರಿ. ನಿಮಗೆ ತಪ್ಪು ಗೊತ್ತಿದ್ದು ಅದನ್ನು ಒಪ್ಪಿಕೊಳ್ಳುತ್ತಿಲ್ಲ. ಅದಕ್ಕೇ ಏನು ಮಾಡುತ್ತೀರಿ ೧೯೭೬ರಲ್ಲಿ ಹೀಗಿತ್ತು, ಅದಕ್ಕಿಂತ ಉತ್ತಮವಾಗಿದೆಯೆಂದು ಹೇಳುತ್ತೀರಿ. ನಿಮ್ಮ ಅಂಕಿ ಸಂಖ್ಯೆಗಳ ಪ್ರಕಾರವೇ ಅರಸು ಅವರ ಕಾಲದಲ್ಲಿ ಡವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ೫೮.೬೬ ಕೋಟಿ ಇದ್ದುದ್ದು, ಅಗ್ರಿಕಲ್ಚರ್ ಅಂಡ್ ಅಲೈಡ್ ಆಕ್ಟಿವಿಟೀಸ್ ಮೂರು ಪಟ್ಟು ಅಂದರೆ ೧೫೦ ಕೋಟಿ ರೂಪಾಯಿ ೭೯–೮೦ರಲ್ಲಿ ಜಾಸ್ತಿಯಾಯಿತು ಪುಟ ೨೬ ಎಕಾನಮಿಕ್ ಸರ್ವೇನಲ್ಲಿದೆ, ನೀವು ಅಧಿಕಾರಕ್ಕೆ ಬಂದಮೇಲೆ ೮೦–೮೧ ಮತ್ತು ೮೧–೮೨ಕ್ಕೆ ೧೮೦ ಕೋಟಿ ರೂಪಾಯಿಗೆ ನಿಲ್ಲಿಸಿದಿರಿ ಅಲ್ಲೇ ಇದೆ.

ಶ್ರೀ ವೈ. ರಾಮಕೃಷ್ಣ.—ಗ್ಯಾಪ್ ಎಷ್ಟು ವರ್ಷ ಹೇಳಿ ಸ್ವಾಮಿ.

ಶ್ರೀ ಜೆ. ಎಚ್. ಪಟೇಲ್.—೮೦ರ ಹೊತ್ತಿಗೆ ೧೫೦ ಕೋಟಿ ರೂಪಾಯಿಗೆ ಹೋಯಿತು. ಎರಡು ವರ್ಷದಲ್ಲಿ ೦.೯೭ ಪರ್ಸೆಂಟ್ ಆಯಿತು, ಇನ್ನು ಹತ್ತು ವರ್ಷವಾದರೂ ಅವರ ಜೊತೆಗೆ ನೀವು ಬರುವುದಿಲ್ಲ.

ಶ್ರೀ ವೈ. ರಾಮಕೃಷ್ಣ.—ಇದು ರಾಜಕೀಯ ಭಾಷಣ.

ಶ್ರೀ ಜೆ. ಎಚ್. ಪಟೇಲ್.—ರಾಜಕೀಯ ಭಾಷಣದ ಪ್ರಶ್ನೆಯಲ್ಲ ನಿಮ್ಮ ಸಂಖ್ಯೆಗಳೇ ಮಾತ ನಾಡುತ್ತೇವೆ. ಆದರೆ, ಅಭಿವೃದ್ಧಿಯೇತರ ವೆಚ್ಚಗಳು ಸಮೃದ್ಧವಾಗಿ ಏಂವೆ. ಪ್ರತಿಯೊಂದು ಬಾಬಿನಲ್ಲೂ ೫೦–೩೫–೭೦ ಪರ್ಸೆಂಟ್ ಏರಿಕೊಂಡು ಹೋಗಿದೆ.

ಶ್ರೀ ವೈ. ರಾಮಕೃಷ್ಣ.—ಅದನ್ನು ಓದಿ.

ಶ್ರೀ ಜೆ. ಹೆಚ್. ಪಟೇಲ್.—ಡಿಸಚಾರ್ಜ ಇಂಟರ್‌ನಲ್ ಡೆಟ್, ಕ್ಯಾಪಿಟಲ್ ಎಕ್ಸಪೆಂಡೀಚರ್. ಪಬ್ಲಿಕ್ ವರ್ಕ್ಸ್ ಜನರಲ್ ಸರ್ವೀಸಸ್ ಯಾವುದರಲ್ಲೂ ಅಭಿವೃದ್ಧಿಯಾಗಿಲ್ಲ. ಎಲ್ಲದರಲ್ಲೂ ಮೈನಸ್ ಆಗಿದೆ. ನಾನ್ ಡೆವಲಪ್‌ಮೆಂಟ್ ಎಕ್ಸ್‌ಪೆಂಡೀಚರ್ ಅಭಿವೃದ್ಧಿಯಾಗಿದೆ. ತಾವು ತೆರಿಗೆಯನ್ನು ಹಾಕಿದ್ದೀರಿ, ಅರಸು ಅವರ ಕಾಲದಲ್ಲಿ ನೇರ ತೆರಿಗೆ ೫೦ ಕೋಟಿ ಹಾಕಿದ್ದರು. ನೀವು ಅಧಿಕಾರಕ್ಕೆ ಬಂದ ಮೇಲೆ ಪ್ರತಿ ವರ್ಷವೂ ಒಂದೊಂದು ಕೋಟಿ ಏರಿಸಿಕೊಂಡು ಹೋಗಿದ್ದೀರಿ., ೫೪ ಕೋಟಿಗೆ ಏರಿಸಿದ್ದೀರಿ. ಜನರು ಬಳಸುವಂತ ಬೀಡಿ ಬೆಂಕಿಪೊಟ್ಟಣ, ತರಕಾರಿ ಇದನ್ನು ಮಾತ್ರ ಬಹಳ ದಾರಾಳವಾಗಿ ಏರಿಸಿದ್ದೀರಿ, ೩೫೪ ಕೋಟಿ ಇದ್ದದ್ದು ಒಂದು ವರ್ಷಕ್ಕೆ ೪೨೦ ಕೋಟಿ ರೂಪಾಯಿ ಮಾಡಿದ್ದೀರಿ. ಕಮಿಡಿಟೀಸ್ ಟ್ಯಾಕ್ಸ್ ೧೯೭೮–೭೯ರಲ್ಲಿ ೩೫೪ ಕೋಟಿ ಇದ್ದುದ್ದು, ೮೦ ಕೋಟಿ ರೂಪಾಯಿಗಳನ್ನು ಒಂದು ವರ್ಷಕ್ಕೆ ಜಾಸ್ತಿ ಮಾಡಿದಿರಿ. ರೆವಿನ್ಯೂ ಅಂಡ್ ಕ್ಯಾಪಿಟಲ್ ರಿಸೀಟ್ಸ್. ಸಾಮಾನ್ಯ ಜನರ ಮೇಲೆ ಹಾಕತಕ್ಕಂಥ ತೆರಿಗೆ ಒಂದು ವರ್ಷಕ್ಕೆ ೭೦ ಪರ್ಸೆಂಟ್ ಜಂಪಾಯಿತು. ಆದರೆ, ಬಂಡವಾಳ ಶಾಹಿಗಳ ಮೇಲೆ ಹಾಕಿರ ತಕ್ಕಂಥ ತೆರಿಗೆ ೦.೨೯ ಅಥವಾ ೧.೮೯ ಪರ್ಸೆಂಟ್. ನೀವು ಯಾರ ಜೇಬಿಗೆ ಕೈಹಾಕುತ್ತೀರೆನ್ನುವುದು ಎಕಾನಾಮಿಕ್ ಸರ್ವೆ ಹೇಳುತ್ತದೆ. ಪ್ರೈಸ್ ಇಂಡೆಕ್ಸ್ ವಿಚಾರದಲ್ಲಿ ೧೯೭೦ನೇ ಇಸವಿಯನ್ನು ಬೇಸಿಸ್ ಆಗಿ ಇಟ್ಟುಕೊಂಡರೆ ಹೋಲ್‌ಸೇಲ್ ಪ್ರೈಸ್ ೧೦೦ ಇದ್ದರೆ, ೧೯೮೦ಕ್ಕೆ ೫೦೧ ಪಾಯಿಂಟ್ಸ್ ಇನ್‌ಕ್ರೀಸ್ ಆಗಿದೆ. ೧೯೮೧ಕ್ಕೆ ೫೦೧ ರಿಂದ ೬೩೭ಕ್ಕೆ ಹೋಗಿದೆ, ೨೫ ಪರ್ಸೆಂಟ್ ಇನ್‌ಕ್ರೀಸ್ ಆಗಿದೆ. ಡಿಸೆಂಬರ್ ೧೯೮೧ರಲ್ಲಿ ೧೪ ಪರ್ಸೆಂಟ್ ಇನ್‌ಕ್ರೀಸ್ ಆಗಿದೆ. ೨೩.೭ + ೩.೮ ನೀವು ಕೊಟ್ಟ ಸಂಖ್ಯೆಗಳ ಪ್ರಕಾರ ೨ ವರ್ಷದಲ್ಲಿ ಶೇಕಡ ೩೦ ಭಾಗ ಪ್ರೈಸೆ ಇಂಡೆಕ್ಸ್ ಮೇಲೆ ಹೋಗಿದೆ. ಆಯವ್ಯಯ ಪತ್ರದಲ್ಲಿ ತಾವು ಏನನ್ನೋ ಸಾಧಿಸಿದ್ದೇವೆಂದು ಹೇಳಿಕೊಂಡಿದ್ದೀರಿ. ಹೊರಗೆ ಹೇಳುವುದು ರಾಜಕೀಯ ಭಾಷಣವಾಗ ಬಹುದು. ಹಾರ್ನಳ್ಳಿ ರಾಮಸ್ವಾಮಿಯವರು ಒಂದು ಮಾತು ಹೇಳಿದರು. ನಮ್ಮ ಸರ್ಕಾರೀ ನೌಕರರ ಸಂಖ್ಯೆ ವಿನಾಕಾರಣ ಜಾಸ್ತಿಯಾಗುತ್ತಿದೆ. ಅನುತ್ಪಾದಕ ವೆಚ್ಚಗಳು ಜಾಸ್ತಿಯಾಗುತ್ತಿವೆ. ಇವತ್ತು ರಾಜ್ಯದಲ್ಲಿ ೬ ಲಕ್ಷ ಜನ ನಿರುದ್ಯೋಗಿಗಳು ಇದ್ದಾರೆ.

೪–೦೦ ಪಿ.ಎಂ.

ಈಗ ೬ ಲಕ್ಷ ಜನ ನಿರುದ್ಯೋಗಿಗಳು ಇದ್ದಾರೆ. ಈ ೬ ಲಕ್ಷ ಜನರನ್ನು ನೀವು ಯಾವ ರೀತಿ ಉದ್ಯೋಗದಲ್ಲಿ ತೊಡಗಿಸುತ್ತೀರಿ. ಇದರ ಬಗ್ಗೆ ಯಾವ ರೀತಿ ಯೋಜನೆ ಹಾಕಿಕೊಂಡಿದ್ದೀರಿ. ಈ ಸಾಗರ ದೀಪ, ಗೃಹ ಕಲ್ಯಾಣ, ಇವೆಲ್ಲಾ ಅಡಗಲಜ್ಜಿ ಕತೆ ಹೇಳಬೇಡಿ. ಈ ಆಕಾಶ ದೀಪ ತೋರಿಸು ವುದು ಇದೆಯಲ್ಲ, ಅದನ್ನು ತೋರಿಸಲಿಕ್ಕೆ ಹೋಗಬೇಡಿ. ಇವೊತ್ತು ೬ ಲಕ್ಷ ೨ ಸಾವಿರ ಜನ ನಿರುದ್ಯೋಗಿ ಹುಡುಗರು, ಹುಡುಗಿಯರು ಇದ್ದಾರಲ್ಲಾ ಇವರ ಬಗ್ಗೆ ಏನು ಕಾರ್ಯಕ್ರಮ ಹಾಕಿಕೊಂಡಿ ದ್ದೀರಿ ಇವೊತ್ತು ನಮ್ಮ ಖಜಾನೆಗೆ ಶೇಕಡ ೮೦ ಭಾಗ ಜನ ರೈತರೇ ಹಣ ತುಂಬತಕ್ಕವರು, ನಿಮ್ಮ ಖಜಾನೆಗೆ ನೂರಕ್ಕೆ ಅರವತ್ತರಷ್ಟು ಹಣವನ್ನು ರೈತರು ತುಂಬುತ್ತಿದ್ದಾರೆ ಅವರಿಗೆ ನೀವು ೧೩ ರೂಪಾಯಿನಷ್ಟು ಹಣವನ್ನು ಖರ್ಚು ಮಾಡುತ್ತಿದ್ದೀರಿ. ಇವೊತ್ತು ಅವರ ಬೆಳೆಗಳ ಪ್ರಶ್ನೆ ಏನು. ಇನ್ನು ಸರ್ಕಾರಿ ನೌಕರರ ಹುದ್ದೆಗಳು ಸುಮಾರು ೪೨ ಸಾವಿರ ಖಾಲಿ ಇವೆ ಎಂದು ಹೇಳಿದ್ದೀರಿ. ಜಗತ್ತಿನ ಯಾವುದೇ ರಾಷ್ಟ್ರ ತೆಗೆದುಕೊಂಡರು ಲೇಖಣಿ ಕೊರೆಯುವ ಜನ ಕುಲಕರ್ಣಿಗಳು ಯಾವ ದೇಶದಲ್ಲೂ ಇಷ್ಟು ಇಲ್ಲ. ಇವೊತ್ತು ಸರ್ಕಾರಿ ಕಛೇರಿಗಳಲ್ಲಿ ಇರತಕ್ಕ ಜನರಿಗೆ ಕೆಲಸ ಇಲ್ಲ. ಬಹುಶಃ ಈಗ ತಾವು ಫೈಲ್ ಕ್ಲಿಯರೆನ್ಸ್, ಅಂತಾದ್ದು, ಇಂತಾದ್ದು ಅಂತ ಹೇಳಿದ್ದೀರಿ, ಅದು ಸ್ವಲ್ಪ ಮಟ್ಟಿಗೆ ಕೆಲಸ ಆಗಿರಬಹುದು. ವಾಸ್ತವಿಕವಾಗಿ ತಾಲೂಕು ಆಫೀಸ್ ಮಟ್ಟದಲ್ಲಿ, ಸಬ್‌ರಿಜಿಸ್ಟ್ರಾರ್ ಆಫೀಸ್ ಮಟ್ಟದಲ್ಲಿ, ಯಾವ ರೀತಿ ನಡೆಯುತ್ತಿದೆ. ಡಿಸ್ಟ್ರಿಕ್ಟ್ ಅಡ್ಮಿನಿಸ್ಟ್ರೇಷನ್, ತಾಲೂಕ್ ಲೆವೆಲ್ ಅಡ್ಮಿನಿ ಸ್ಟ್ರೇಷನ್, ತಾಲೂಕ್ ಲೆವೆಲ್ ಪ್ಲಾನಿಂಗ್, ತಾಲೂಕ್ ಲೆವೆಲ್ ಬಡ್ಜಟ್ ಏನಿದೆ, ಇದರ ಬಗ್ಗೆ ನಿಮಗೆ ಏನಾದರೂ ಕಲ್ಪನೆ ಇದೆಯೇ ? ನೀವು ಬೆಂಗಳೂರಿನಲ್ಲಿ ಕುಳಿತುಕೊಂಡು ತೀರ್ಮಾನ ಮಾಡಿ ಇಂತಾದ್ದಕ್ಕೆ ಇಷ್ಟು ಹಣ ಖರ್ಚು ಮಾಡುತ್ತೇವೆಂದು ಹೇಳುತ್ತೀರಿ, ಅದಕ್ಕೆ ಅವರು ಹೊಂದಿಕೊಳ್ಳಬೇಕು. ನಿಜ ವಾದ ಅವಶ್ಯಕತೆ ಏನಿದೆ ಅದರ ಬಗ್ಗೆ ಯೋಚನೆ ಮಾಡುತ್ತೀರಾ ? ತಾವು ಯಾವುದಾದರೂ ಎರಡು

ವಿಷಯಗಳನ್ನು ತೆಗೆದುಕೊಂಡು ಸಂಪೂರ್ಣವಾದಂಥ ಕೆಲಸ ಮಾಡಿ. ತಿರುಪತಿ ಕ್ಷೌರ ಮಾಡುವುದರ ಬದಲು ಯಾವುದಾದರೂ ಒಂದೆರಡು ಮೇಜರ್ ಕೆಲಸ ತೆಗೆದುಕೊಂಡು ಸಂಪೂರ್ಣಗೊಳಿಸಲಿಕ್ಕೆ ಪ್ರಯತ್ನ ಮಾಡಿ. ಉದಾಹರಣೆಗೆ ಶಿಕ್ಷಣ, ನಿರುದ್ಯೋಗ, ಎಲ್ಲರನ್ನೂ ಅಕ್ಷರಸ್ಥರನ್ನಾಗಿ ಮಾಡುತ್ತೇವೆ ಎಂದು ಹೇಳಿ, ಹೆಚ್ಚು ಹಣ ವಿನಿಯೋಗಿಸಿ ನಿರುದ್ಯೋಗ ಸಮಸ್ಯೆ ಬಗೆಹರಿಸುತ್ತೇವೆಂದು ಹೇಳಿ, ಆ ರೀತಿ ಯಾವುದಾದರೂ ಎರಡು ಕಾರ್ಯಕ್ರಮಗಳನ್ನು ಸರಿಯಾಗಿ ಮಾಡಿದರೆ ಒಪ್ಪಬಹುದು. ಅದನ್ನು ಬಿಟ್ಟು ಬಿಟ್ಟು ನೀವು ಯಾವು ಯಾವುದಕ್ಕೋ ಹಣ ಒದಗಿಸಿದರೆ ಏನಾಗುತ್ತದೆ ಎಂದರೆ ಆ ಹಣ ಎಲ್ಲಾ ಕಡೆ ಸುತ್ತಿಕೊಂಡು ಅದು ಮತ್ತೆ ಎಲ್ಲಿ ಬಂದು ಸೇರಬೇಕೋ ಅದು ಅಲ್ಲಿಗೆ ಸೇರುತ್ತದೆ. ಅಂತಾದ್ದಕ್ಕೆ ನೀವು ಹೆಚ್ಚು ಪ್ರೋತ್ಸಾಹ ಕೊಡುವುದು. ಹಣಕ್ಕೆ ಮೂಲಭೂತವಾದ ಗುಣ ಇದೆ. ಹಳ್ಳಿಗಾಡಿನಲ್ಲಿ ಒಂದು ಮಾತನ್ನು ಹೇಳುತ್ತಾರೆ. ಹಣ ಇರುವ ಕಡೆ ಹಣ ಸೇರುತ್ತದೆ ಎಂದು. ನೀರು ಇರುವ ಕಡೆಗೆ ನೀರು ಹೋಗಿ ಸೇರುತ್ತದೆ. ಎಂದು ಹೇಳುತ್ತಾರೆ. ಆದ್ದರಿಂದ, ಇವೆಲ್ಲದರ ಬದಲು ಯಾವುದಾದರು ಎರಡು ಕಾರ್ಯಕ್ರಮ ತೆಗೆದುಕೊಂಡು ಒಳ್ಳೆಯ ಕೆಲಸ ಮಾಡಬೇಕೆಂದು ನಾನು ಒಂದು ಸಲಹೆ ಕೊಡಲಿಕ್ಕೆ ಇಷ್ಟಪಡುತ್ತೇನೆ.

ಶ್ರೀ ವೈ. ರಾಮಕೃಷ್ಣ.—ನೀವು ಅಷ್ಟೇ ತೆಗೆದುಕೊಳ್ಳುತ್ತೀರಾ ?

ಶ್ರೀ ಜೆ. ಹೆಚ್. ಪಟೇಲ್ —ಅದಕ್ಕೆ ಹೆಚ್ಚು ಪ್ರಾಧಾನ್ಯತೆ ಕೊಡಿ ಎಂದು ಹೇಳುತ್ತಿದ್ದೇನೆ. ಉದಾಹರಣೆಗೆ ಹೇಳುವುದಾದರೆ ನಮ್ಮ ಕಡೆ ಕಟ್ಟಿಗೆ ಸಮಸ್ಯೆ ಎಷ್ಟು ಇದೆ ಎಂದರೆ ಅಲ್ಲಿ ಬಡವರು ಭತ್ತದ ಹುಲ್ಲಿನಲ್ಲಿ ಅಡುಗೆ ಮಾಡಿಕೊಂಡು ಅವರು ಹೇಗೆ ಊಟ ಮಾಡಬೇಕು ಅದನ್ನು ತಾವು ನೋಡಿದರೆ ಗೊತ್ತಾಗುತ್ತದೆ. ಅವರು ಭತ್ತದ ಹುಲ್ಲಿನಲ್ಲಿ ಅಡುಗೆ ಮಾಡುವುದರಿಂದ ಅವರ ಬೂದಿಯೆಲ್ಲಾ ಮುದ್ದೆಯಲ್ಲಿ ಸೇರಿಕೊಳ್ಳುತ್ತದೆ. ಇವೊತ್ತು ಕಟ್ಟಿಗೆ ಸಮಸ್ಯೆ ಬಗೆಹರಿಸಬೇಕು, ಅರಣ್ಯವನ್ನು ಕಡಿಯದೇ ಉಳಿಸಿಕೊಳ್ಳಬೇಕು. ಈ ರೀತಿ ಆದರೆ ಕಟ್ಟಿಗೆ ಸಮಸ್ಯೆ ಬಗೆಹರಿಸುವುದು ಹೇಗೆ. ಇವೊತ್ತು ೧೦೦ ಕೋಟಿ ರೂಪಾಯಿ ಖರ್ಚು ಮಾಡಬೇಕಾದಂಥ ಒಂದು ಯೋಜನೆಗೆ ೨ ಕೋಟಿ ರೂಪಾಯಿ ಖರ್ಚು ಮಾಡಿದ್ದೀರಿ. ಬಯೋಗ್ಯಾಸ್ ಪ್ಲಾಂಟ್ ಬಗ್ಗೆ ವಿಚಾರ ಮಾಡಿದ್ದೇವೆಂದು ಹೇಳಿದ್ದೀರಿ, ಇದು ಸಾಧುವಲ್ಲ. ಇದರಿಂದ ಜನರ ಮೂಗಿಗೆ ತುಪ್ಪ ಹಚ್ಚಬಹುದು ಅಷ್ಟೇ, ಬಡ ಜನರಿಗೆ ಕೆಲವು ದಿವಸ ಮೋಸ ಮಾಡಬಹುದು ಅಷ್ಟೇ, ಎಲ್ಲಾ ಕಾಲಕ್ಕೂ ಮೋಸ ಮಾಡಲಿಕ್ಕೆ ಆಗುವುದಿಲ್ಲ. ಇವೊತ್ತು ಜನರು ಕೊಡತಕ್ಕಂತಾದ್ದು ೧೧೪೭ ಕೋಟಿ ರೂಪಾಯಿ, ಬೇರೆ ಕಡೆ ಸಾಲ ತಂದಿರುವುದು, ಕೇಂದ್ರ ಸರ್ಕಾರದಿಂದ ಸಾಲ ತಂದಿರುವುದು, ಇವುಗಳಿಂದ ನಿಜವಾಗಿಯೂ ಕೂಡ ಜನರಿಗೆ ನೇರವಾಗಿ ಬೆನಿಫಿಟ್ ಸಿಕ್ಕುತ್ತಿಲ್ಲ. ಸರಿಯಾದಂಥ ಕಾರ್ಯಕ್ರಮಕ್ಕೆ ಹಂಚುವ ಬದಲಾಗಿ ಅನಾವಶ್ಯಕವಾದಂಥ, ಉತ್ಪಾದನೆ ಇಲ್ಲದೇ ಇರತಕ್ಕ ವ್ಯವದಾನಗಳ ಮೇಲೆ ಹೆಚ್ಚು ಹಣ ಖರ್ಚು ಮಾಡಿದ್ದಾರೆ. ಜನರಿಗೆ ಇದರಿಂದ ಏನೂ ಆಗಿಲ್ಲ. ಆದರೆ ಒಂದು ವಿಚಾರ ಏನಾಗಿದೆ ಎಂದರೆ, ಭ್ರಷ್ಟಾಚಾರ ಮಾತ್ರ ಇವೊತ್ತು ಜೀವನದ ಒಂದು ವ್ಯವಸ್ಥೆಯಾಗಿದೆ. ನಿಮ್ಮ ಸರ್ಕಾರ ನಡೆಸತಕ್ಕ ಧಾಟಿ ನೋಡಿದರೆ ಭ್ರಷ್ಟಾಚಾರ ತುಂಬಿದೆ. ಹಿಂದೆ ರಾಜಗೋಪಾಲಚಾರಿ ಅವರ ಕಾಲದಲ್ಲಿ ಭ್ರಷ್ಟಾಚಾರ ಇರಲಿಲ್ಲವೇ ಎಂದು ಹೇಳಬಹುದು. ಇವೆಲ್ಲವೂ ಹೊಣಗೇಡಿತನದ ಮಾತು ಆಗುತ್ತದೆ. ಈಗ ಭ್ರಷ್ಟಾಚಾರ ನಡೆಯುತ್ತಿರತಕ್ಕ ರೀತಿಯನ್ನು ಹೇಳುವುದಾದರೆ, ಮೊದಲು ಇವರು ಯಾರೋ ಒಬ್ಬರು ಇಂಜಿನಿಯರ್ ಸುಬ್ಬಯ್ಯ ಎನ್ನುವವರನ್ನು ಹಿಡಿದರು, ಅವರ ಮನೆಯಲ್ಲಿ ೩ ಲಕ್ಷ ರೂಪಾಯಿ ಸಿಕ್ಕಿತು ಅಂತ ಪತ್ರಿಕೆಯಲ್ಲಿ ಬಂದಿತ್ತು. ಹಾಗೆ ಶ್ರೀಕಂಠಯ್ಯನವರ ಮನೆಯಲ್ಲಿ ೪ ಕೋಟಿ ರೂಪಾಯಿ ಸಿಕ್ಕುತ್ತದೆ, ಗುಂಡೂರಾವ್ ಅವರ ಮನೆಯಲ್ಲಿ ೩ ಕೋಟಿ ರೂಪಾಯಿ ಸಿಕ್ಕುತ್ತದೆ ಎನ್ನುವ ಒಂದು ಹವಾ ಇತ್ತು. ಈ ಹಣ ಎಲ್ಲಾ ಬಂದರೆ, ಬಾವಿಗಳನ್ನು ತೆಗೆಸಬಹುದು, ಕೆರೆಗಳನ್ನು ಕಟ್ಟಿಸಿಕೊಳ್ಳಬಹುದು ಎನ್ನುವುದು ನಮ್ಮ ಮನಸ್ಸಿನಲ್ಲಿತ್ತು. ಆದರೆ ಸುಬ್ಬಯ್ಯನವರದು ಒಂದೇ ಒಂದು ವಿಚಾರ ಬಂದಿದ್ದು. ಆಮೇಲೆ ಯಾರೊಬ್ಬರ ವಿಚಾರವೂ ಬರಲಿಲ್ಲ. ಸುಬ್ಬಯ್ಯನವರ ವಿಚಾರ ಮಾತ್ರ ಒಂದು ಬಾತು. ಆ ಹಣ ಎಲ್ಲಿ ಹೋಯಿತೋ ಅದು ಕೂಡ ಗೊತ್ತಾಗಲಿಲ್ಲ. ಭ್ರಷ್ಟಾಚಾರ ನಿಯಂತ್ರಣ ಮಾಡಬೇಕಾದರೆ ತಮ್ಮ ಮಂತ್ರಿಮಂಡಲ ಬಂದಾಗ ತಾವು ಏನು ಹೇಳಿದಿರಿ ಬ್ಲಾಕ್‌ಮಾರ್ಕೆಟಿಯರ್ಸ್ ಬಲಿಹಾಕುತ್ತೇವೆ ಎಂದು ಹೇಳಿದ್ದಿರಿ. ನೀವು ಹೇಳಿದ ಹಾಗೆ ಮಾಡದೇ ಇರುವುದರಿಂದ ಇವೊತ್ತು ಏನಾಗುತ್ತಿದೆ. ಯಾರೂ ಭ್ರಷ್ಟಾಚಾರ ಮಾಡುವುದಿಲ್ಲ, ಭ್ರಷ್ಟಾಚಾರ ಮಾಡದೇ ಇದ್ದವನೇ ಅವನೊಬ್ಬ ಮುಠ್ಠಾಳ ಅಂತ ವಾತಾವರಣ ಇದೆ. ತಾಲೂಕ್ ಲೆವೆಲ್ ಅಧಿಕಾರಿಗಳು, ಸಬ್‌ರಿಜಿಸ್ಟ್ರಾರ್, ತಹಶೀಲ್ದಾರ್, ಬಿ.ಡಿ.ಓ. ಏನಿದ್ದಾರೆ ಇವರು ಇವೊತ್ತು ನಿರ್ಭಯವಾಗಿ ಜನರನ್ನು ದುಡ್ಡು ಕೇಳುತ್ತಿದ್ದಾರೆ. ಹಳ್ಳಿಗಾಡಿನಿಂದ ಬಂದಿರತಕ್ಕ, ಪಟ್ಟಣದಲ್ಲಿರತಕ್ಕ ಪ್ರತಿಯೊಬ್ಬ

ಶಾಸಕರಿಗೂ ಈ ವಿಚಾರ ಗೊತ್ತಿದೆ. ಈಗ ತಾಲೂಕ್ ಲೆವೆಲ್‌ನಲ್ಲಿ, ಬಿ.ಡಿ.ಓ., ತಹಶೀಲ್ದಾರ್ ಮತ್ತು ಸಬ್‌ರಿಜಿಸ್ಟ್ರಾರ್, ಈ ಮಟ್ಟದವರೆಲ್ಲಾ ನಿರ್ಭಯವಾಗಿ ಹಣ ಕೇಳುತ್ತಿದ್ದಾರೆ. ಹಿಂದೆ ತೆಗೆದುಕೊಳ್ಳುತ್ತಾ ಇರಲಿಲ್ಲವೇ ಎಂದು ಕೇಳಬಹುದು ಹಿಂದೆ ಈ ರೀತಿ ಕೇಳಲಿಕ್ಕೆ ನಾಚಿಕೊಳ್ಳುತ್ತಿದ್ದರು. ಈಗ ನೀವು ಕೊಟ್ಟರೆ ಮಾಡುತ್ತೇವೆ ಎಂದು ಹೇಳುತ್ತಾರೆ. ಮೊನ್ನೆ ಹೈಕೋರ್ಟ್ ರಿಟೈರ್ ಜಡ್ಜ್ ರಿಜಿಸ್ಟ್ರೇಷನ್‌ಗೆ ಹೋದಾಗ ನೀವು ದುಡ್ಡು ಕೊಟ್ಟರೆ ಮಾಡುವುದು ಇಲ್ಲದೇ ಇದ್ದರೆ ಇಲ್ಲ, ನೀವು ಏನಾದರೂ ಮಾಡಿಕೊಳ್ಳಿ ಎಂದು ಮುಖಕ್ಕೆ ಹೊಡೆದ ಹಾಗೆ ಹೇಳಿದ್ದಾರೆ. ಇನ್ನು ನಾನು ಬಸ್‌ನಲ್ಲಿ ಸಂಚಾರ ಮಾಡುವಾಗ ಡ್ರೈವರ್ ದುಡ್ಡು ತೆಗೆದುಕೊಂಡು ಕರೆದುಕೊಂಡು ಹೋಗಿದ್ದನ್ನು ನೋಡಿದ್ದೇನೆ. ಆ ಡ್ರೈವರ್ ಮೇಲೆ ನಾನು ಕಂಪ್ಲೈಂಟ್ ಕೊಡಬಹುದಾಗಿತ್ತು. ಇವೊತ್ತು ಡ್ರೈವರ್, ಕಂಡಕ್ಟರ್. ಆ ಎಂಟೈರ್ ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್ ಏನಿದೆ, ಆ ಕಾರ್ಪೋರೇಷನ್‌ಗೆ ಸಂಬಂಧ ಇದೆ. ೪ ಸಾವಿರ ಬಸ್ಸು ಓಡಿಸತಕ್ಕ ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್ ಈ ವರ್ಷ ಸಾಕಷ್ಟು ಲುಕ್ಸಾನು ಅನುಭವಿಸಿದೆ. ಟ್ರಾನ್ಸ್‌ಪೋರ್ಟ್ ಕಾರ್ಪೋರೇಷನ್ ಬಗ್ಗೆ ಅವರು ಏನು ಹೇಳಿದ್ದಾರೆ ಎಂದರೆ ೧೯೮೦–೮೧ರಲ್ಲಿ ದಾವಣಗೆರೆ ಮತ್ತು ಬೀದರ್‌ಗಳಲ್ಲಿ ಹೊಸ ಡಿಪೋಗಳನ್ನು ತೆರೆಯಲಾಗಿದೆ. ೧೯೮೧ರ ಮಾರ್ಚ್ ೩೧ನೇ ದಿನಾಂಕದಂದು ಓಡಾಡುವ ಬಸ್‌ಗಳ ಸರಾಸರಿ ಸಂಖ್ಯೆ ೫೨೧೪ ಇತ್ತು. ಈ ಸಂಖ್ಯೆ ೧೯೮೨ರ ಫೆಬ್ರವರಿ ೬ನೇ ದಿನಾಂಕದಂದು ೫,೬೩೪ ಆಯಿತು. ಈಗ ಹಿಂದಿನ ವರ್ಷ ಪ್ರತಿದಿನ ಪ್ರಯಾಣ ಮಾಡುವ ಪ್ರಯಾಣಿಕರ ಸರಾಸರಿ ಸಂಖ್ಯೆ ೨೪ ಲಕ್ಷವಾಗಿತ್ತು. ಈಗ ಪ್ರತಿ ದಿನದ ಸರಾಸರಿ ಸಂಖ್ಯೆ ೨೮ ಲಕ್ಷ ಪ್ರತಿಯೊಂದರಲ್ಲೂ ಪ್ರಗತಿಯನ್ನು ತೋರಿಸಿದ್ದಾರೆ. ಬಸ್ಸುಗಳ ಸಂಖ್ಯೆಯಲ್ಲಿ ಹೆಚ್ಚಿನ ಓಡಾಟ. ಜನರ ಸಂಖ್ಯೆಯಲ್ಲಿ ಹೆಚ್ಚಿನ ಓಡಾಟ, ಇದೆ ಎಂಬುದನ್ನು ತಾವು ತೋರಿಸಿದ್ದೀರಿ. ಆದರೆ, ಈ ಸಂಸ್ಥೆಯ ನಷ್ಟ ೧೫ ಕೋಟಿ ರೂ. ಈ ವರ್ಷ ಇಷ್ಟು ಹಣ ನಷ್ಟವಾಗಿದೆ ಎಂದರೆ ಇದಕ್ಕೆ ಯಾರು ಹೊಣೆ ? ಮೂಲ ಕಾರಣರು ಯಾರು ? ಈ ರೀತಿ ನಷ್ಟವಾಗುವುದನ್ನು ಕಂಡುಹಿಡಿದು ಬಿಗಿ ಮಾಡುತ್ತೇವೆ ಎನ್ನುವ ಧೋರಣೆ ನಿಮ್ಮಲ್ಲಿಲ್ಲ. ವಿದ್ಯುಚ್ಛಕ್ತಿ ಮಂಡಲಿಯ ಅಧ್ಯಕ್ಷರಾಗಲಿ, ಉಪಾಧ್ಯಕ್ಷರಾಗಲಿ ಸ್ವತಃ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುವುದಿಲ್ಲ. ಇವತ್ತು ನಮಗೆ ಎಷ್ಟು ವಿದ್ಯುಚ್ಛಕ್ತಿ ಅವಶ್ಯಕತೆ ಇದೆ ಅದಕ್ಕಿಂತಲೂ ಕಡಿಮೆಯಾಗಿಯೇ ಉತ್ಪಾದನೆ ಮಾಡುತ್ತಿದ್ದಾರೆ. ಇದು ಸಾಲದೇ ಬರುತ್ತಿರುವುದರಿಂದ ನೆರೆ ರಾಜ್ಯಗಳಿಂದ ವಿದ್ಯುಚ್ಛಕ್ತಿಯನ್ನು ಕೊಂಡುಕೊಂಡು ಗ್ರಾಹಕರಿಗೆ ಒದಗಿಸುತ್ತಿದ್ದಾರೆ. ವಿದ್ಯುಚ್ಛಕ್ತಿ ಮಂಡಲಿಯವರು ಮತ್ತು ಪವರ್ ಕಾರ್ಪೋರೇಷನ್‌ನವರು ಬೇರೆಯವರಿಂದ ಕೊಂಡುಕೊಂಡು ನಮಗೆ ಮಾರಿ ಲಾಭ ಸಂಪಾದನೆ ಮಾಡುತ್ತಿದ್ದಾರೆ. ಭಾರೀ ಸಂಖ್ಯೆಯಲ್ಲಿ ಬಸ್ಸುಗಳನ್ನು ಓಡಿಸತಕ್ಕ ಕರ್ನಾಟಕ ರಸ್ತೆ ಸಾರಿಗೆ ನಿಗಮ, ೧೨೦-೧೫೦ ಕೋಟಿ ರೂ. ಬಂಡವಾಳವನ್ನು ಹಾಕಿರತಕ್ಕ ದೊಡ್ಡ ದೊಡ್ಡ ಕಂಪೆನಿಗಳೂ ನಷ್ಟವನ್ನು ತೋರಿಸುತ್ತಿವೆ. ಪ್ರತಿ ವರ್ಷವೂ ಇದೇ ರೀತಿ ನಷ್ಟವನ್ನು ತೋರಿಸುತ್ತಾ ಜನರ ಚರ್ಮವನ್ನು ಸುಲಿಯುತ್ತಾ ಹೋಗುತ್ತಿರುವ ನಿಮ್ಮ ರಥ ಎಲ್ಲಿಯವರೆಗೆ ಹೋಗುತ್ತದೆ ಎಂಬುದನ್ನು ನಾವು ನೋಡಬೇಕಾಗಿದೆ. ಜನತೆ ತೊಂದರೆಯಲ್ಲಿ ಸಿಕ್ಕಿ ನರಳುತ್ತಿದ್ದಾರೆ. ಮುಂದೆ ಚುನಾವಣೆ ಬಂದಾಗ ಯಾವ ಜನರಿಗೆ ನಿಜವಾಗಿ ತೊಂದರೆಯಾಗಿದೆ ಆ ಜನರ ಮುಂದೆ ನೀವು ಓಟಿಗೆ ಹೋದಾಗ ಅವರು ನಿಮ್ಮ ಚರ್ಮವನ್ನು ಸುಲಿಯುತ್ತಾರೆ........ .

ಶ್ರೀ ಆರ್. ಗುಂಡೂರಾವ್.—ಜನರು ನಮ್ಮ ಚರ್ಮವನ್ನು ಸುಲಿಯುತ್ತಾರೋ, ಅಥವಾ ನಿಮ್ಮ ಚರ್ಮವನ್ನು ಸುಲಿಯುತ್ತಾರೋ ಆಮೇಲೆ ನೋಡೋಣ ಈಗ ಬಜೆಟ್‌ಗೆ ಸಂಬಂಧಪಟ್ಟಂತೆ ಮಾತನಾಡಿ.

ಶ್ರೀ ಜೆ. ಹೆಚ್. ಪಟೇಲ್.—ಈಗಾಗಲೇ ನೀವು ಜನರ ಚರ್ಮವನ್ನು ಸುಲಿದುಬಿಟ್ಟಿದ್ದೀರಿ.

ಶ್ರೀ ಆರ್. ಗುಂಡೂರಾವ್.—ನೀವೇ ಎಲ್ಲಾ ಸುಲಿದುಬಿಟ್ಟಿದ್ದೀರಿ. ಈಗ ಬರೀ ಮೂಳೆ ಮಾತ್ರ ಇದೆ...........

ಶ್ರೀ ಜೆ. ಹೆಚ್. ಪಟೇಲ್.—ಅಷ್ಟೊಂದು ಆತುರ ಬೇಡಿ ರಾಯರೆ........

ಶ್ರೀ ಆರ್. ಗುಂಡೂರಾವ್.—ನೀವು ಇಷ್ಟು ಹೊತ್ತು ಹೇಳಿದ್ದನ್ನೆಲ್ಲಾ ನಾನು ಕೇಳಿದೆ.

ಶ್ರೀ ಜೆ. ಹೆಚ್. ಪಟೇಲ್.—ತೆರಿಗೆಯನ್ನು ತೆಗೆದುಕೊಂಡು ಜನರ ಚರ್ಮವನ್ನು ಸುಲಿಯುತ್ತಿರುವವರು ನೀವು. ಅವರು ನಮ್ಮ ಚರ್ಮವನ್ನು ಏತಕ್ಕೆ ಸುಲಿಯುತ್ತಾರೆ ?

ಶ್ರೀ ಆರ್. ಗುಂಡೂರಾವ್.—ನಿಮ್ಮ ಜನತಾ ಪಕ್ಷ ಆಡಳಿತದಲ್ಲಿದ್ದಾಗ ಏನು ಮಾಡಿದಿರಿ ಎಂಬುದೂ ಜನರಿಗೆ ಗೊತ್ತಿದೆ. ಚುನಾವಣೆ ಬರಲಿ, ಅಲ್ಲಿಯವರೆಗೂ ಸ್ವಲ್ಪ ತಡೆಯಿರಿ. ಜನ ಯಾರ ಚರ್ಮವನ್ನು ಸುಲಿಯುತ್ತಾರೆಂದು ಗೊತ್ತಾಗುತ್ತದೆ.

ಶ್ರೀ ಜೆ. ಹೆಚ್. ಪಟೇಲ್.—ನಮ್ಮ ಸರ್ಕಾರ ಜನರಿಂದ ತೆರಿಗೆಯನ್ನು ತೆಗೆದುಕೊಂಡರೂ ಅವರಿಗೆ ಅನುಕೂಲ ಮಾಡಿಕೊಟ್ಟಿದ್ದೇವೆ. ಆದರೆ ನೀವು ತೆರಿಗೆಯನ್ನು ತೆಗೆದುಕೊಂಡು ಅವರ ಚರ್ಮವನ್ನು ಸುಲಿಯುತ್ತಿದ್ದೀರಿ.

ಶ್ರೀ ಆರ್. ಗುಂಡೂರಾವ್.—ಅದಕ್ಕೇ ನಾನು ಹೇಳಿದ್ದು ಚುನಾವಣೆ ಬರಲಿ ಇರಿ ಎಂದು.

ಶ್ರೀ ಜೆ. ಹೆಚ್. ಪಟೇಲ್.—ಏನು ಮಾಡುವುದು ಕೆಲವು ಸಂದರ್ಭದಲ್ಲಿ ರೋಗಿಗೆ ಅಪಥ್ಯವೇ ಹೆಚ್ಚಾಗಿ ರುಚಿಸುತ್ತದೆ. ಬೇಡವೋ ಅದನ್ನು ತಿನ್ನಬೇಡ. ಅದನ್ನು ತಿಂದರೆ ನಿನ್ನ ಹೊಟ್ಟೆ ಕೆಟ್ಟು ಹೋಗಿ ನಿನಗೆ ತೊಂದರೆಯಾಗುತ್ತನೆಂದು ಎಷ್ಟು ಹೇಳಿದರೂ ಕೇಳುವುದಿಲ್ಲ. ಆದಕ್ಕೆ ನಾವೇನು ಮಾಡಬೇಕಾಗುತ್ತದೆ ಅಂದರೆ ಹೋಗು ತಿಂದು ಸಾಯಿ. ನಿನ್ನ ಹೆಣವನ್ನು ಹೊತ್ತುಕೊಂಡು ಹೋಗುತ್ತಾರೆಂದು ಹೇಳಬೇಕಾಗುತ್ತದೆ. ಆ ರೋಗಿ ಸಾಯುತ್ತಾನೆ. ಅದೇ ರೀತಿ ಚುನಾವಣೆಯಲ್ಲೂ ಕೂಡ. ನನಗೆ ಗುಂಡೂರಾಯರ ಸರ್ಕಾರವೇ ಚೆನ್ನ, ನಾನು ಅವರಿಗೇ ಓಟು ಕೊಡುತ್ತೇವೆಂದು ಹೇಳಿದರೆ ಆಗ ನಾವು ಏನು ಹೇಳಬೇಕಾಗುತ್ತದೆ, ಎಂದರೆ ಹೋಗಿ ನಿಮ್ಮ ಹಣೆಯ ಬರಹ, ಅದರ ಫಲವನ್ನು ಅನುಭವಿಸಿ ಎಂದು ಹೇಳಬೇಕಾಗುತ್ತದೆ. ಅದೆಲ್ಲಾ ಈಗ ಏತಕ್ಕೆ ಮಾತನಾಡಬೇಕು.

ಸ್ವಾಮಿ, ಇವರು ಕೊಟ್ಟಿರತಕ್ಕ ಅಂಕಿಅಂಶಗಳ ಆಧಾರದಮೇಲೆಯೇ ಮಾತನಾಡುತ್ತೇನೆ. ಇಲ್ಲಿ ತಮಗೆ ಒಂದು ಮಾತನ್ನು ಹೇಳುವುದಾದರೆ ಒಂದು ಮನೆಯಲ್ಲಿ ಯಜಮಾನ ಇರುತ್ತಾನೆ, ಆ ಮನೆಯಲ್ಲಿ ದುಡಿಯುವ ಮಕ್ಕಳಿರುತ್ತಾರೆ. ಸಣ್ಣ ಮಕ್ಕಳೂ ಇರುತ್ತಾರೆ. ಸಣ್ಣ ಮಕ್ಕಳ ವಿದ್ಯಾಭ್ಯಾಸ, ದುಡಿಯತಕ್ಕವರ ಆರೋಗ್ಯ ರಕ್ಷಣೆ ವಯಸ್ಸಾದ ಹಿರಿಯರ ಯೋಗಕ್ಷೇಮವನ್ನು ನೋಡಿಕೊಂಡು ಹೋಗುವಂತೆ ಸರ್ಕಾರದವರೂ ಕೂಡ ಯಾರು ಯಾರನ್ನು ಯಾವಯಾವ ರೀತಿಯಲ್ಲಿ ನೋಡಿಕೊಳ್ಳಬೇಕೋ ಹಾಗೆಯೇ ನೋಡಿಕೊಳ್ಳಬೇಕು. ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ ನಮ್ಮ ಸಮಾಜದಲ್ಲಿರತಕ್ಕ ದುರ್ಬಲದವರಿಗೆ ತಾವು ಪೆನ್‌ಷನ್‌ನ್ನು ಕೊಡುತ್ತೀರಿ. ಇದು ನಿಜಕ್ಕೂ ಬಹಳ ಒಳ್ಳೆಯದು. ಆದರೆ ಅವರ ಹೆಸರಿನಲ್ಲಿ ಒಂದು ದೊಡ್ಡ ಲೂಟಿಯೇ ಆಗುತ್ತಿದೆ. ಇದನ್ನು ನೋಡಿ ನನಗೆ ಬಹಳ ವ್ಯಥೆಯಾಗುತ್ತದೆ. ಉದಹರಣೆಗೆ ಹೇಳುವುದಾದರೆ ಜೀತದಾಳುಗಳನ್ನು ಜೀತಮುಕ್ತರನ್ನಾಗಿ ಮಾಡುತ್ತಿದ್ದೀರಿ. ಇದೂ ಒಳ್ಳೆಯದು. ಆದರೆ ಆಚರಣೆಯನ್ನು ನಮ್ಮ ಜಿಲ್ಲೆಯಲ್ಲಿ ನೋಡಿದಾಗ ಇದರ ಮೇಲಿದ್ದ ವಿಶ್ವಾಸ ನನಗೆ ಪೂರ್ತಿಯಾಗಿ ಹೋಯಿತು. ನಮ್ಮ ರಾಜ್ಯದಲ್ಲಿ ಸರ್ಕಾರದವರು ಸುಮಾರು ೭೨ ಸಾವಿರ ಜನರನ್ನು ಗುರ್ತಿಸಿದ್ದಾರೆ. ಇವರಲ್ಲಿ ಪ್ರತಿಯೊಬ್ಬ ವ್ಯಕ್ತಿಗೂ ಪುನರ್‌ವಸತಿ ಕಲ್ಪಿಸಲು ಸುಮಾರು ೪.೫೦ ಸಾವಿರ ರೂಪಾಯಿಗಳು ಖರ್ಚಾಗುತ್ತದೆಂದು ಹೇಳಿದಾರೆ. ಅಂದರೆ ಇವರ ಪ್ರಕಾರ ಎಲ್ಲರಿಗೂ ಪುನರ್‌ವಸತಿ ಕಲ್ಪಿಸಲು ಒಟ್ಟು ೨೫ ಕೋಟಿ ರೂಪಾಯಿ ಬೇಕಾಗುತ್ತದೆ. ಆದರೆ ಇವತ್ತು ಇವರು ಈ ಪುನರ್ ವಸತಿಗೋಸ್ಕರ ಇಟ್ಟುಕೊಂಡಿರುವುದು ಕೇವಲ೨.೫೦ ಕೋಟಿ ರೂಪಾಯಿಗಳು ಮಾತ್ರ. ಇದರಲ್ಲಿ ಏನಾಗುತ್ತದೆ ಎಂಬುದನ್ನು ಯೋಚನೆಮಾಡಿದ್ದೀರಾ ? ತಾವು ಅವರಿಗೆ ಎತ್ತು, ಎಮ್ಮೆಗಳನ್ನು ಕೊಡಿಸಬಹುದು. ಸ್ವಾಮಿ, ಅವರಿಗೆ ಜಮೀನೇ ಇಲ್ಲದಿದ್ದರೆ ಅವರು ಏನು ಮಾಡಬೇಕು ? ಆದ್ದರಿಂದ ನಾನು ಹೇಳುವುದು ಏನೆಂದರೆ ಜಮೀನು ಇರುವವರಿಗೆ ಎತ್ತು ಎಮ್ಮೆಗಳನ್ನು ಕೊಡಿಸಿ. ಯಾರಿಗೆ ಜಮೀನು ಇರುವುದಿಲ್ಲ ಅಂಥವರಿಗೆ ಹಸು, ಕುರಿ, ಇಂಥಾದ್ದನ್ನು ಕೊಡಿಸಿ. ಯಾರಿಗಾದರೂ ಒಬ್ಬನಿಗೆ ಈ ರೀತಿ ೪,೫೦೦ ರೂಪಾಯಿ ಬರುತ್ತದೆಂದು ಗೊತ್ತಾದಕೂಡಲೇ ದುಡ್ಡನ್ನು ಸ್ಯಾಂಕ್ಷನ್ ಮಾಡುವ ಬಿ.ಡಿ.ಓ ನಿಂದ ಹಿಡಿದು ಕೊನೆಯ ಜವಾನನವರೆಗೂ ಎಲ್ಲಾ ಸೇರಿ ಸುಮಾರು ಒಂದೂವರೆ ಸಾವಿರದಷ್ಟು ಈ ತಾಲೂಕು ಆಫೀಸ್ ಲೆವೆಲ್‌ನಲ್ಲೇ ಖರ್ಚಾಗಿ ಕೊನೆಗೆ ಅವನ ಕೈಗೆ ೩ ಸಾವಿರ ರೂಪಾಯಿ ಸಿಕ್ಕುತ್ತದೆ. ನೀವು ಮಾಡಿರತಕ್ಕ ಈ ಸ್ಕೀಂನಲ್ಲಿ ಕ್ರಿಮಿನಲ್ ವೇಸ್ಟ್ ಆಗುತ್ತಿದೆ. ನಿಜವಾಗಿ ಯಾರಿಗೆ ಈ ಯೋಜನೆಯ ಪ್ರತಿಫಲ ಸಿಕ್ಕಬೇಕಾಗಿದೆಯೋ ಅವರಿಗೆ ಸಿಕ್ಕುತ್ತಿಲ್ಲ. ಸ್ವಾಮಿ ನಾನು ತಮಗೆ ಇನ್ನೊಂದು ಸಲಹೆ ಕೊಡುವುದು ಏನೆಂದರೆ, ಈ ಕೆ.ಎಸ್ ಆರ್.ಟಿ.ಸಿ.ಯನ್ನು ಮೊದಲು ಬಂದ್ ಮಾಡಿ. ಏಕೆಂದರೆ ಇದರಿಂದ ಯಾವ ಜನರಿಗೂ ಪ್ರಯೋಜನವಿಲ್ಲ. ನ್ಯಾಷನಲೈಸ್ಡ್ ಎಕಾನಮಿ ಅಂತ ಸ್ಟೇಟ್ ಸೆಕ್ಟರ್‌ನಲ್ಲಿರಬೇಕೆಂದು ಇದೆ, ಇದರೆ ಅದು ನಮ್ಮ ಉದ್ದೇಶಕ್ಕೆ ವಿರುದ್ಧವಾಗಿದೆ. ತಮ್ಮ ಕೈಯಲ್ಲಿ ಈ ಕೆಲಸ ಮಾಡು

ವುದಕ್ಕೆ ಸಾಧ್ಯವಾಗದಿದ್ದರೆ ಬಿಟ್ಟುಬಿಡಿ. ಖಾಸಗಿಯವರು ಯಾರಾದರೂ ನಡೆಸಿಕೊಳ್ಳುತ್ತಾರೆ. ಇದೇ ದಾರಿಯಲ್ಲಿ ನೀವೇ ನಡೆಸಿಕೊಂಡು ಹೋಗುವುದಾದರೆ ಇನ್ನು ಹತ್ತು ವರ್ಷವಾದರೂ ಈ ಸಂಸ್ಥೆ ಉದ್ಧಾರವಾಗುವುದಿಲ್ಲ, ಜನರಿಗೆ ಇದರಿಂದ ಪ್ರಯೋಜನವಾಗುವುದಿಲ್ಲ. ಹಣ ಪೋಲಾಗತಕ್ಕ ನಿಮ್ಮ ಯೋಜನೆಗಳು ಏನಿವೆ......

ಶ್ರೀ ಆರ್. ಗುಂಡೂರಾವ್.—ನಿಮ್ಮ ಸಲಹೆ ಒಳ್ಳೆಯದು ಸ್ವಾಮಿ. ಹಿಂದೆ ನಾನು ಸಾರಿಗೆ ಮಂತ್ರಿಯಾಗಿದ್ದಾಗ್ಗೆ ಕೂಡ ಇದೇ ರೀತಿಯ ಸಲಹೆಗಳನ್ನು ಕೊಟ್ಟಿದ್ದೆ. ಆದರೆ ಅದು ಪ್ರಯೋಜನವಾಗಲಿಲ್ಲ. ನಾನೇ ಅಲ್ಲ ಯಾರು ಎಷ್ಟೇ ಪ್ರಯತ್ನ ಮಾಡಿದರೂ ಇದನ್ನು ಸರಿಪಡಿಸುವುದಕ್ಕಾಗುವುದಿಲ್ಲ. ಕಳೆದ ೧೫–೨೦ ವರ್ಷದಿಂದಲೂ ಇದೇ ರೀತಿ ನಷ್ಟವೇ ಆಗುತ್ತಿದೆ. ನಾವು ಏನೇ ಸಲಹೆ ಕೊಟ್ಟರೂ ಅದು ಆಗುವುದು ಆಗುತ್ತಲೇ ಇರುತ್ತದೆ. ಅದರೂ ತಾವು ಈಗ ಏನು ಸಲಹೆಯನ್ನು ಕೊಟ್ಟಿದ್ದೀರಿ ಇದು ಬಹಳ ಒಳ್ಳೆಯ ಸಲಹೆ.

ಶ್ರೀ ಜೆ. ಹೆಚ್. ಪಟೇಲ್.—ನಾನು ಏತಕ್ಕೆ ಹೇಳುತ್ತಿದ್ದೇನೆಂದರೆ. ಹಿಂದೆ ಮೈಸೂರು ಮಹಾರಾಜರೂ ಒಂದು ಪಬ್ಲಿಕ್ ಸೆಕ್ಟಾರ್ ಬ್ಯಾಂಕ್‌ನ್ನು ಮಾಡಿದ್ದರು. ಅದು ಚೆನ್ನಾಗಿಯೇ ನಡೆಯುತ್ತಿತ್ತು: ಸರ್ಕಾರದವರು ನಡೆಸುವುದಾದರೆ ಚೆನ್ನಾಗಿ ನಡೆಸಲಿ ಇಲ್ಲದಿದ್ದರೆ ನಮ್ಮ ಕೈಲಾಗುವುದಿಲ್ಲವೆಂದು ಸುಮ್ಮನೆ ಬಿಟ್ಟುಬಿಡಿ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ಅಧ್ಯಕ್ಷರೆ, ಬಹುಶಃ ಇದು ಇವರ ಕೊನೆಯ ಬಡ್ಜೆಟ್ ಅಂತ ಕಾಣುತ್ತದೆ, ಮುಂದೆ ಯಾರು ಬರುತ್ತಾರೋ ಏನೋ ಗೊತ್ತಿಲ್ಲ. ಏಕೆಂದರೆ ಚುನಾವಣೆ ಅದ ಮೇಲೇ ಮುಂದಿನ ಬಡ್ಜೆಟ್ ಇರುವುದು. ಆದ್ದರಿಂದ ಇವರು ಹೋಗುವ ಕಾಲದಲ್ಲಾದರೂ ಜನರಿಗೆ ಒಳ್ಳೆಯ ಉಪಕಾರವನ್ನು ಮಾಡುವುದನ್ನು ಬಿಟ್ಟು ಏನೋ ಒಂದು ಧಿಮಾಕಿನಿಂದ ಇದ್ದಾರೆ, ನಾಳೆ ನಾವು ಓಟು ಕೇಳುವುದಕ್ಕೆ ಜನರ ಮುಂದೆ ಹೋಗಬೇಕೆಂಬ ಪರಿವೆಯೇ ಇವರಿಗೆ ಇದ್ದಂತೆ ಕಾಣುತ್ತಿಲ್ಲ. ನಾವು ಎಷ್ಟೇ ಹೇಳಿದರೂ ಇವರಿಗಂತೂ ಬುದ್ಧಿ ಬರುವುದಿಲ್ಲದಾದ್ದರಿಂದ ಜನರಿಗಾದರೂ ಒಳ್ಳೆಯ ಬುದ್ಧಿ ಬಂದು ಅವರು ಇವರಿಗೆ ಒಳ್ಳೆಯ ಪಾಠವನ್ನು ಕಲಿಸಲಿ. ಇವರು ಜನರ ಚರ್ಮವನ್ನು ಇದುವರೆಗೂ ಸುಲಿದಿದ್ದಾರೆ. ನಾಳೆ ಇವರ ಚರ್ಮವನ್ನೂ ಜನರು ಸುಲಿಯಲೆಂದು ಕಳಕಳಿಯಿಂದ ಮನವಿ ಮಾಡಿಕೊಂಡು ಇಷ್ಟು ಮಾತನಾಡಲು ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಬಿ. ಇ. ರಾಮಯ್ಯ (ಸಿರಗುಪ್ಪ).—ಸನ್ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಹಣಕಾಸಿನ ಸಚಿವರಾದ ವೀರಪ್ಪ ಮೊಯ್ಲಿಯವರು ೧೯೮೨–೮೩ನೇ ಸಾಲಿನ ಆಯವ್ಯಯ ಪಟ್ಟಿಯನ್ನು ನಮ್ಮ ಮುಂದೆ ಮಂಡಿಸಿದ್ದಾರೆ. ಇದನ್ನು ನಾನು ಸ್ವಾಗತ ಮಾಡುತ್ತಾ ಕೆಲವು ಸಲಹೆಗಳನ್ನು ಕೊಡಬೇಕೆಂದಿದ್ದೇನೆ. ನಮ್ಮ ಸರ್ಕಾರ ಏನು ಸಾಧನೆಯನ್ನು ಮಾಡಿದೆ ಎಂಬುದನ್ನು ಮಾನ್ಯ ವಿರೋಧ ಪಕ್ಷದವರು ಪ್ರಸ್ತಾಪವನ್ನೇ ಮಾಡಿದೆ ನಮ್ಮ ಸರ್ಕಾರ ಯಾವ ಕೆಲಸವನ್ನೂ ಮಾಡಿಯೇ ಇಲ್ಲವೆಂದು ಹೇಳುತ್ತಿದ್ದಾರೆ. ನಾನಾದರೂ ಹೇಳುತ್ತೇನೆ ನಮ್ಮ ಸರ್ಕಾರ ಬೇಕಾದಷ್ಟು ಒಳ್ಳೆಯ ಕೆಲಸವನ್ನು ಮಾಡಿದೆ. ಜನಸಾಮಾನ್ಯರಿಗೆ ಹೊರೆ ಇಲ್ಲದಂತೆ ಮಾನ್ಯ ಅರ್ಥಮಂತ್ರಿಗಳು ಆಯವ್ಯಯ ಪಟ್ಟಿಯನ್ನು ಮಂಡಿಸಿದ್ದಾರೆ ಎಂದರೆ ನಿಜವಾಗಿಯೂ ತಪ್ಪಾಗಲಿಕ್ಕಿಲ್ಲ, ಆ ವಿಷಯಕ್ಕೆ ನಾನು ಹೋಗದೆ ಇಲ್ಲಿ ಏನೇನು ಪ್ರಾಬ್ಲಂಸ್ ಬಗ್ಗೆ ಮಾತನಾಡಬೇಕೆಂದಿದ್ದೇನೆ, ಇಲ್ಲಿ ಮಾನ್ಯ ಮುಖ್ಯ ಮಂತ್ರಿಯವರೂ ಇದ್ದರೆ. ಇದು ಬಹಳ ಗಹನವಾದ ಸಮಸ್ಯೆ. ಇದು ಕೇವಲ ನಮ್ಮ ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟ ಸಮಸ್ಯೆಯಲ್ಲ. ಇದು ಅಂತರರಾಷ್ಟ್ರೀಯ ಸಮಸ್ಯೆ ಇದನ್ನು ಯಾವರೀತಿ ಬಗೆಹರಿಸಬಹುದೆಂಬುದನ್ನು ಯೋಚಿಸಲು ಒಂದು ಸಕಾಲ ಒದಗಿಬಂದಿದೆ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ.

ಸ್ವಾಮಿ, ೧೯೫೩ ರಲ್ಲಿ ಕೇಂದ್ರ ಸರ್ಕಾರದ ಅಪ್ಪಣೆ ಮೇರೆಗೆ ರಾಜ್ಯ ಸರ್ಕಾರದವರು ಬಳ್ಳಾರಿ ಜಿಲ್ಲೆಯಲ್ಲಿ ತುಂಗಭದ್ರಾ ಬೋರ್ಡ್ ಎಂದು ಸ್ಥಾಪನೆ ಮಾಡಿದರು.

ಆಗ ತುಂಗಭದ್ರಾ ಆಯಕಟ್ಟು ಅಷ್ಟು ಅಭಿವೃದ್ಧಿಯಾಗಿರಲಿಲ್ಲ. ನಾನಾ ಸಮಸ್ಯೆಗಳು ಇದ್ದುವು. ಆ ಸಮಸ್ಯೆಗಳನ್ನು ಪರಿಹಾರ ಮಾಡಬೇಕು ಎನ್ನುವ ಉದ್ದೇಶದಿಂದ ಕೇಂದ್ರ ಸರ್ಕಾರದವರು ಒಂದು ಟಿ.ಬಿ. ಬೋರ್ಡ್ ಎಂದು ಹೇಳಿ ಬಳ್ಳಾರಿ ಜಿಲ್ಲೆಯಲ್ಲಿ ಸ್ಥಾಪನೆ ಮಾಡಿದರು. ಈ ಟಿ.ಬಿ. ಬೋರ್ಡ್‌ನವರು ಹೇಳತಕ್ಕಂಥದ್ದು ಏನು ಎಂದರೆ $\frac{1}{3}$ ಭಾಗ ಆಂಧ್ರದವರು ಇರಬೇಕು ಮತ್ತು $\frac{1}{3}$ ಭಾಗ ಕರ್ನಾಟಕ

ದವರು ಇರಬೇಕೆಂಬ ಒಂದು ತೀರ್ಮಾನದ ಒಂದು ತತ್ವದ ಮೇಲೆ ಬೋರ್ಡ್ ಸ್ಥಾಪನೆ ಮಾಡಿದರು. ೧೯೫೩ನೇ ಇಸವಿಯಿಂದ ಇಲ್ಲಿಯವರೆಗೆ ಅಂದರೆ ಸುಮಾರು '೩೦ ವರ್ಷಗಳಾದರೂ ಕೂಡ ಬೋರ್ಡ್‌ನ್ನು ರದ್ದು ಮಾಡಿಲ್ಲ' ಏತಕ್ಕೆಂದರೆ ಆಯಕಟ್ಟು ಡೆವಲಪ್‌ಮೆಂಟ್ ಆಗುವವರೆಗೂ ಎಂದು ಹೇಳಿದರೆ ಆಂಧ್ರ ಪ್ರದೇಶದಲ್ಲಿ ಎಷ್ಟು ಕ್ಯುಸೆಕ್ಸ್ ನೀರಾವರಿ ಸಮಸ್ಯೆ ಇರುತ್ತದೋ ಅಷ್ಟೇ ಸಮಸ್ಯೆ ನಮ್ಮಲ್ಲಿಯೂ ಇರುತ್ತದೆ. ರಾಜಮಂಡ್ರಿ ಪ್ರಾಜೆಕ್ಟ್‌ನಿಂದ ೯೦ ಪರ್ಸೆಂಟ್ ನೀರಾವರಿ ಪ್ರದೇಶ ಆಂದ್ರದಲ್ಲಿ ಆದರೆ ಉಳಿಕೆ ೧೦ ಪರ್ಸೆಂಟ್ ಕರ್ನಾಟಕಕ್ಕೆ ಕೊಡುತ್ತಾರೆ. ಪ್ರಾಜೆಕ್ಟ್ ಕಂಟ್ರೋಲ್ ಮಾತ್ರ ಕರ್ನಾಟಕ ಸರ್ಕಾರದ್ದೇ ಇರುತ್ತದೆ. ಆದ್ದರಿಂದ ಕರ್ನಾಟಕ ಸರ್ಕಾರದವರು ಆಂದ್ರದವರಿಗೆ ಎಷ್ಟು ನೀರನ್ನು ಕೊಡಬೇಕೋ ಅಷ್ಟನ್ನು ಕೊಟ್ಟರೆ ಸಾಕಾಗುತ್ತದೆಂದು ಹೇಳಬಯಸುತ್ತೇನೆ. ಈ ವಿಷಯದಲ್ಲಿ ಕೂಡ ನಮ್ಮ ಸ್ಟೇಟ್ ಇರಿಗೇಷನ್ ಅಡ್ವೈಸರಿ ಬೋರ್ಡ್ ಅಧ್ಯಕ್ಷರಾದ ಶ್ರೀಮಾನ್ ಎಚ್.ಎಂ. ಚನ್ನಬಸಪ್ಪ ನವರೂ ಕೂಡ ತಮ್ಮ ಕಮಿಟಿಯಲ್ಲಿ, ತಮ್ಮ ಅಡ್ವೈಸರಿ ಬೋರ್ಡ್‌ನಲ್ಲಿ ಈ ವಿಷಯವನ್ನು ದೀರ್ಘಾಲೋಚನೆ ಮಾಡಿ ನಿರ್ಧಾರ ಮಾಡಿರುತ್ತಾರೆ. ಈ ಬೋರ್ಡ್ ಇರತಕ್ಕಂಥದ್ದು ಅನಾವಶ್ಯಕ, ಇದರಿಂದ ಕರ್ನಾಟಕದ ರೈತರಿಗೆ ಏನೇನು ಅನುಕೂಲವಾಗುವುದಿಲ್ಲ. ಕರ್ನಾಟಕಕ್ಕೆ ಎಷ್ಟು ನೀರುಬೇಕೋ ಅಷ್ಟು ಬರುವುದಿಲ್ಲ ಎನ್ನುವುದನ್ನೂ ಕೂಡ ಇರಿಗೇಷನ್ ಅಡ್ವೈಸರಿ ಬೋರ್ಡ್‌ನವರು ವಿಚಾರಮಾಡಿ ರೆಕಮೆಂಡೇಷನ್ ಮಾಡಿದ್ದಾರೆ. ಹೀಗಿದ್ದರೂ ಆಂದ್ರದವರೇ ಅಧಿಕಾರ ಮಾಡುತ್ತಿದ್ದಾರೆ. ಅಲ್ಲಿ ನಮ್ಮ ಕರ್ನಾಟಕ ಚೀಫ್ ಇಂಜಿನೀಯರ್‌ರವರು ಕೆಲಸ ಮಾಡುತ್ತಿದ್ದರೂ ಅವರಿಗೆ ಯಾವ ವಿದವಾದ ಪವರ್ ಕೊಟ್ಟಿಲ್ಲ. ಅವರು ಹೇಳುತ್ತಾರೆ ಆಂದ್ರದಿಂದ ಬಂದಿರತಕ್ಕಂಥ ಅಧಿಕಾರಿಗಳು ಇರುತ್ತಾರೆ ಅವರಿಗೆ ಕಂಟ್ರೋಲಿಂಗ್ ಅತಾರಟಿ ಕೊಟ್ಟಿರುತ್ತಾರೆ. ಆದ್ದರಿಂದ ನಾವು ಏನು ಮಾಡುವುದಕ್ಕೆ ಬರುವುದಿಲ್ಲವೆಂದು ಹೇಳಂತ್ತಾರೆ. ಮುಖ್ಯವಾದ ಅಧಿಕಾರಿಗಳ ಪೋಸ್ಟ್‌ನಲ್ಲಿ ಆಂದ್ರದವರೇ ಇರುವುದರಿಂದ ಕರ್ನಾಟಕದಲ್ಲಿರತಕ್ಕಂಥ ರೈತರಿಗೆ ಯಾವುದೇ ನೀರಾವರಿಗೆ ಅನುಕೂಲವಾಗುತ್ತದೆ ಎನ್ನುವುದು ಅರ್ಥವಾಗದಂತಾಗಿರುತ್ತದೆ ಆಂದ್ರ ಪ್ರದೇಶಕ್ಕೆ ಇಷ್ಟು ಕ್ಯೂಸೆಕ್ಸ್ ನೀರನ್ನು ಕೊಡಬೇಕು ಎನ್ನುವ ಬಗ್ಗೆ ಟಿ.ಬಿ. ಬೋರ್ಡ್ ಅಧ್ಯಕ್ಷರೇ ಹೇಳಿದ್ದಾರೆ. ಕೇಂದ್ರ ಸರ್ಕಾರದ ಚೀಫ್ ಸೆಕ್ರೆಟರಿಯವರು ಇದರ ಅಧ್ಯಕ್ಷರಾಗಿರುತ್ತಾರೆ. ಆಂದ್ರ ಪ್ರದೇಶದ ಒಬ್ಬ ಮೆಂಬರು ಅಧಿಕಾರಿ ಮೆಂಬರಾಗಿರುತ್ತಾರೆ. ಹಾಗೆಯೇ ಕರ್ನಾಟಕ ಪ್ರದೇಶದ ಒಬ್ಬ ಅಧಿಕಾರಿ ಮೆಂಬರಾಗಿರುತ್ತಾರೆ. ಹೀಗಿದ್ದರೂ ಇಂದಿಗೂ ಕೂಡ ಎಷ್ಟು ಕೆಲಸ ಸುಗಮವಾಗಿ ಆಗುತ್ತಿದೆ ಎನ್ನುವ ಬಗ್ಗೆ ನಮ್ಮ ಸರ್ಕಾರದವರು ಈವತ್ತಿಗೂ ಕೂಡ ಯೋಚನೆ ಮಾಡುವುದಕ್ಕೆ ಹೋಗಿಲ್ಲ. ನಮ್ಮಲ್ಲಿ ಇರಿಗೇಷನ್ ಅಡ್ವೈಸರಿ ಬೋರ್ಡ್ ಏತಕ್ಕೆ ಮಾಡಿದರೆಂದರೆ, ನಮಗೆ ಇರತಕ್ಕಂಥ ಸಮಸ್ಯೆಯನ್ನು ಅರಿತುಕೊಂಡು, ನಮ್ಮ ಕರ್ನಾಟಕದ ರೈತರ ಕಷ್ಟ ಏನಿದೆ ಎನ್ನತಕ್ಕಂಥದ್ದನ್ನು ಅರಿತುಕೊಂಡ ಮೇಲೆ ಅವರು ದೀರ್ಘಕಾಲ ಆಲೋಚನೆ ಮಾಡಿ ಈ ಬೋರ್ಡನ್ನು ರದ್ದುಮಾಡಬೇಕು ಎಂದು ಸರ್ಕಾರಕ್ಕೆ ರೆಕಮೆಂಡೇಷನ್ ಮಾಡಿದ್ದಾರೆ. ಆದರೆ ಸರ್ಕಾರದವರು ಈವತ್ತಿನವರೆಗೂ ಏನು ಮಾಡಿದ್ದಾರೆ, ಏನು ಮಾಡಿಲ್ಲವೆನ್ನುವುದು ಯಾವುದು ಗೊತ್ತಾಗಲಿಲ್ಲ. ಮೂವತ್ತು ವರ್ಷಗಳಾದ ಮೇಲೆ ಬೋರ್ಡ್‌ನ ಅವಶ್ಯಕತೆ ಇದೆಯೇ, ಇದರಿಂದ ಅನುಕೂಲವಾಗುತ್ತದೆಯೇ ಎನ್ನತಕ್ಕಂಥದ್ದನ್ನು ಯೋಚನೆ ಮಾಡಿ ಈಗಲಾದರೂ ದಯವಿಟ್ಟು ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ, ಅವರು ಕೇಂದ್ರ ಸರ್ಕಾರಕ್ಕೆ ಒತ್ತಾಯ ತರಬೇಕೆಂದು ಹೇಳುತ್ತೇನೆ. ಏತಕ್ಕೆಂದರೆ ಇದು ಒಂದು ಅಳಿವು ಉಳಿವು ಪ್ರಶ್ನೆಯಾಗಿರುತ್ತದೆ. ಬಳ್ಳಾರಿ ಜಿಲ್ಲೆಯ ರೈತಬಾಂಧವರ ಕಷ್ಟ ಹೋಗಬೇಕೆಂದರೆ ಮತ್ತು ನಮ್ಮ ಸರ್ಕಾರದ ಬೊಕ್ಕಸಕ್ಕೆ ಹಣ ಉಳಿಯಬೇಕು ಎನ್ನುವುದಾದರೆ ಮೊಟ್ಟಮೊದಲನೆಯದಾಗಿ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತಂದು ರೈತರನ್ನು ಬದುಕಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತೊಮ್ಮೆ ಒತ್ತಾಯಪಡಿಸುತ್ತೇನೆ. ಏತಕ್ಕೆಂದರೆ ಇದರಿಂದ ಏನು ತೊಂದರೆಯಾಗುತ್ತದೆ ಎನ್ನುವುದನ್ನೂ ಕೂಡ ಹೇಳಿದ್ದಾರೆ. ಪ್ಲಾನ್ ಕಂಟ್ರೋಲಿಂಗ್ ಅಥಾರಿಟಿ ಆಂಧ್ರದ ಅಧಿಕಾರಿಗಳೇ ಕೆಲಸಮಾಡುತ್ತಿದ್ದಾರೆ. ಮೂರನೇ ಒಂದು ಭಾಗ ನಮ್ಮ ರಾಜ್ಯದ ಅಧಿಕಾರಿಗಳು ಅವರ ಕೈಕೆಳಗೆ ಕೆಲಸ ಮಾಡುತ್ತಿರುತ್ತಾರೆ. ಅವರಿಗೆ ಧೈರ್ಯ ಸಾಲದು. ಆದ್ದರಿಂದ ಈ ಬೋರ್ಡನ್ನು ಆದಷ್ಟು ಜಾಗ್ರತೆ ರದ್ದು ಮಾಡಬೇಕೆಂದು ಹೇಳುತ್ತೇನೆ. ಆಂದ್ರದವರಿಗೆ ಬೋರ್ಡ್‌ನಲ್ಲಿ ಎಷ್ಟು ಕ್ಯೂಸೆಕ್ಸ್ ನೀರನ್ನು ಬಿಡಬೇಕೆಂದು ತೀರ್ಮಾನವಾಗಿರುತ್ತದೆ ಅಷ್ಟು ನೀರನ್ನು ಬಿಟ್ಟರೆ ಸಾಕೆಂದು ತಮ್ಮ ಮುಂದೆ ಹೇಳುತ್ತೇನೆ. ಈ ಸಂದರ್ಭದಲ್ಲಿ ಮತ್ತೊಂದು ವಿಷಯ ಹೇಳಬೇಕೆಂದರೆ ಕ್ಯಾನಲ್ ಕ್ಲೋಸ್ ಅಫ್-ಲೋಲೆವೆಲ್ ಕೇಂದ್ರ ಸರ್ಕಾರದಲ್ಲಿ ಏನು ಇದೆ ಎಂದರೆ ಮೇ ತಿಂಗಳಲ್ಲಿ ಕ್ಲೋಸ್ ಮಾಡುತ್ತಾರೆ. ಇದರಿಂದ ಏನಾಗುತ್ತದೆ ಎಂದರೆ ಮೇ ಒಂದು ತಿಂಗಳು ಕ್ಲೋಸ್ ಮಾಡಿದರೆ ಅಲ್ಲಿ ಬರತಕ್ಕಂಥ ರೈತರಿಗೆ ಎಷ್ಟೋ ಅನಾನುಕೂಲವಾಗುತ್ತದೆ

ಎಂದು ಅಗ್ರಿಕಲ್ಚರ್ ಇಲಾಖೆಯವರೇ ಸರ್ಕಾರದ ಗಮನಕ್ಕೆ ತಂದಿರುತ್ತಾರೆ. ಮತ್ತೆ ಅವರೇ ಸರ್ಕಾರದ ಗಮನಕ್ಕೆ ತಂದಿರುವುದೇನೆಂದರೆ ಮೇ ತಿಂಗಳಲ್ಲಿ ಕ್ಲೋಸ್ ಆಫ್ ಮಾಡುವುದಕ್ಕೆ ಬದಲಾಗಿ ಡಿಸೆಂಬರ್ ತಿಂಗಳಲ್ಲಿ ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆ ಎನ್ನುವ ಭಾವನೆಯನ್ನು ಸುಮಾರು ೨೫ ವರ್ಷಗಳಿಂದ ಹೇಳುತ್ತಲೇ ಬಂದಿರುತ್ತಾರೆ. ಇದಕ್ಕೆ ಒಂದು ಉದಾಹರಣೆ ಹೇಳಬೇಕಾದರೆ ಲೋಲೆವೆಲ್ ಕ್ಯಾನಲ್ ಏನು ಇದೆ ಅವರೂ ಕೂಡ ಡಿಸೆಂಬರ್ ತಿಂಗಳಲ್ಲಿ ರಿಪೇರಿ ಕೆಲಸ ತೆಗೆದುಕೊಳ್ಳುತ್ತಾರೆ. ಮೇನಲ್ಲಿ ಯಾವ ಕ್ಯಾನಲ್ ರಿಪೇರಿ ಮಾಡತಕ್ಕಂಥದ್ದು ಇಲ್ಲ. ಏತಕ್ಕೆಂದರೆ ಶುಗರ್‌ಕೇನ್ ಲೋಲೆವೆಲ್ ಕ್ಯಾನಲ್‌ನಲ್ಲಿ ೧೦ ಸಾವಿರ ಎಕರೆಗಳಷ್ಟು ನೀರಾವರಿ ಪ್ರದೇಶದಲ್ಲಿ ಬೆಳೆಯುತ್ತಾರೆ. ಒಂದು ತಿಂಗಳು ನೀರು ಇಲ್ಲದಿದ್ದರೆ ತಟ್ಟಿಕೊಳ್ಳುವುದಕ್ಕೆ ಸಾಧ್ಯವಿಲ್ಲವೆಂದು ವ್ಯವಸಾಯ ತಜ್ಞರೂ ಕೂಡ ಹೇಳಿರುತ್ತಾರೆ. ಆದ್ದರಿಂದ ಡಿಸೆಂಬರ್ ತಿಂಗಳಲ್ಲಿ ಕ್ಲೋಸ್ ಅಫ್ ಮಾಡಬೇಕೆಂದು ಹೇಳಿದ್ದಾರೆ. ಈಗ ಟಿ.ಬಿ. ಬೋರ್ಡ್‌ನವರು ಮೇ ತಿಂಗಳಲ್ಲಿ ಕ್ಲೋಸ್ ಮಾಡುವುದರಿಂದ ೧೦ ಸಾವಿರ ಎಕರೆ ಕಬ್ಬು ಬರತಕ್ಕಂಥ ರೈತರಿಗೆ ಒಂದು ಎಕರೆಗೆ ೧೦ ಟನ್ ಇಳುವರಿ ಬರುತ್ತದೆ. ಒಂದು ಎಕರೆಗೆ ೧೦ ಟನ್ ಎಂದರೆ ಸುಮಾರು ಒಂದು ಲಕ್ಷ ಟನ್ ಇಳುವರಿ ನ್ಯಾಶನಲ್ ವೇಸ್ಟ್ ಆದಂತಾಗುತ್ತದೆ. ಸುಮಾರು ಎರಡೂವರೆ ಲಕ್ಷದವರೆಗೆ ಲಾಸ್ ಆಗುತ್ತದೆ. ನೀರಾವರಿ ವಿಷಯದಲ್ಲಿ ನಮ್ಮಲ್ಲಿ ಅನ್‌ಆತರೈಸ್ಡ್, ಅನಧಿಕೃತವಾಗಿ ನೀರನ್ನು ಬಳಸತಕ್ಕಂಥದ್ದು ಜಾಸ್ತಿಯಾಗಿರುತ್ತದೆ. ಇದರಿಂದ ಏನಾಗುತ್ತಿದೆ ಎಂದರೆ ಆತರೈಸ್ಡ್ ಕಲ್ಟಿವೇಟರ್ಸ್ ಏನು ಇರುತ್ತಾರೆ ಅವರಿಗೆ ನೀರು ಸಿಕ್ಕದಂಥ ಪರಿಸ್ಥಿತಿ ಇರುತ್ತದೆ. ಅನ್ ಆತರೈಸ್ಡ್ ಕಲ್ಟಿವೇಟರ್ಸ್ ಮುಖಾಂತರ ನೀರು ಹೋಗುತ್ತದೆಂದರೆ ಕೆಳಗಡೆ ಇರತಕ್ಕಂಥ ಆತರೈಸ್ಡ್ ಕಲ್ಟಿವೇಟರ್ಸ್‌ಗೆ ನೀರು ದೊರಕುತ್ತದೆ ಎನ್ನುವುದು ಅನುಮಾನಾಸ್ಪದವಾಗಿರುತ್ತದೆ ಆದರೆ ಅಧಿಕೃತ ಬೆಳೆಗಾರರಿಗೆ ಡಿಪಾರ್ಟ್‌ಮೆಂಟ್‌ನವರು ಲೆವಿ ಹಾಕುತ್ತಾರೆ, ಇರಿಗೇಷನ್ ಟ್ಯಾಕ್ಸ್ ಹಾಕುತ್ತಾರೆ, ಆದರೆ ಅನಧಿಕೃತ ಬೆಳೆಗಾರರಿಗೆ ಏನು ಟ್ಯಾಕ್ಸ್ ಇರುವುದಿಲ್ಲ ಮತ್ತು ಏನು ಇರುವುದಿಲ್ಲ. ಒಂದೇ ಒಂದು ಮಾಮೂಲಿ ಸಂಭಾವನೆ ಎಂದು ಅಧಿಕಾರಿಗಳಿಗೆ ಕೊಟ್ಟುಬಿಟ್ಟರೆ ಸಾಕು ಅವರು ಲೆಕ್ಕದಾಗೆ ಬರುವುದಿಲ್ಲ. ಆದ್ದರಿಂದ ಆಥರೈಸ್ಡ್ ಕಲ್ಟಿವೇಟರ್ಸ್‌ಗೆ ಈವತ್ತಿನ ದಿವಸ ಏನು ಅನುಕೂಲವನ್ನು ಕೊಡುವುದಕ್ಕೆ ಸಾಧ್ಯವಾಗುತ್ತಿಲ್ಲದೆ ಅವರಲ್ಲಿ ಒಂದು ಭಾವನೆ ಬೆಳೆಯುತ್ತಿದೆ. ಮತ್ತೆ ಅವರಿಗೆ ಪೆನಾಲ್ಟಿ ಬೇರೆ ಹಾಕುತ್ತಿರುತ್ತಾರೆ. ಸುಮಾರು ೧೦೦ ಕೋಟಿ ರೂಪಾಯಿಗಳಷ್ಟು ಫೆನಾಲ್ಟಿ ಬಿದ್ದು ಈವತ್ತಿನವರೆಗೆ ವಸೂಲು ಮಾಡುವುದಕ್ಕೆ ಆಗುತ್ತಿಲ್ಲ.

ಇನ್ನು ನೀರಾವರಿ ಪ್ರದೇಶದ ಅಚ್ಚುಕಟ್ಟುಗಳಲ್ಲಿ ನೀವು ರೋಡ್ಸ್ ಏನು ಮಾಡುತ್ತೀರಿ ಇದು ಬಹಳ ಮುಖ್ಯವಾಗಿರುತ್ತದೆ. ಎಲ್ಲಾ ಕಡೆಗೂ ನೀರು ತುಂಬಿಕೊಂಡು ರಸ್ತೆಗಳು ಬಂದಾಗುವ ಸಂದರ್ಭಗಳು ಇರುತ್ತದೆ. ಇದರಿಂದ ಒಂದು ಕಡೆಯಿಂದ ಮತ್ತೊಂದು ಕಡೆಗೆ ರೈತರು ಗೊಬ್ಬರ ಇವೇ ಮುಂತಾದ ವ್ಯವಸಾಯ ಸಾಮಗ್ರಿಗಳನ್ನು ಸಾಗಾಣಿಕೆ ಮಾಡಲು ಬಹಳ ಕಷ್ಟವಾಗುತ್ತದೆ. ಡ್ಯಾಮ್‌ಗಳನ್ನು ಕಟ್ಟುವುದಕ್ಕೆ ವಿಶೇಷವಾಗಿ ಹಣವನ್ನು ಖರ್ಚು ಮಾಡಿದ ಹಾಗೆ ರಸ್ತೆಗಳ ನಿರ್ಮಾಣ ಕಾರ್ಯದಲ್ಲೂ ಹೆಚ್ಚು ಗಮನವನ್ನು ಕೊಡಬೇಕು. ಆರಂಭದಿಂದಲೂ ರಸ್ತೆಗಳಿಗಾಗಿ ಹೆಚ್ಚಿನ ಗಮನವನ್ನು ಕೊಟ್ಟಿಲ್ಲ ರೋಡ್ ಪ್ಲಾನ್ಸ್ ಎಲ್ಲ ಆಯಿತು ಅದಾದನಂತರ ೧೬೦ ಮೈಲಿಗಳಷ್ಟು ರಸ್ತೆ ಮಾಡಲು ೫೦ ಲಕ್ಷ ರೂಪಾಯಿಗಳನ್ನು ಕೊಟ್ಟಿರಿ ಇದರಲ್ಲಿ ೮೦ ಮೈಲಿಗಳಷ್ಟು ಮುಗಿಸಲು ೨೫ ಲಕ್ಷ ರೂಪಾಯಿಗಳಾಗುತ್ತದೆ ಅದನ್ನಾದರೂ ಕೊಟ್ಟರೆ ರಸ್ತೆಗಳನ್ನು ನಿರ್ಮಿಸಲು ಅನುಕೂಲವಾಗುತ್ತದೆಂದು ಸರ್ಕಾರದ ಗಮನಕ್ಕೆ ತರಬಯಸುತ್ತೇನೆ.

೪–೩೦ ಪಿ.ಎಂ.

ವಿಜಯನಗರದ ಆಳರಸರು ೧೩, ೧೪ನೇ ಶತಮಾನದ ಹಿಂದೆ ಕೆಲವು ಅಣೆಕಟ್ಟುಗಳನ್ನು ಕಟ್ಟಿಸಿದ್ದಾರೆ ಆ ಅಣೆಕಟ್ಟುಗಳ ಹಿಂದೆ ೨ ರಿಂದ ೩ ಸಾವಿರ ಎಕರೆ ಭೂಮಿ ನೀರಾವರಿಯಾಗುತ್ತದೆ. ಶಿರಗುಪ್ಪ ಮತ್ತು ಕಾಂಚನಗೂಡು ಹತ್ತಿರ ತುಂಗಭದ್ರಾ ನದಿಗೆ ಅಣೆಕಟ್ಟು ಕಟ್ಟಿದ್ದಾರೆ. ೪೦೦, ೫೦೦ ವರ್ಷಗಳ ಹಿಂದೆ ಕಟ್ಟಿಸಿದಂತಹ ಅಣೆಕಟ್ಟುಗಳು ಇದುವರೆಗೆ ರಿಪೇರಿ ಕೂಡ ಆಗಿಲ್ಲ. ನೀರು ಸೋರಿ ಹೋಗುತ್ತಿದೆ. ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ಅಣೆಕಟ್ಟುಗಳನ್ನು ಕಟ್ಟುತ್ತಿರುವಾಗ ಇರುವ ಅಣೆಕಟ್ಟುಗಳನ್ನು ಏತಕ್ಕೆ ರಿಪೇರಿ ಮಾಡಬಾರದು. ಅದೇ ರೀತಿ ಪ್ರತಿಯೊಂದು ಅಣೆಕಟ್ಟಿಗೂ ದುರಸ್ತಿಗಾಗಿ ಹಣವನ್ನು ಖರ್ಚುಮಾಡುತ್ತಿದ್ದೇವೆ ೫೦೦ ವರ್ಷಗಳ ಹಿಂದೆ ಕಟ್ಟಿದಂತಹ ಅಣೆಕಟ್ಟನ್ನು ಏತಕ್ಕೆ ರಿಪೇರಿ ಮಾಡಬಾರದು ? ನಮ್ಮ ಕಡೆ ನಿಮಗೆ ಹೊಸದಾಗಿ ಅಣೆಕಟ್ಟು ಕಟ್ಟಿಸುವುದಕ್ಕಂತು ಸಾಧ್ಯವಿಲ್ಲ. ಆಳರಸರು ಕಟ್ಟಿಸಿರತಕ್ಕ ಅಣೆಕಟ್ಟುಗಳನ್ನು ರಿಪೇರಿ ಮಾಡಿಸುವುದಕ್ಕೆ ನಿಮಗೇನು ತೊಂದರೆ ? ಇರುವ ತೊಂದರೆ

ಯನ್ನು ತಿಳಿಸಿ ಇಲ್ಲ. ಹೊಸದಾಗಿ ಅಣೆಕಟ್ಟು ನಿರ್ಮಾಣ ಮಾಡಬೇಕೇ ? ಮೊದಲು ಎರಡೂ ಅಣೆಕಟ್ಟು ಗಳನ್ನು ಆದಷ್ಟು ಜಾಗ್ರತೆ ರಿಪೇರಿ ಮಾಡಿಸಬೇಕೆಂದು ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಮೆಡಿಕಲ್ ಕಾಲೇಜು ವಿಷಯದಲ್ಲಿ ಹೇಳಬೇಕೆಂದರೆ, ಬಳ್ಳಾರಿ ಜಿಲ್ಲೆಯಲ್ಲಿ ೧೯೬೧ನೇ ಇಸವಿಯಲ್ಲಿ ಸರ್ಕಾರಿ ಮೆಡಿಕಲ್ ಕಾಲೇಜನ್ನು ಸರ್ಕಾರವೇ ಸ್ಥಾಪನೆ ಮಾಡಲಾಗಿದೆ. ಮೆಡಿಕಲ್ ಕಾಲೇಜನ್ನು ಸ್ಥಾಪನೆ ಮಾಡಿ ೨೨ ವರ್ಷಗಳು ಕಳೆದರೂ ಕೂಡ ಯಾವುದೇ ರೀತಿಯ ಸೌಕರ್ಯಗಳು ಅಲ್ಲಿ ಇಲ್ಲ. ಬಳ್ಳಾರಿ ಮೆಡಿಕಲ್ ಕಾಲೇಜಿನಲ್ಲಿ ಓದಲೇಬಾರದು ಎನ್ನುವ ಒಂದು ಮನೋಭಾವನೆ ಮೆಡಿಕಲ್ ವಿದ್ಯಾರ್ಥಿಗಳಲ್ಲಿ ಬಂದುಬಿಟ್ಟಿದೆ. ಗುಲ್ಬರ್ಗ, ಧಾರವಾಡ ಇನ್ನಿತರ ಕಡೆಗಳಲ್ಲಿ ನಡೆಯುತಕ್ಕ ಮೆಡಿಕಲ್ ಕಾಲೇಜುಗಳು ಸುವ್ಯವಸ್ಥೆಯಾಗಿ ನಡೆಯುತ್ತಿವೆ. ಬಳ್ಳಾರಿಯಲ್ಲಿ ಮಾತ್ರ ಏತಕ್ಕೆ ಇನ್ನೂ ಕಂಪ್ಲೀಟ್ ಆಗಿಲ್ಲ ? ಅಲ್ಲಿಯ ಜನರು ಮತ್ತು ಶಾಸಕರು ಕೇಳುವುದಿಲ್ಲವೆಂದು ಈ ರೀತಿ ಮಾಡುತ್ತಿದ್ದೀರಾ? ಎರಡನೆಯ ಸ್ಟೇಜ್ ಮುಗಿದಿದ್ದರೂ ಮೂರನೆಯ ಸ್ಟೇಜನ್ನು ಏತಕ್ಕೆ ಇನ್ನು ಮಂಜೂರು ಮಾಡಿಲ್ಲ. ೧೯೮೨–೮೩ನೇ ಸಾಲಿನ ಬಡ್ಜೆಟ್‌ನಲ್ಲಿ ಸೇರಿಸಿ ಕೆಲಸಗಳನ್ನು ಬೇಗ ಮಾಡಿ ಮುಗಿಸಿ ; ಇದು ಸರ್ಕಾರಿ ಕಾಲೇಜು. ಪ್ರೈವೇಟ್ ಕಾಲೇಜ್‌ನವರಾದರೇ ಒಬ್ಬ ಮೆಡಿಕಲ್ ವಿದ್ಯಾರ್ಥಿಯಿಂದ ೧ ರಿಂದ ೩ ಲಕ್ಷ ರೂಪಾಯಿಗಳವರೆಗೂ ಡೊನೇಷನ್ ತೆಗೆದುಕೊಳ್ಳುತ್ತಾರೆ. ಅಖಂಡ ಕರ್ನಾಟಕದಲ್ಲಿ ಬಳ್ಳಾರಿ ಒಂದು ನಾಂದಿ ಎಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ೧-೧೦-೧೯೫೩ರಲ್ಲಿ ಬಳ್ಳಾರಿ ಮೈಸೂರು ರಾಜ್ಯಕ್ಕೆ ಸೇರಿತು. ಆಗ ಹೊಸ ಮೈಸೂರು ಹಳೇ ಮೈಸೂರು ಎಂದು ಕರೆಯಲಾಗುತ್ತಿತ್ತು. ಈಗ ಎಲ್ಲಾ ಸೇರಿಕೊಂಡು ಕರ್ನಾಟಕ ಎಂದು ಆಗಿದೆ. ಬಳ್ಳಾರಿ ಜಿಲ್ಲೆಯಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವಲ್ಲಿ ಏತಕ್ಕೆ ಉದಾಸೀನ ಮಾಡುತ್ತಾರೋ ಗೊತ್ತಿಲ್ಲ. ಈಗಲಾದರೂ ಸರ್ಕಾರ ಬಳ್ಳಾರಿ ಮೆಡಿಕಲ್ ಕಾಲೇಜಿನ ೩ನೇ ಸ್ಟೇಜಿನ ಕೆಲಸಕಾರ್ಯಗಳನ್ನು ಆದಷ್ಟು ಮಟ್ಟಿಗೆ ಮುಗಿಸಬೇಕೆಂದು ಸರ್ಕಾರದಲ್ಲಿ ಮನವಿಮಾಡಿಕೊಳ್ಳುತ್ತೇನೆ.

ಇನ್ನು 'ಆಲ್ ಇಂಡಿಯಾ ರೇಡಿಯೋ ಅಂಡ್ ಬ್ರಾಡ್‌ಕಾಸ್ಟಿಂಗ್'' ಈಗಿನ ಮುಖ್ಯ ಮಂತ್ರಿಗಳು ಹಿಂದೆ ವಾರ್ತಾ ಮಂತ್ರಿಗಳಾಗಿದ್ದಾಗ ಬಳ್ಳಾರಿ 'ಆಲ್ ಇಂಡಿಯಾ ರೇಡಿಯೋ ಅಂಡ್ ಬ್ರಾಡ್‌ಕಾಸ್ಟಿಂಗ್' ಮಾಡಲು ಆದಷ್ಟು ಜಾಗ್ರತೆ ಕೇಂದ್ರ ಸರ್ಕಾರದವರೊಡನೆ ಮಾತನಾಡಿ ಸ್ಟೇಷನ್‌ನನ್ನು ಪ್ರಾರಂಭ ಮಾಡಲು ಏರ್ಪಾಡು ಮಾಡಲಾಗುತ್ತದೆಂದು ಹೇಳಿದ್ದಾರೆ. ಸ್ಟೇಷನ್ ಸ್ಥಾಪನೆ ಮಾಡಲು ೫ನೆಯ ಪಂಚವಾರ್ಷಿಕ ಯೋಜನೆಯಲ್ಲಿ ಸೇರಿಸಿದ್ದೇವೆಂದು ಹೇಳಿದ್ದಾರೆ. ಆಗ ಉತ್ತರ ಕೊಡುವಾಗ ಹೇಳಿದ್ದಾರೆ. ಸ್ಟೇಷನ್ ಮಾಡಲು ಬೇಕಾಗಿರತಕ್ಕ ಭೂಮಿ ಅಕ್ವೈರ್ ಮಾಡುತ್ತಿದ್ದೇವೆಂದು ಹೇಳಿದ್ದಾರೆ. ೫ನೆಯ ಪಂಚವಾರ್ಷಿಕ ಯೋಜನೆ ಮುಗಿದು ೬ನೆಯ ಪಂಚವಾರ್ಷಿಕ ಯೋಜನೆ ಬಂತು. ಇದರ ಬಗ್ಗೆ ಸರ್ಕಾರ ಏನು ಮಾಡಿದೆ ಯಾವ ಕ್ರಮ ತೆಗೆದುಕೊಂಡಿದೆ ಮತ್ತು ಯಾವ ಹಂತದಲ್ಲಿದೆ ಯಾವುದೂ ಅರ್ಥವಾಗುವುದಿಲ್ಲ. ಬಳ್ಳಾರಿ ಬೆಂಗಳೂರಿಗೆ ೨೦೦ ಮೈಲಿಗಳ ಅಂತರದಲ್ಲಿದೆ. ಗುಲ್ಬರ್ಗ ಮತ್ತು ದಾರವಾಡಕ್ಕೆ ಹೋಗುವ ಮಾರ್ಗದಲ್ಲಿ ಮಧ್ಯ ಭಾಗದಲ್ಲಿದೆ. ಈ ಕಡೆಗೆ ಗಮನಹರಿಸಿ 'ಆಲ್ ಇಂಡಿಯಾ ರೇಡಿಯೋ ಅಂಡ್ ಬ್ರಾಡ್‌ಕಾಸ್ಟಿಂಗ್'' ಮಾಡಲಿಕ್ಕೆ ಕೇಂದ್ರ ಸರ್ಕಾರದಲ್ಲಿ ಒತ್ತಾಯ ತಂದು ಆದಷ್ಟು ಬೇಗ ಕೆಲಸ ಮಾಡಿಸಿಕೊಡಬೇಕೆಂದು ವಿನಂತಿಮಾಡಿಕೊಳ್ಳುತ್ತೇನೆ. ಬಳ್ಳಾರಿಯಲ್ಲಿ ಟೆಲಿವಿಷನ್ ಸ್ಟೇಷನ್ ಕೂಡ ಸ್ಥಾಪನೆ ಮಾಡಬಹುದು. ತಾವು ಬೊಂಬಾಯಿಂದ ಟೆಲಿವಿಷನ್ ರೀಲೆ ಮಾಡುತ್ತಿದ್ದೀರಿ, ಟೆಲಿವಿಷನ್ ರೀಲೆ ಬೆಂಗಳೂರಿಗೆ ಬರಬೇಕಾದರೆ ಬಳ್ಳಾರಿಯಾ ಮಾರ್ಗವಾಗಿಯೇ ಬರಬೇಕಾಗುತ್ತದೆ. ಬಳ್ಳಾರಿಯಲ್ಲಿ ಟೆಲಿವಿಷನ್ ಸ್ಟೇಷನ್‌ನ್ನು ಏತಕ್ಕೆ ಸ್ಥಾಪನೆ ಮಾಡಬಾರದು?. ಟೆಲಿವಿಷನ್ ಸ್ಟೇಷನ್ ಸ್ಥಾಪನೆ ಮಾಡಲಿಕ್ಕೆ ಅನುಕೂಲವಾದ ಪ್ರದೇಶವೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಇದರ ಬಗ್ಗೆ ಸರ್ಕಾರ ಯಾವ ರೀತಿ ಮಾಡಿದರೆ ಅನುಕೂಲವಾಗಬಹುದು ಎಂಬುದನ್ನು ಯೋಚನೆ ಮಾಡಿ ಟಿ.ವಿ. ಸ್ಟೇಷನ್ ಪ್ರಾರಂಭ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನೊಂದು ಮುಖ್ಯವಾದ ವಿಷಯ ನಾನು ೨೫ ವರ್ಷಗಳಿಂದ ಹೇಳುತ್ತಿದ್ದೇನೆ. ರಾಷ್ಟ್ರೀಯ ಹೆದ್ದಾರಿಗಳ ವಿಷಯದಲ್ಲಿ ಎಲ್ಲಾ ರಾಜ್ಯಗಳ ಅಂಕಿ ಸಂಖ್ಯೆಗಳನ್ನು ತೆಗೆದುಕೊಂಡರೆ ರಾಷ್ಟ್ರೀಯ ಹೆದ್ದಾರಿಗಳ ಸಂಖ್ಯೆ ನಮ್ಮ ರಾಜ್ಯದಲ್ಲಿ ಬಹಳ ಕಡಿಮೆ ಇದೆ. ನಾನು ಪ್ರತಿಸಲ ಬಡ್ಜೆಟ್ ಅಧಿವೇಶನದಲ್ಲೂ ಹೇಳುತ್ತಿದ್ದೇನೆ. ಈಗ ನಮ್ಮ ಸುದೈವದಿಂದ ಕೇಂದ್ರದಲ್ಲಿ ಮಾನ್ಯ ವಿರೇಂದ್ರಪಾಟೀಲ್‌ರವರು ಮಂತ್ರಿಗಳಾಗಿದ್ದಾರೆ. ಅವರು ಹಿಂದುಳಿದ ಜಿಲ್ಲೆಗಳಿಂದ ಹೋಗಿದ್ದಾರೆ. ನಮ್ಮ ಸರ್ಕಾರ ಕೇಂದ್ರ ಸರ್ಕಾರದಲ್ಲಿ ಒತ್ತಾಯ ತಂದು ,,ಮೈಸೂರು–ಬೀದರ್'' ೯ನೆಯ ರಾಷ್ಟ್ರೀಯ ಹೆದ್ದಾರಿಯನ್ನಾಗಿ ರಾಜ್ಯ

ಹೆದ್ದಾರಿಯನ್ನು ಕನ್‌ವರ್ಟ್ ಮಾಡಬೇಕು. ಆ ರೀತಿಯ ಒಂದು ನಿರ್ಣಯವನ್ನು ಅಸೆಂಬ್ಲಿಯಲ್ಲಿ ಮಾಡಿ ಕೇಂದ್ರ ಸರ್ಕಾರದಲ್ಲಿ ಒತ್ತಾಯ ಮಾಡಬೇಕು. ಲೋಕೋಪಯೋಗಿ ಇಲಾಖೆಯವರು ಈ ಒಂದು ಕೆಲಸವನ್ನು ಟಾಪ್ ಪ್ರಿಯಾರಿಟಿಯ ಮೇಲೆ ಮಾಡಬೇಕು. ಮೈಸೂರು-ಬೀದರ್ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಮಾಡುವಾಗ ಮಂಡ್ಯ, ನಾಗಮಂಗಲ, ಹಿರಿಯೂರು, ಚಳ್ಳಕೆರೆ, ಸಿಂಧನೂರು. ಶಹಪುರ ಮತ್ತು ಬೀದರ್ ಈ ರೀತಿಯಾಗಿ ರಾಷ್ಟ್ರೀಯ ಹೆದ್ದಾರಿಯನ್ನು ಮಾಡಿದ್ದೇಯಾದರೇ ಇದು ೯ಜಿಲ್ಲೆಗಳ ಮೇಲೆ ಹಾದು ಹೋಗುತ್ತದೆ ಅದೇ ರೀತಿ ೬೦ತಾಲ್ಲೂಕು ಪ್ರದೇಶಗಳ ಮೇಲೆ ಬರುತ್ತದೆ. ಈ ಜಿಲ್ಲಾ ಮತ್ತು ತಾಲ್ಲೂಕುಗಳ ಹಿತದೃಷ್ಟಿಯಿಂದ ನಾವು ಹೆದ್ದಾರಿಯನ್ನು ಮಾಡಲು ಪ್ರಯತ್ನ ಮಾಡಲೇಬೇಕು. ಈ ಬಗ್ಗೆ ನಾನು ಲೋಕೋಪಯೋಗಿ ಮಂತ್ರಿಗಳ ಹತ್ತಿರ ಮಾತನಾಡಿದ್ದೇನೆ, ಕೇಂದ್ರ ಸರ್ಕಾರದ ಜೊತೆ ಮತ್ತು ಸಂಬಂಧಪಟ್ಟವರ ಜೊತೆಯಲ್ಲಿ ಮಾತನಾಡಿ, ಟಾಪ್ ಪ್ರಿಯಾರಿಟಿಯ ಮೇಲೆ ಶಿಫಾರಸ್ಸು ಮಾಡಲಾಗುತ್ತದೆಂದು ಹೇಳಿದ್ದಾರೆ. ಕೇಂದ್ರದಲ್ಲಿರ ತಕ್ಕ ಮಂತ್ರಿಗಳು ಕೂಡ ಇದೇ ಪ್ರದೇಶದಿಂದ ಹೋಗಿರುವವರಾಗಿರುವುದರಿಂದ ಅಲ್ಲಿ ಏನು ತೊಂದರೆ ಇದೆ ಎಂಬುದನ್ನು ಅರಿತುಕೊಂಡಿದ್ದಾರೆ. ಹಿಂದುಳಿದ ಪ್ರದೇಶಗಳಾದ್ದರಿಂದ ನಂಬರ್ ಒನ್ ಟಾಪ್ ಪ್ರಿಯಾರಿಟಿಯ ಮೇಲೆ ಕೇಂದ್ರ ಸರ್ಕಾರಕ್ಕೆ ನಮ್ಮ ಸರ್ಕಾರ ಶಿಫಾರಸ್ಸು ಮಾಡಬೇಕೆಂದು ನಾನು ಹೇಳುತ್ತೇನೆ. ನಾನು ಹೇಳಿರುವ ಪ್ರದೇಶಗಳು ಬಹಳ ಹಿಂದುಳಿದಿರುವುದರಿಂದ ಈ ಕೆಲಸ ಆಗಲೇಬೇಕಾಗಿದೆ. ನಾವು ಪ್ರತಿ ವರ್ಷ ರಸ್ತೆ ದುರಸ್ತಿಗಾಗಿ ಲಕ್ಷಾಂತರ ರೂಪಾಯಿಗಳನ್ನು ಖರ್ಚುಮಾಡುತ್ತಿದ್ದೇವೆ. ಈ ರಸ್ತೆ ಮಾಡಲಿಕ್ಕೆ ೧ ಕೋಟಿ ರೂಪಾಯಿ ಖರ್ಚು ಮಾಡಿದರೆ ಸರ್ಕಾರದ ಬೊಕ್ಕಸಕ್ಕೆ ಎಷ್ಟೋ ಹಣ ಉಳಿತಾಯವಾಗುತ್ತದೆ. ಉಳಿತಾಯವಾಗುವ ಹಣವನ್ನು ಬೇರೆ ಅಭಿವೃದ್ಧಿ ಕಾರ್ಯಗಳಿಗೆ ಉಪಯೋಗಮಾಡಿಕೊಳ್ಳಬಹುದು. ಪ್ರತಿ ವರ್ಷದ ಬಜೆಟ್ ಭಾಷಣದಲ್ಲೂ ಕೂಡ ಈ ಪ್ರಶ್ನೆ ಮಾಡುವ ಕಾಲಕ್ಕೆ ಪ್ರತಿಯೊಬ್ಬ ಅರ್ಥ ಮಂತ್ರಿಗಳು ಮಾಡಲಾಗುತ್ತದೆಂದು ಹೇಳುತ್ತಾರೆ. ಅದೇ ಪ್ರಕಾರ ಈ ವರ್ಷ ಕೂಡ ಹೇಳಿದ್ದಾರೆ. ತಾವು ಏನೇ ಮಾಡಿದರೂ ಮೂರ್ನಾಲ್ಕು ಸೌಕರ್ಯಗಳನ್ನು ಮಾಡಿಕೊಡುವುದನ್ನು ಮರೆಯಬಾರದು. ನಾವು ಎಷ್ಟೋ ಕಾರ್ಯಕ್ರಮಗಳನ್ನು ಹಾಕಿಕೊಳ್ಳುತ್ತೇವೆ ಅದರಲ್ಲಿ ಕೆಲವನ್ನಾದರೂ ಕಾರ್ಯಗತ ಮಾಡುವ ಕಡೆಗೆ ಗಮನಕೊಡಬೇಕು. ಬಡಜನರಿಗೆ ನೀವು ಏನು ಹೆಚ್ಚಿಗೆ ಕೊಡಬೇಡಿ ಮಿನಿಮಮ್ ನೀಡ್ಸ್ ಪ್ರೋಗ್ರಾಮ್‌ನಲ್ಲಿ ಕುಡಿಯುವ ನೀರು. ವಿದ್ಯುಚ್ಛಕ್ತಿ, ರಸ್ತೆ ಇವುಗಳನ್ನಾದರೂ ಒದಗಿಸಿ ಕೊಡಬೇಕು. ಪಟ್ಟಣಗಳಲ್ಲಿ ಒಂದು ಗಂಟೆ ಕುಡಿಯುವ ನೀರು ಬರಲಿಲ್ಲ ಅಂದರೆ ಅಸೆಂಬ್ಲಿಯಲ್ಲಿ ಗಲಾಟೆಯಾಗುತ್ತದೆ. ಆದರೆ ಹಳ್ಳಿಗಾಡಿನಲ್ಲಿರತಕ್ಕ ಬಡಜನರು ಹಿಂದೆ ಯಾವ ರೀತಿಯಲ್ಲಿದ್ದರು ಈಗಲೂ ಕೂಡ ಅದೇ ರೀತಿಯಲ್ಲಿದ್ದಾರೆಂದು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಪ್ರತಿ ಐದು ವರ್ಷಗಳಿಗೊಮ್ಮೆ ಹಾಕಿಕೊಳ್ಳುವ ಕಾರ್ಯಕ್ರಮದಂತೆ ಈ ವರ್ಷ ಕೂಡ ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೇವೆ. ಪ್ರತಿವರ್ಷದಲ್ಲೂ ಕೂಡ ರಸ್ತೆ ಮಾಡಿಕೊಡುತ್ತೇವೆಂದು ಹಣ ಇಟ್ಟಿರುತ್ತಾರೆ. ಆದರೆ ಆ ಹಣವನ್ನು ಬೇರೆ ವಿಷಯಗಳಿಗೆ ಖರ್ಚುಮಾಡುತ್ತಾರೆ. ಮಳೆಗಾಲದಲ್ಲಂತೂ ಒಂದು ಊರಿನಿಂದ ಮತ್ತೊಂದು ಊರಿಗೆ ಹೋಗಬೇಕಾದರೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ತಾಲ್ಲೂಕು ರಸ್ತೆಗಳನ್ನು ಮೈನ್ ರಸ್ತೆಗಳಿಗೆ ಸೇರಿಸುವ ಕೆಲಸವನ್ನು ಮಾಡಲು ಯೋಚನೆ ಮಾಡಬೇಕು.

ಪಟ್ಟಣ ಪ್ರದೇಶಗಳಿಗೆ ಖರ್ಚು ಮಾಡುವಂತಹ ಹಣ ಏನಿದೆ, ಇದರಲ್ಲಿ ಹತ್ತು ಪರ್ಸೆಂಟ್ ಆದರೂ ಗ್ರಾಮಾಂತರ ಪ್ರದೇಶಗಳಿಗೆ ಏತಕ್ಕೆ ಖರ್ಚು ಮಾಡಬಾರದೆಂದು ನಾನು ಸರ್ಕಾರಕ್ಕೆ ಕೇಳುತ್ತೇನೆ? ರೂರಲ್ ಎಲೆಕ್ಟ್ರಿಫಿಕೇಷನ್ ಬಗ್ಗೆ ಕೂಡ ಸಾಕಷ್ಟು ಕೆಲಸ ಆಗಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ. ಪ್ರತಿಸಲವೂ ಸರ್ಕಾರದವರು ಒಂದು ಸಾವಿರ ಇಲ್ಲವೇ ಎರಡು ಸಾವಿರ ಹಳ್ಳಿಗಳಿಗೆ ಎಲೆಕ್ಟ್ರಿಫಿಕೇಷನ್ ಮಾಡುವುದಾಗಿ ಹೇಳುತ್ತಾರೆ. ಆದರೆ ಆಗುವುದು ೫೦೦ ರಿಂದ ೬೦೦ ಹಳ್ಳಿಗಳಿಗೆ ಮಾತ್ರ. ಮತ್ತೊಂದು ಉದಾಹರಣೆ ಕೊಡಬೇಕೆಂದರೆ, ೧೯೮೧–೮೨ನೇ ಸಾಲಿನಲ್ಲಿ ರಸ್ತೆಗಳಿಗೆಂದು ೧೨ ಕೋಟಿ ರೂ.ಗಳನ್ನು ಇಡಲಾಗಿತ್ತು. ಆದರೆ ಈ ಹಣವನ್ನು ಮಾರ್ಚಿ ಹತ್ತರಂದು ಮಂಜೂರು ಮಾಡಲಾಯಿತು. ಟೆಂಡರ್ ಕರೆದು ಮಾರ್ಚಿ ೩೧ರೊಳಗಾಗಿ ಇಷ್ಟು ಹಣವನ್ನು ಖರ್ಚು ಮಾಡುವುದು ಸಾಧ್ಯವೇ? ಇಷ್ಟು ಅಲ್ಪ ಅವಧಿಯಲ್ಲಿ ಒಂದು ಕೋಟಿ ರೂಪಾಯಿ ಸಹ ಖರ್ಚಾಗುವುದಿಲ್ಲವೆಂದು ನಾನು ಘಂಟಾಘೋಷವಾಗಿ ಹೇಳುತ್ತೇನೆ. ೧೯೮೨–೮೩ನೇ ಸಾಲಿನಲ್ಲಿಯೂ ಸಹ ರಸ್ತೆಗಳಿಗೆ ಎಂದು ಹಣ ಇಟ್ಟಿದ್ದೀರಿ. ಆದರೆ ಕೆಲಸವನ್ನು ಜಾಗ್ರತೆ ಪ್ರಾರಂಭ ಮಾಡುವುದಿಲ್ಲ. ವರ್ಷದ ಕೊನೆಯಲ್ಲಿ ಕೆಲಸ ತೆಗೆದುಕೊಂಡರೆ ಹಣವೆಲ್ಲಾ ಉಳಿದುಹೋಗುತ್ತದೆ. ಇನ್ನು ಮುಂದೆ ಇದಕ್ಕೆ ಅವಕಾಶ ಕೊಡದೆ ಎಲ್ಲ ಹಣವನ್ನು ಸಹ ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆ ಸೌಕರ್ಯ ಕಲ್ಪಿಸಿಕೊಡಲು ಖರ್ಚು ಮಾಡಬೇಕೆಂದು ಹೇಳುತ್ತೇನೆ.

ಇನ್ನು ಆಡಳಿತ ವಿಚಾರದಲ್ಲಿ ಒಂದೆರಡು ಮಾತುಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಮೂರನೇ ಮಹಡಿಯಲ್ಲಿರುವ ವಿದ್ಯಾಮಂತ್ರಿಗಳಿಗೆ ಒಂದು ಕಾಗದ ಬರೆದರೆ, ಅದು ಎರಡನೇ ಮಹಡಿಗೆ ಬರಲು ಒಂದೆರಡು ತಿಂಗಳಾಗುತ್ತದೆ. ನಾನು ವಿದ್ಯಾ ಮಂತ್ರಿಗಳಿಗೆ ಕಳೆದ ಜೂನ್ ತಿಂಗಳಲ್ಲಿ ಕಾಲೇಜ್ ಬಿಲ್ಡಿಂಗ್ ಗ್ರ್ಯಾಂಟ್ಸ್ ಬಗ್ಗೆ ಒಂದು ಕಾಗದ ಬರೆದೆ. ನಂತರ ಅದು ಸಂಬಂಧಪಟ್ಟ ಸೆಕ್ರೆಟರಿ ಅವರ ಟೇಬಲ್‌ಗೆ ಬಂದಿದೆಯೋ ಅಥವಾ ಇಲ್ಲವೋ ಎಂಬ ಬಗ್ಗೆ ನಾಲ್ಕೈದು ಸಲ ವಿಚಾರಿಸಿದಾಗಲೂ ಸಹ ಅದು ಬಂದಿರಲಿಲ್ಲ. ಕೊನೆಗೆ ನಾನು ಬರೆದ ಕಾಗದದ ಫೈಲೇ ಇಲ್ಲ ಎಂದು ತಿಳಿದುಬಂತು. ಒಬ್ಬ ಎಂ.ಎಲ್.ಎ. ಬರೆದ ಕಾಗದದ ಗತಿಯೇ ಈ ರೀತಿಯಾದರೆ ಇನ್ನು ಸಾಮಾನ್ಯ ಜನರು ಬರೆದ ಕಾಗದಕ್ಕೆ ಯಾವ ಬೆಲೆ ಇವೆ ಎಂಬುದನ್ನು ಇದರಿಂದಲೇ ನಾವು ಊಹಿಸಬಹುದು. ಮುಖ್ಯವಾಗಿ ನಾನು ಗ್ರ್ಯಾಂಟ್‌ಗೆ ಸಂಬಂಧಪಟ್ಟಂತೆ ಕಾಗದ ಬರೆದಿದ್ದೆ. ಇಗನೇ ತಾರೀಖು ಮಾರ್ಚಿ ತಿಂಗಳೊಳಗಾಗಿ ಅದನ್ನು ಪಡೆಯಬೇಕು. ಆದರೆ ಇದಕ್ಕೆ ಸಂಬಂಧಪಟ್ಟ ಫೈಲ್ ಇಲ್ಲವೆಂದರೆ ನಾವು ಗ್ರ್ಯಾಂಟ್ ಯಾವ ರೀತಿ ತೆಗೆದುಕೊಳ್ಳುವುದು? ಇದು ಏನು ತೋರಿಸುತ್ತದೆಂದರೆ, ವಿದ್ಯಾ ಮಂತ್ರಿಗಳಿಗೆ ತಮ್ಮ ಒಂದು ಆಡಳಿತದಲ್ಲಿ ಕಂಟ್ರೋಲ್ ಇದೆಯೋ ಅಥವಾ ಇಲ್ಲವೋ ಎಂಬ ಅನುಮಾನ ಬರುತ್ತಿದೆ. ಕುದುರೆ ಸವಾರ ಸರಿಯಾಗಿರದಿದ್ದರೆ ಕುದುರೆ ಸರಿಯಾಗಿ ಓಡುವುದಿಲ್ಲವೆಂದು, ಈಗಿನ ಒಂದು ಅಧಿಕಾರ ವರ್ಗ ಇದೇ ರೀತಿ ಇದೆಯೆಂದು ಮಾನ್ಯ ಪಟೇಲ್ ಏನು ಹೇಳಿದರು, ಅದು ನಿಜವೆಂಬ ಭಾವನೆ ನನಗೆ ಬರುತ್ತಿದೆ. ಏಕೆಂದರೆ, ಇದು ಎಲ್ಲ ಮಟ್ಟದಲ್ಲಿಯೂ ನಡೆಯುತ್ತಿದೆ. ಯಾರೇ ಸರ್ಕಾರಕ್ಕೆ ಕಾಗದ ಬರೆಯಲಿ ಅದರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಲಾಯಿತೆಂಬ ಬಗ್ಗೆ ಸಂಬಂಧಪಟ್ಟವರಿಂದ ಉತ್ತರವೇ ಬರುವುದಿಲ್ಲ. ಇದರ ಜೊತೆಗೆ ನಾನು ಬರೆದ ಒಂದು ಕಾಗದ ನಾಪತ್ತೆಯಾಗಿದೆ. ಈ ರೀತಿಯಾದರೆ ಸರ್ಕಾರ ನಡೆಸುವುದಾದರೂ ಹೇಗೆ? ಸರ್ಕಾರದ ಸೆಕ್ರೆಟರಿಗಳು ಸಾರ್ವಜನಿಕರಿಗೆ ಮಧ್ಯಾಹ್ನ ೩ ರಿಂದ ೪ ಗಂಟೆಯವರೆಗೆ ಇಂಟರ್‌ವ್ಯೂ ಕೊಡಬೇಕೆಂದು ಮತ್ತು ಬೆಳಿಗ್ಗೆ ಹತ್ತೂವರೆಯಿಂದ ಮಧ್ಯಾಹ್ನ ೩ ಗಂಟೆಯವರೆಗೆ ಇಂಟರ್‌ವ್ಯೂಗೆ ಯಾರೂ ಹೋಗಬಾರದೆಂದು ಒಂದು ನಿಯಮವಿದೆ. ಇದರ ಪ್ರಕಾರ ನಾವಾಗಲೀ ಅಥವಾ ಸಾರ್ವಜನಿಕರಾಗಲೀ ಇಂಟರ್‌ವ್ಯೂಗೆ ಹೋದರೆ, ಅವರು ಸಿಗುವುದೇ ಇಲ್ಲ, ಸೆಕ್ರೆಟರಿ ಅವರು ಡಿಸ್‌ಕಷನ್‌ನಲ್ಲಿದ್ದಾರೆ ಇಲ್ಲವೇ ಮಂತ್ರಿಗಳನ್ನು ನೋಡಲು ಹೋಗಿದ್ದಾರೆ ಇಲ್ಲವೇ ಬೇರೆ ಮೀಟಿಂಗ್‌ಗೆ ಹೋಗಿದ್ದಾರೆಂದು ಹೇಳುತ್ತಾರೆ, ೩ ರಿಂದ ನಾಲ್ಕು ಗಂಟೆಯವರೆಗೆ ಬೇರೆ ಕಾರ್ಯಕ್ರಮ ಇಟ್ಟುಕೊಳ್ಳದೆ ಎಲ್ಲರಿಗೂ ಸಂದರ್ಶನ ಕೊಡಬೇಕೆಂದು ಮುಖ್ಯ ಮಂತ್ರಿಗಳು ಎಲ್ಲ ಸೆಕ್ರೆಟರಿಗಳಿಗೂ ಖಂಡತುಂಡವಾಗಿ ಹೇಳಬೇಕು. ಏಕೆಂದರೆ, ಕೆಲವು ಸಲ ಸೆಕ್ರೆಟರಿಗಳು ಇರಲಿ ಡೆಪ್ಯೂಟಿ ಸೆಕ್ರೆಟರಿ ಅವರೂ ಸಹ ನೋಡಲು ಸಿಗುವುದಿಲ್ಲ. ನಮ್ಮ ಮುಖ್ಯ ಮಂತ್ರಿಗಳು ಜನರಿಗೆ ಅನುಕೂಲ ಮಾಡಿಕೊಡುವ ದೃಷ್ಟಿಯಿಂದ ಫೈಲ್ ಕ್ಲಿಯರೆನ್ಸ್ ಕಾರ್ಯಕ್ರಮ ಇಟ್ಟುಕೊಂಡಿದ್ದಾರೆ. ಆದರೆ ಅಧಿಕಾರಿಗಳೇ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅಂದರೆ ಈಗಿನ ಆಡಳಿತದಲ್ಲಿ ಏನೋ ಕುಂದು ಇಲ್ಲವೇ ತೊಂದರೆ ಇದೆ ಎಂದು ಕಾಣುತ್ತಿದೆ. ೧೯೬೦ರಲ್ಲಿ ಶ್ರೀ ಜತ್ತಿಯವರು ಮುಖ್ಯ ಮಂತ್ರಿಗಳಾಗಿದ್ದಾಗ ಆಡಳಿತದಲ್ಲಿ ಬಿಗಿ ಯಾವ ರೀತಿ ಇರಬೇಕು, ಸಾಮಾನ್ಯ ಜನರಿಗೆ ಯಾವ ರೀತಿ ಅನುಕೂಲ ಮಾಡಿಕೊಡಬೇಕು ಎಂಬ ಬಗ್ಗೆ ವಿಚಾರ ಮಾಡಿ ಒಂದು ವರದಿ ಕೊಡುವಂತೆ ಗೋರ್ವಾಲ ಕಮಿಟಿಯನ್ನು ರಚನೆ ಮಾಡಲಾಯಿತು. ಇದು ಆಗಿ ೨೨ ವರ್ಷಗಳಾಯಿತು. ಈಗ ಇಲಾಖೆಗಳು ಜಾಸ್ತಿಯಾಗಿವೆ ಮತ್ತು ಅಧಿಕಾರಿಗಳು ಸಹ ಜಾಸ್ತಿಯಾಗಿದ್ದಾರೆ. ಆದ್ದರಿಂದ ಜನರ ಕುಂದು ಕೊರತೆಗಳನ್ನು ಜಾಗ್ರತೆ ನಿವಾರಣೆ ಮಾಡಲು ಏನು ಕ್ರಮ ತೆಗೆದುಕೊಳ್ಳಬೇಕೆಂಬ ಬಗ್ಗೆ ವಿಚಾರ ಮಾಡಿ ಒಂದು ವರದಿ ಕೊಡಲು ಸರ್ಕಾರದವರು ಕೂಡಲೇ ಒಂದು ಹೈ-ಲೆವಲ್ ಕಮಿಟಿ ರಚನೆ ಮಾಡಬೇಕೆಂದು ಹೇಳುತ್ತೇನೆ. ಒಟ್ಟಿನಲ್ಲಿ ಜನರ ಒಂದು ತೊಂದರೆಗಳನ್ನು ಜಾಗ್ರತೆ ನಿವಾರಣೆ ಮಾಡಬೇಕೆಂದು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಂಡು, ನನಗೆ ಸ್ವಲ್ಪ ಹೆಚ್ಚು ಕಾಲಾವಕಾಶ ಕೊಟ್ಟ ಉಪಾಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

SRI N. SIRDESAI (Khanapur).—Mr. Deputy Speaker, Sir, there is an old saying that all that glitters is not gold. So, all that has been said to be done by the Government cannot always be correct. We must congratulate them for whatever good they have done and we must admonish them if they are at wrong. We must give them a chance to improve themselves. In my opinion, this Government

have failed in implementing thier own declared polices and they have failed to fulfil the assurance given by them. So, I have to oppose this budget for the year 1982-83.

Now, before making any suggestion or pointing out the failures of the Government, I would like to state that I am only interested in alerting the Government or cautioning them against wrong doing I am not interested in toppling any Government of this State. We have never wished for the downfall of any Government.

At the outset, I would like to offer our compliments on behalf of the cultivators in Supa, Khanapur, Belgaum taluk and our hearty thanks to our Chief Minister Sri R. Gundu Rao, for having granted registration to four Sugar factories including ours in Khanapur. He has been kind enough to grant registration to four factories and he has expressed his desire to bring up the Sugar industries. I am convinced that he is having a broad outlok and broad policy so far as the Sugar industry is concerned. In the begining I was doubtful as to whether the Hon'ble Chief Minister Sri R. Gundu Rao would grant registration to our factory because I hail from the disputed border area and belong to Maharashtra Ekikarana Samithi But he has disproved this apprehension and granted registration. For this act of kindness, on behalf of the concerned cultivators, I once again thank him heartily.

Sir, with regard to the border dispute, we have been fighting for the merger of our area for the last 25 years and in this regard I can say that all the legislators present here and the Government of Karnataka have admitted that this border problem exists and it is pending since a long time of 25 years.

SRI S. M. GHANDRASHEKAR.—It is only a mis-conception.

SRI N. B. SIRDESAI.—No I will prove here.

SRI S. M. CHANDRASHEKAR.—None of us admit it.

(*INTERRUPTION*)

SRI N. B. SIRDESAI.—With concrete evidence, I will prove it.

SRI S. M. CHANDRASHEKAR.—I am sorry.

SRI S. M. SHEERNALLY CHANDRASEKHAR.—It is only a misconception. I am sorry.

SRI N. B. SIRDESAI.—It is not a misconception. It is an admitted fact. I will prove it.

SRI G. K. TAKKED.—Sir, I raise a point of order...

MR. DEPUTY SPEAKER.—The hon. member has not yielded.

ಶ್ರೀ ಜಿ. ಕೆ. ತಕ್ಕೇಡ್.—ಮಾನ್ಯ ಸದಸ್ಯರು ಮುಂಗಡ ಪತ್ರದ ಮೇಲೆ ಅಸಮಂಜಸವಾದಂಥಾ ಮಾತುಗಳನ್ನಾಡುತ್ತಿದ್ದಾರೆ. ಮುಂಗಡ ಪತ್ರಕ್ಕೆ ಸಂಬಂಧಪಡದೇ ಇರತಕ್ಕಂಥಾ ವಿಷಯಗಳನ್ನು ಮಾತನಾಡುತ್ತಿದ್ದಾರೆ. ಮತ್ತೇ ಮತ್ತೆ ಇದೇ ವಿಷಯ ಮಾತನಾಡುತ್ತಿದ್ದಾರೆ. ಕರ್ನಾಟಕ ಮಹಾರಾಷ್ಟ್ರ ಗಡಿ ವಿಷಯ ಏನು ಇದೆ ಇದು ಮುಗಿದ ಹೋದ ಪ್ರಶ್ನೆ ಪುನಃ ಪುನಃ ಕೆದುಕುತ್ತಿದ್ದಾರೆ. ಇದು ವಿಷಯಾಂತಕಾರಿಯಾದ ವಿಷಯ. ಅವರು ಇಲ್ಲೇ ಇದ್ದು ಕರ್ನಾಟಕದ ಅನ್ನವನ್ನು ಉಣ್ಣುತ್ತಾ ಕರ್ನಾಟಕದ ಸಂಬಳ ಸಾರಿಗೆಗಳನ್ನು ಪಡೆಯುತ್ತಾ ಇದ್ದರೂ ಸಹ ಅಲ್ಲದೆ ಇಲ್ಲಿ ಪ್ರಮಾಣ ವಚನ ಸ್ವೀಕರಿಸಿದಾಗ ಈ ಸರ್ಕಾರಕ್ಕೆ ಸತ್ಯದಿಂದ ನಿಷ್ಠೆಯಿಂದ ನಡೆದುಕೊಳ್ಳುತ್ತೇವೆಂದ ಪ್ರತಿಜ್ಞೆ ಮಾಡಿದ್ದರೂ ಕೂಡ ಅದರಂತೆ ನಡೆದುಕೊಳ್ಳುತ್ತಾ ಇಲ್ಲ. ನಮ್ಮ ಕರ್ನಾಟಕ ಸರ್ಕಾರಕ್ಕೆ ಸರಿಯಾಗಿ ನಿಷ್ಠೆಯನ್ನು ವ್ಯಕ್ತಪಡಿಸದೆ ಮತ್ತೆ ಮಹಾರಾಷ್ಟ್ರಕ್ಕೆ ಹೋಗುವ ನಿಷ್ಠೆಯನ್ನು ವ್ಯಕ್ತಪಡಿಸುತ್ತಿದ್ದಾರೆ. ಆದುದರಿಂದ ಮಾನ್ಯ ಸದಸ್ಯರನ್ನು ಈ ಸದನದಿಂದ ಹೊರಗೆ ಹಾಕಬೇಕು ಎಂದು ಹೇಳುತ್ತೇನೆ. ಕರ್ನಾಟಕ ಸರ್ಕಾರಕ್ಕೆ ನಿಷ್ಠೆ ಇಲ್ಲದೆ ಸತ್ಯದಿಂದ ನಡೆದು ಕೊಳ್ಳುತ್ತೇವೆಂದು ಹೇಳಿದ್ದರೂ ಹಾಗೆ ನಡೆದುಕೊಳ್ಳದೇ ಇದ್ದಂಥಾವರು ಇಲ್ಲಿ ಇರ ಬಾರದು. ಅಂಥಾವರು ಈ ಮುಂಗಡ ಪತ್ರಕ್ಕೆ ಸಂಬಂಧಪಡದೇ ಇರುವಂಥಾ ವಿಷಯವನ್ನು ಪ್ರಸ್ತಾಪ ಮಾಡಬಾರದು ಎಂದು ಹೇಳುತ್ತೇನೆ.

MR. DEPUTY SPEAKER.—There is no point and there is no order.

SRI N. B. SIRDESAI.—Sir, on the floor of this House the Government of Karnataka has passed three resolutions. First resolution was passed on 28th December, 1967, the second resolution was passed on 26th February, 1970, and the third resolution was passed on 26th December, 1970. This information is provided in reply to L.A. Question No. 614 dated 21st July, 1981 by our Hon'ble Chief Minister. It has been admitted that border dispute is pending and further it has been...

SRI S. M. SHEERNALY CHANDRASEKHAR.—Sir, I raise a point of order. ಮಾನ್ಯ ಸದಸ್ಯರು ಮತ್ತೇ ಮತ್ತೇ ಕರ್ನಾಟಕ ಮಹಾರಾಷ್ಟ್ರ ಗಡಿ ವಿಷಯ ಎತ್ತುತ್ತಿದ್ದಾರೆ ಎಂ.ಇ.ಎಸ್. ನವರು ಏನು ಪ್ರಯತ್ನ ಮಾಡಿದರೂ ಸಾಧನೆಯಾಗವುದಿಲ್ಲ. ನಿಮ್ಮ ಜನ್ಮದಲ್ಲಿ ಬೆಳಗಾಂ ನಮ್ಮ ಕೈಬಿಟ್ಟು ಹೋಗುವುದಿಲ್ಲ. ಸುಮ್ಮನೆ ಎತಕ್ಕೆ ಮಾತನಾಡುವುದಕ್ಕೆ ಹೋಗುತ್ತೀರಿ. This is a forgotten issue. I don't know why the hon. member is raking that issue.

SRI N. B. SIRDESAI.—Sir, very often merger of Kasargodu is being raised by the people of Karnataka and Government of Karnataka and this proves that the matter is pending before the Government. In the interest of national integrity, in the interest of linguistic and communal harmony in the State and outside the State I urge upon the Government to pass a fresh resolution empowering the Prime Minister of India to solve this vexed problem on some just principles. That is my earnest request to this Government.

MR. DEPUTY SPEAKER.—A very good suggestion.

SRI N. B. SIRDESAI.—Sir, as regards Sugar factories, I would urge upon our Hon'ble Chief Minister that he should encourage mini-sugar factories to solve the unemployment problem of rural people. If small sugar factories are established the question of unemployment would be solved. He should see that factories come up and get the industrial licence. He should consider it as his own responsibility.

In this connection I would like to make a suggestion. Sugar factories of 1250 T.C.D. to 2,000 T.C.D. only should be established and further expansion should not be allowed in any case.

I would like to make one another suggestion to solve the unemployment problem. In respect of Slum clearance, unnecessarily Government is spending lot of amount for providing ameneties or for erecting the buildings for the slum dwellers. This problem will never be solved in this way. The slum Clearance Board must stop the inflow of poor people rushing towards cities in search of employment. Inflow of people could be stopped only by establishing small scal industries in the villages. Then only the inflow of unemployed people rushing towards the city cloud be stopped and there would not be any further increase in the slums in cities. So, to put an end to this problem once for all they must establish industries in the villages. By erecting multi-storeyed buildings for the slum dwellers and by providing all amenities this problem will never be solved.

Sir, regarding afforestation scheme, it is stated that this programme consists of three categories viz. Production Forestry, Social Forestry and Composite Forestry. It is stated that 35,000 hectares of land is to be brought under Production Forestry and expenditure would be to the tune of 636 lakhs for 1981-82. No doubt this is a good scheme. But on one side the Government of Karnataka is carrying out afforestatien scheme by spending huge amount but on the other side the Departmental officers are looting by joining hands with the smugglers under the very nose of the Government. Smuggling is being carried out and this fact has been brought to the notice of the Government in this House by submitting a petition requesting to look into the matter. The Petition Committee had considered the application and had made certain recommendations to the Government and departmental officers. The officers have stated that they would look into the matter. They have fixed the responsibility but no action had been taken so far against the top officers. Whenever M.L.As. and Ministers are found quilty action is taken against them. If top officers are found guilty action should also be taken against. Every body must abide by the laws of the land Side by side deforestation is being carried out by the officers. It is stated that the tigress after giving birth would eat its own cubs. I have also seen Alsestion Bitch eating its own young ones after giving birth. It looks like that. The Departmental officers are carrying out afforestation and carrying out deforestion also by conniving with the smugglers. It must be stopped and officers concerned must be punished.

SRI S. M. SHEERNALY CHANDRASHEKHAR.—Like M.E.S. members.

SRI N. B. SIRDESAI.—Why are you criticising the M,E,S? Sir, as regards Irrigation project, a provision of Rs. 81.42 crores has been made for the year 1982–83 and for lay out Rs. 677 crores has been provided. Out of this Rs. 557 crores for Major and medium irrigation works is provided and Rs. 100 crores for minor irrigation works. Percentage of irrigation in the State is only 22 per cent and Government want to increase it by 7 per cent to make it 29 per cent only. My suggestion in this connection is, Government concentrate as they have already decided on few selected projects only. They should not destroy the forest wealth and spend huge amount on rehabilitation of vilages unnecessarily.

5–00 P.M.

Instead of destroying forest wealth, they should construct as many Bandhara barrages as possible in the river bed and in Nalas. They should also construct irrigation tanks which would serve the purpose of irrigation and for saving the forest wealth. Otherwise it will not be possible for them to save the forest wealth.

Sir, at page 41, the Finance Minister has said that in recognition of the distinct position that Kannada holds as a Lanuage and as a Culture, they have decided to convene a World Kannada Conference at Mysore in the month of November 1982. Of course, I have to agree that Kannada holds a distinct position as a language and culture. There is no second opinion about this. I am also glad that they are holding conference at Mysore. At the same time I want that this Government should not ignore other minority languages. They also have got distinct position. They also have rich culture. So. the other minority languages should not be neglected by this government. They should provide a lot of amount for the development of minoreiy languages. The people of minority languages have got fundamental and constitutional right to educate their children in their mother-tongue. So, I appeal to the Government not to impose Kannada in schools and colleges against the wishes of the people. It should be optional and not a compulsory language.

Coming to the law and order situation, it is well and good that the Government have sanctioned various schemes, measures for maintaining discipline. We also have no objection to extending some more amenities to the Police. But, whether the Police of our State are worthy of the amenities that are being provided to them by the State Government? In Belgaum district, the Police have proved to be ncompetent and inefficient because they are not detecting the murde

cases, robbery cases, burglary cases. They only try to hush up the cases I only suggest that they should be sent to Bombay or Scotland for training and make them efficient Otherwise, they cannot carry out the detection work very satisfacorily. Our police knows only about lathi charge, opening fire on the innocent people who live peacefully. If they are efficient, we have no objection to excending more amenities to the police.

As regards power projects, I appreciate their stand to have many hydroelectric project in private sector also. The Government have given priority to the removal of the regional imbalance. I want to ask whether they have succeeded in this. What progress they have achieved? what programmes they have undertaken? All these things must be placed before this House.

Regarding the living condition of the people I would ask whether the living condition of people living in the rural parts have been improved. They must look into this once again. It is commendable on the part of the Government that during the sixth plan period they propose to think by roads at least 50% of the Villages, we want to know what progress has been achieved by the Government since the date of the sanction of the sixth plan. For water supply schemes Rs.11.50 croes budget provision has been made. Though the scheme is there, they have not taken up the work of water supply in Khanapur Taluk.

As regards primary education, sufficient school buildings are not constructed for the Marathi Schools, there. In my taluk, sufficient staff is not being employed in Marathi Schools. Though Marathi graduates are available they are not being appointed as School Headmasters in Marathi Schools, I had also appealed to the Government not to be parochial and partial. Last year an assurance was given by the State Government but it was not implemented. They had said that the long pending demands of the farmers' community would be processed by discussions with local leaders. May I know whether discussions were held with the local leaders? Whether the consultation were held with them and whether the long pending demands of the formers have been fulfilled?

Sir, they have stated that they would reduce the unproductive government expenditure. Economy orders were also isued. But what is the result? whether the expendeture has beon curtailed or cut down? That must be looked into. They said that the Government lookes forward to a qualitative change in rural life. I want to know the progress achieved by the Government, The main objective of the Sixth plan is to raise the perpcaita income from Rs.11.85 in 1979-80 to Rs 15.00 by 1980-85; Atleast some progress should have

been achieved. I want to know whether any progress should have been achieved in this matter. Regarding raising the living standard of the people living below poverty lines, I would like to ask the Government whether the livin gstandard of the rural people has been raised. In addition to this, they have stated that they wanted to. improve the economic conditions of the SC ST and other poor people. Just by more saying they cannot improve the economic conditions of those people. Appropriate action must be taken. Each year broad objectives are enumerated by the Minister for Finance. Whether they have been achieved? While criticising this I am not blaming only Sri Veerappa Moily. I am only criticising the failure of the Government as a whole.

It was stated in minor irrigation Government had achieved significant success in negotiations with the World Bank. What is the progress? Whether you have succeeded in getting the loan from the World Bank? Whether you are pursuing the negotiations again? The Government was well aware of the acute shortage of the Veterinary Colleges, and they wanted to increase the in take for the Veterinary Colleges. Whether the Government have taken any action to increase the intake in the Veterinary Colleges of this State? Other wise, if they have not done, how isit possible to extend the veterinary aid to the rural areas? Regarding providing employment to the rural employees it is also proposed to utilise the scheme, to construct the following. It is stated to provide additional class rooms to the rural areas. In respect of Marathi schools, I would like to bring to the kind notice of the Minister that no additional class rooms are being constructed. Additiooal staff is also not being sanctioned. Regarding Mahila Mandals how many Mahila mandals have been sanctioned in malnad areas and neglected areas. That also must be considered. Regarding link roads from every village to inter-village, there are number of inaccessible village in the taluks. They have no roads. Government have not paid any attention uptill now. They should construc. roads leading to all the village. It was proposed to butld foot in bridges in Malnad areas It has not been done. No action has been taken Mode of communication from village to village and need for construction of bridges and roads was highlighted by members. It is a fact. But, all valued suggestion will be examin ed. What it means? whether they have been examined and whether action has been teken ? whether bridges have been construted? what is the progres? That must also be considered. Now, Sir Government places an initial allocation of Rs. 25 lakhs to Karnataka Backward and Minorities Development Corporation? Is it sufficient? I want to ask the Government when 60% of the population is of backward

community, only this much of allocation will not be suffiient for the development of the backward class people. Stipend for BC/SC/STs students was to be increased to Rs. 50. Whether it has been done? Then Sir, for disabled persons at Shimoga they wanted to open some hostels and seed-money was to be given as advance to them. Whether it is in practice?

Sir, Government have to consider now their failures and assurances given by them and they should act according to their assurances and they could just remove the failures by doing good to the people and abiding to their assurance so that they should live up to the expectations of the people at large in the State and with these few words I thank the Chair and I conclude.

ಶ್ರೀ ಹೆಚ್.ಡಿ. ಚೌಡಯ್ಯ (ಕೆರೆಗೂಡು).—ಸನ್ಮಾನ್ಯ ಅಧ್ಯಕ್ಷರೇ ನಮ್ಮ ಮಾನ್ಯ ಅರ್ಥ ಮಂತ್ರಿಗಳು ೧೯೮೨-೮೩ನೇ ಸಾಲಿನ ಆಯವ್ಯಯ ಪತ್ರವನ್ನು ನಾನು ಸಂಪೂರ್ಣವಾಗಿ ಅನುಮೋದಿಸುತ್ತಾ ಕಾಲದ ಮಿತಿಗೆ ಅನುಗುಣವಾಗಿ ಕೇವಲ ಕೆಲವೇ ಇಲಾಖೆಗಳಿಗೆ ಸಂಬಂಧಿಸಿದಂತಹ ಅಂಶಗಳನ್ನು ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛಿಪಡುತ್ತೇನೆ. ಮೊಟ್ಟಮೊದಲನೇಯದಾಗಿ ನೀರಾವಾರಿ ಯೋಜನೆಗಳಿಗೆ ನಮ್ಮ ಅರ್ಥ ಮಂತ್ರಿಗಳು ೧೯೮೨-೮೩ನೇ ಸಾಲಿನ ಆಯವ್ಯಯ ಪತ್ರದಲ್ಲಿ ಹೆಚ್ಚು ಹೆಚ್ಚು ಹಣವನ್ನು ಒದಗಿಸಿಕೊಟ್ಟಿದ್ದಾರೆ. ಇದು ಬಹಳ ಸಂತೋಷಕರವಾದ ವಿಷಯವಾಗಿದೆ. ಆದರಲ್ಲೂ ಕೂಡ ಕಾವೇರಿ ಜಲಾನಯನದ ಯೋಜನೆಗಳಿಗೆ ಸುಮಾರು ೪೦ ಕೋಟಿ ರೂಪಾಯಿಗಳನ್ನು ಒದಗಿಸಿಕೊಟ್ಟಿದ್ದಾರೆ. ಇದೂ ಕೂಡ ಬಹಳ ಸಂತೋಷಕರವಾದ ವಿಷಯ. ಆದರೆ ಕಾವೇರಿ ಜಲಾನಯನ ನಮ್ಮ ಪ್ರದೇಶದಲ್ಲಿ ಬಹಳ ಹಳೆಯದಾದ ಅಣೆಕಟ್ಟು ಎಂದರೆ ಕೃಷ್ಣರಾಜ ಸಾಗರದ ಅಣೆಕಟ್ಟು. ಈ ಅಣೆಕಟ್ಟುಗಳ ದುರಸ್ತಿಗಾಗಿ ಹಣವನ್ನು ಒದಗಿಸಿದ್ದೇವೆ ಎಂದು ಹೇಳಿದ್ದಾರೆ. ಸುಮಾರು ೫೦-೫೫ ವರ್ಷಗಳಿಂದ ಅಣೆಕಟ್ಟುಗಳನ್ನು ಕಟ್ಟಿ ನಾಲೆಗಳನ್ನು ಮಾಡಿದ್ದಾರೆ. ಆದರೆ ವಿಶ್ವೇಶ್ವರಯ್ಯ ಕೆನಲಾಗಿ ಫೀಡರ್ ಚಾನಲ್ ಡಿಸ್ಟ್ರಿಬ್ಯೂಟರ್ಸ್‌ಅನ್ನು ಇವತ್ತು ಆಧುನೀಕರಣ ಗೊಳಿಸಬೇಕೆಂದು ಹೇಳಿ ೧೯೭೭ರಲ್ಲಿ ಒಂದು ಬೃಹತ್ ಚಳುವಳಿಯನ್ನು ರೈತರು ಕೈಗೊಂಡಂತಹ ಸಂದರ್ಭದಲ್ಲಿ ಅಂದಿನ ಮುಖ್ಯಮಂತ್ರಿಗಳಾಗಿದ್ದಂತಹ ಶ್ರೀಮಾನ್ ದೇವರಾಜ ಅರಸ್‌ರವರು ಮತ್ತು ನಮ್ಮ ಪ್ರದೇಶದ ಮುಖಂಡರುಗಳನ್ನು ಬರ ಮಾಡಿಕೊಂಡು ಈ ಬಗ್ಗೆ ಒಂದು ಸಮಾಲೋಚನೆಯನ್ನು ಮಾಡಿ ಒಂದು ಸಮಿತಿಯನ್ನು ಮಾಡಿ ಅವರು ಕೊಟ್ಟಂತಹ ವರದಿಯನ್ನು ಅಮೂಲಾಗ್ರವಾಗಿ ಪರಿಶೀಲನೆ ಮಾಡಿ ೧೯೭೮ರಲ್ಲಿ ಅಂದರೆ ಫೆಬ್ರುವರಿ ತಿಂಗಳಿನಲ್ಲಿ ಒಂದು ಹುಕ್ಕುಂ ಅನ್ನು ಹೊರಡಿಸಿದ್ದಾರೆ. ಮತ್ತು ಇದೇ ಸದನದಲ್ಲಿಯೂ ಕೂಡ ಹಿಂದಿನ ಮುಖ್ಯಮಂತ್ರಿಗಳು ದೀರ್ಘವಾದಂತಹ ಒಂದು ಹೇಳಿಕೆಯನ್ನು ಕೊಟ್ಟರು ಇಷ್ಟೆಲ್ಲಾ ಆದಗ್ಯೂ ಕೂಡ ಸರ್ಕಾರದ ಹುಕ್ಕುಂ ಮತ್ತು ಹಿಂದಿನ ಮುಖ್ಯಮಂತ್ರಿಗಳ ಹೇಳಿಕೆಯ ಪ್ರಕಾರ ಕೃಷ್ಣರಾಜ ಸಾಗರದ ಬಲದಂಡೆ ಮತ್ತು ಎಡದಂಡೆಯ ನಾಲೆಯ ದುರಸ್ತಿ ಕಾರ್ಯಕ್ರಮವನ್ನು ಪ್ರಾರಂಭ ಮಾಡಬೇಕು. ಅದರ ದುರುಸ್ತಿ ಮಾಡಿ ಅದನ್ನು ಆಧುನೀಕರಣ ಮಾಡಬೇಕು ಎಂದ ಹೇಳಿ ಇದಕ್ಕೆ ಹಣವನ್ನು ಒದಗಿಸಿಕೊಟ್ಟು ಈ ಕೆಲಸ ಚೆನ್ನಾಗಿ ನಡೆಯಬೇಕೆಂದು ಹೇಳಿ ಅಂದಿನ ಮುಖ್ಯಮಂತ್ರಿಗಳು ಒಂದೇ ದಿವಸ ಎರಡು ಕಾಮಗಾರಿಗಳಿಗೂ ಅಡಿಗಲ್ಲು ಇಟ್ಟು ಕೆಲಸವನ್ನು ಪ್ರಾರಂಭ ಮಾಡಿದರು. ಆದ್ದರಿಂದ ನಮ್ಮ ಮಾನ್ಯ ಅರ್ಥ ಮಂತ್ರಿಗಳು ಈ ಕಡೆ ಸ್ವಲ್ಪ ಗಮನ ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಈ ಒಂದು ವಿಶ್ವೇಶ್ವರಯ್ಯ ನಾಲೆ ಪ್ರದೇಶದ ರೈತರ ಜೀವನ್ಮರಣದ ಪ್ರಶ್ನೆಯಾಗಿದೆ. ಇತ್ತೀಚೆಗೆ ಏನಾಗಿದೆ ಎಂದರೆ ಕಳೆದ ಮೂರು ವರ್ಷದಲ್ಲಿ ಈ ಕೃಷ್ಣರಾಜ ಸಾಗರದ ನಾಲೆಯ ಆಧುನೀಕರಣದ ಯೋಜನೆಗೆ ಒದಗಿಸಿಕೊಟ್ಟಿರತಕ್ಕಂತಹ ಹಣ ಕೇವಲ ೩೦-೪೦ ಲಕ್ಷ ರೂಪಾಯಿಗಳು ಮಾತ್ರ. ಮತ್ತು ೧೯೮೨-೮೩ನೇ ಸಾಲಿನಲ್ಲಿಯೂ ಕೂಡ ನಮ್ಮ ಮಾನ್ಯ ಅರ್ಥ ಮಂತ್ರಿಗಳಾದ ಶ್ರೀಮಾನ್ ವೀರಪ್ಪಮೊಯ್ಲಿಯವರು ಕೇವಲ ೩೦ ಲಕ್ಷ ರೂಪಾಯಿಗಳನ್ನು ಮಾತ್ರ ಒದಗಿಸಿದ್ದಾರೆ. ಇದರಲ್ಲಿ ಸುಮಾರು ೨೨ ಲಕ್ಷ ರೂಪಾಯಿಗಳು ಸಿಬ್ಬಂದಿಗೆ ಮತ್ತು ಮೆಷನರಿಗೆ ವೆಚ್ಚವಾಗುತ್ತದೆ. ಇನ್ನು ಉಳಿದ ಕೇವಲ ೭-೮ ಲಕ್ಷ ರೂಪಾಯಿಗಳಲ್ಲಿ ಮಾತ್ರ ಕಾಮಗಾರಿ ಕೆಲಸಗಳನ್ನು ಮಾಡುವುದಕ್ಕೆ ಖರ್ಚು ಮಾಡಬೇಕಾಗುತ್ತದೆ. ಆದ್ದರಿಂದ ನಾನು ಈ ಸಂದರ್ಭದಲ್ಲಿ ನಮ್ಮ ಮಾನ್ಯ ಅರ್ಥಮಂತ್ರಿಗಳಲ್ಲಿ ಕೇಳಿ

ಕೊಳ್ಳುತ್ತೇನೆ ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಂದ ಸೂಕ್ತವಾದ ಪುರಾವೆಗಳು ಬರದೇ ಇರಬಹುದು ಆದ್ದರಿಂದ ಮಾನ್ಯ ಮಂತ್ರಿಗಳು ಈಗಲೂ ಕೂಡ ಇದರ ಪುರಾವೆಗಳನ್ನು ತರಿಸಿಕೊಂಡು ನೋಡಿ ಪುನರ್ ಪರಿಶೀಲನೆ ಮಾಡಬೇಕು. ಬೇಕಾದರೆ ಈ ವಿಶ್ವೇಶ್ವರಯ್ಯ ನಾಲೆಗೆ ಸಂಬಂಧಪಟ್ಟ ಸುಮಾರು ೬–೭ ಜನ ಶಾಸಕರನ್ನು ಕರೆಸಿ ಅವರ ಜೊತೆಯಲ್ಲಿ ಸಮಾಲೋಚನೆ ಮಾಡಿದರೆ ಹೆಚ್ಚು ಅಂಶಗಳು ತಮಗೆ ಗೊತ್ತಾಗುತ್ತದೆ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಈ ಒಂದು ಆಧುನೀಕರಣದ ಯೋಜನೆಯ ಪ್ರಥಮ ಘಟ್ಟದ ಅಂದಾಜು ಪ್ರಕಾರ ಸುಮಾರು ೨೦ ಕೋಟಿ ರೂಪಾಯಿಗಳು ಅಥವಾ ೩೦ ಕೋಟಿ ರೂಪಾಯಿಗಳು ಆಗಬಹುದು. ಈ ಮೂರು ವರ್ಷಗಳಿಂದ ಈ ಒಂದು ಆಧುನೀಕರಣಕ್ಕೆ ಹಣವನ್ನು ಒದಗಿಸಿಕೊಟ್ಟಿದ್ದರೆ ಬಹಳ ಚನ್ನಾಗಿರುತ್ತಿತ್ತು ಎನ್ನುವ ಮಾತನ್ನು ನಾನು ಮಾನ್ಯ ಅರ್ಥಮಂತ್ರಿಗಳಿಗೆ ಹೇಳುತ್ತೇನೆ. ಬಹುಶ: ಅವರ ಗಮನಕ್ಕೆ ಈ ಕೃಷ್ಣರಾಜ ಸಾಗರದ ಅಣೆಕಟ್ಟೆಗೆ ಸಂಬಂಧಿಸಿದಂತಹ ಪುರಾವೆಗಳು ಮತ್ತು ಹಿಂದಿನ ಅಂಕಿಅಂಶಗಳು ಗೊತ್ತಾಗಿಲ್ಲವೆಂದು ಕಾಣುತ್ತದೆ. ಆಯವ್ಯಯ ಪತ್ರದ ಮೇಲೆ ನಡೆಯುವ ಚರ್ಚೆಗೆ ಉತ್ತರ ಕೊಡುವುದಕ್ಕಿಂತ ಮುಂಚೆ ತಾವು ದಯಮಾಡಿ ಈ ಭಾಗದ ಶಾಸಕರನ್ನು ಕರೆದು ೧೯೮೩ನೇ ಫೆಬ್ರವರಿ ತಿಂಗಳಿನಲ್ಲಿ ಹೊರಡಿಸಿದಂತಹ ಹುಕ್ಕುಂ ಮತ್ತು ಮಾನ್ಯ ಮುಖ್ಯಮಂತ್ರಿಗಳ ಹೇಳಿಕೆಯನ್ನು ಮಾನ್ಯ ಅರ್ಥ ಮಂತ್ರಿಗಳು ಪುನರ್ ಪರಿಶೀಲನೆ ಮಾಡಿ ೧೯೮೩–೮೪ನೇ ಸಾಲಿನ ಆಯವ್ಯಯ ಪತ್ರದಲ್ಲಿ ಸುಮಾರು ೨ ಕೋಟಿ ರೂಪಾಯಿಗಳನ್ನು ಒದಗಿಸಿಕೊಡಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಸಣ್ಣ ನೀರಾವರಿ ವಿಷಯದಲ್ಲಿ ಹೇಳುವುದಾದರೆ, ತಾವು ಒದಗಿಸಿರತಕ್ಕಂಥ Detailed estimates of Irrigation, Electricity and Public works 1982-83ನಲ್ಲಿ ಕೆಲವಾರು ಕಾಮಗಾರಿಗಳನ್ನು ಅಡಕ ಮಾಡಿದ್ದೀರಿ. ಇದರಲ್ಲಿ ತಾಲ್ಲೂಕು ತಾಲ್ಲೂಕಿಗೆ ತಾರತಮ್ಯವಾಗಿದೆಯೆಂದು ವಿಷಾದದಿಂದ ಹೇಳಬೇಕಾಗಿದೆ. ನನಗೆ ಗೊತ್ತಿರುವ ಮಟ್ಟಿಗೆ, ಕಳೆದ ತಿಂಗಳು ಮಾನ್ಯ ಅರ್ಥ ಮಂತ್ರಿಗಳು ಭೇಂಬರಿನಲ್ಲಿ ಒಂದು ಸಭೆ ನಡೆಸಿ ಚೀಫ್ ಇಂಜನಿಯರನ್ನು ಕರೆಸಿ, ಎಲ್ಲೆಲ್ಲಿ ಸಣ್ಣ ನೀರಾವರಿಯಲ್ಲಿ ವರ್ಲ್ಡ್ ಬ್ಯಾಂಕ್ ಪ್ರೋಗ್ರಾಂ ಪ್ರಕಾರ ಕಾಮಗಾರಿಗಳಿವೆ ಅಂಥಾ ಕಡೆ ಒಂದೆರಡು ಕೆಲಸಗಳನ್ನು ತೆಗೆದು ಕೊಳ್ಳಬೇಕು ಎಂದು ಆದೇಶ ಕೊಟ್ಟರು. ನಾನು ಹೇಳತಕ್ಕ ಕಾಮಗಾರಿ ವಿಷಯದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಮಿನಿಟ್ ಕಳಿಸಿ, ಮುಖ್ಯ ಮಂತ್ರಿಗಳ ಆದೇಶದಂತೆ ಚೀಫ್ ಇಂಜಿನಿಯರ್ ಬಜೆಟ್‌ಗೆ ಪ್ರಪೋಸಲ್ ಕಳಿಸಿದರು, ಬಡ್ಜೆಟ್‌ನಲ್ಲಿ ಅದನ್ನು ಸೇರಿಸಿದಿರಿ, ಆದರೆ ಗ್ರ್ಯಾಂಟ್ ಮಾಡಿಲ್ಲ, ಇದಕ್ಕೆ ೮ ಲಕ್ಷ ೨೦ ಸಾವಿರ ಮಾತ್ರ ಆಗುತ್ತದೆ. ಅದರಲ್ಲಿ ಈ ವರ್ಷಕ್ಕೆ ಕೇವಲ ಎರಡು, ಮೂರು ಲಕ್ಷ ರೂಪಾಯಿಗಳನ್ನು ಒದಗಿಸಿದ್ದರೆ ಸಾಕಾಗಿತ್ತು. ಆದರೆ ಅದನ್ನು ಏಕೆ ಕೈಬಿಟ್ಟಿದ್ದೀರೊ ಗೊತ್ತಿಲ್ಲ. ನಾನು ಇದರ ಪೇಜನ್ನೂ ಕೂಡ ಹೇಳುವುದಕ್ಕೆ ಇಷ್ಟಪಡುತ್ತೇನೆ. ಪೇಜ್ ನಂಬರ್ ೨೨೬ ರಲ್ಲಿದೆ. "Further extension of Gangavathi Feeder channel across Lokapavani river to benefit tanks in Dudda Basaralu Hobli in Mandya Taluk. ಇದರ ಅಂದಾಜು ೮ ಲಕ್ಷ ೨೦ ಸಾವಿರ ರೂಪಾಯಿಗಳು. ಆದರೆ ಗ್ರ್ಯಾಂಟ್ ಇರತಕ್ಕ ಕಾಲಮ್ಮಿನಲ್ಲಿ ಬ್ಲ್ಯಾಂಕ್ ಬಿಟ್ಟಿದ್ದೀರಿ. ಮಂಡ್ಯ ತಾಲ್ಲೂಕಿನಲ್ಲಿರತಕ್ಕಂಥ ಎರಡು ಕ್ಷೇತ್ರಗಳಲ್ಲಿರತಕ್ಕಂಥ ಈ ಕಾಮಗಾರಿಗೆ ಸಾಕಷ್ಟು ತಾವು ಗ್ರ್ಯಾಂಟ್ ಕೊಟ್ಟು ಈ ವರ್ಷ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಸಹಾಯ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಸನ್ಮಾನ್ಯ ಅರ್ಥಮಂತ್ರಿಗಳಲ್ಲಿ ಪ್ರಾರ್ಥಿಸುತ್ತೇನೆ. ಅದೇರೀತಿ ಪೇಜ್ ೨೩೦ ಮತ್ತು ೨೪೫ ರಲ್ಲಿ ೧೯೮೧–೮೨ರಲ್ಲಿ ಬಡ್ಜೆಟ್‌ನಲ್ಲಿ ಕಾಮಗಾರಿಗಳು ಸೇರಿತ್ತು, ಮೂರನೆ ಒಂದು ಭಾಗ ಹಣವನ್ನು ಪ್ರೊವೈಡ್ ಮಾಡಿತ್ತು, ಆದರೆ ಈ ವರ್ಷ ಅದನ್ನು ಕೈಬಿಟ್ಟಿದ್ದೀರಿ, ಇದರ ಮರ್ಮ ನನಗೆ ಗೊತ್ತಾಗುತ್ತಾ ಇಲ್ಲ. ಇದು ಬಹುಶಃ ಮಾನ್ಯ ಅರ್ಥ ಮಂತ್ರಿಗಳ ಗಮನಕ್ಕೆ ಬಂತೋ ಇಲ್ಲವೋ ಗೊತ್ತಿಲ್ಲ. ಹೋದವರ್ಷ ಈ ಮೂರು ಕಾಮಗಾರಿಗಳನ್ನು ಸೇರಿಸಿ, ಹಣವನ್ನು ಅವಕಾಶ ಮಾಡಿ ಈ ವರ್ಷ ಅದನ್ನು ಕೈಬಿಟ್ಟಿದ್ದಾರೆ. ಆ ಒಂದು ಕಾಲಂನಲ್ಲಿ ನಿಲ್ ಇದೆ. ಪೇಜ್ ನಂಬರ್ ೨೩೦ರಲ್ಲಿ ಎರಡು ಕಾಮಗಾರಿಗಳು ಪೇಜ್ ನಂಬರ್ ೨೪೫ ರಲ್ಲಿ ಒಂದು ಕಾಮಗಾರಿ ಇದೆ, ದಯವಿಟ್ಟು ಇದನ್ನು ಪುನರ್ವಿಮರ್ಶೆ ಮಾಡಬೇಕು ಎಂದು ಮಾನ್ಯ ಅರ್ಥಮಂತ್ರಿಗಳಲ್ಲಿ ಕಳಕಳಿಯಿಂದ ಪ್ರಾರ್ಥಿಸುತ್ತೇನೆ.

ಇನ್ನು ಕೃಷಿಗೆ ಸಂಬಂಧಪಟ್ಟಹಾಗೆ ಹೇಳುವುದಾದರೆ, ಕೃಷಿ ರಾಜ್ಯದ ಅರ್ಥ ವ್ಯವಸ್ಥೆಯ ಬೆನ್ನೆಲುಬು ಎಂದು ಮಾನ್ಯ ಅರ್ಥ ಮಂತ್ರಿಗಳು ಹೇಳಿದ್ದಾರೆ. ಅದರ ಬಗ್ಗೆ ಸುದೀರ್ಘವಾಗಿ ಚರ್ಚೆ ಮಾಡುವುದಕ್ಕೆ ನನಗೆ ಆಸೆ ಇದ್ದಾಗ್ಯೂ ಕೂಡ ಸಮಯವಿಲ್ಲ. ಕಳೆದ ತಿಂಗಳು ೨೬ನೇ ತಾರೀಖು

ಮೈಸೂರಿನಲ್ಲಿ ನಡೆದಂಥ ಶಾಸಕರ ಸಭೆಯಲ್ಲಿ ಎಲ್ಲರೂ ಹೇಳಿದೆವು. ಹೊಸ ಲೆವಿ ಪದ್ಧತಿ ಸರಿಯಿಲ್ಲ, ಕಳೆದ ವರ್ಷ ಇದ್ದ ಲೆವಿ ಪದ್ಧತಿಯನ್ನು ಮುಂದುವರಸಬೇಕು ಎಂದು ಸಲಹೆ ಕೊಟ್ಟೆವು. ಆದಾಗ್ಯೂ ಕೂಡ ಇನ್ನೂ ಹೊಸದಾರಿ ಲೆವಿ ಪದ್ಧತಿ ಏನು ಇದೆಯೋ ಅದನ್ನು ಮುಂದುವರಿಸಿಕೊಂಡು ಬಂದರೆ ಇದು ನಿಜವಾಗಿಯೂ ಮಾರಕವಾಗಿ ಪರಿಣಮಿಸುತ್ತದೆ. ಇವತ್ತಿನ ದಿವಸ ಅಂತರ ತಾಲ್ಲೂಕು, ಹಾಗೂ ಅಂತರ ಜಿಲ್ಲಾ ಸಾಗಾಣಿಕೆ ಏನಿದೆಯೋ ಅದನ್ನು ಪ್ರತಿಬಂಧಕ ಮಾಡಿರುವುದನ್ನು ತೆಗೆಯಬೇಕು. ಇವತ್ತು ಕೊಳ್ಳತಕ್ಕ ಜನ ಇಲ್ಲ. ಸುಗ್ಗಿ ಕಳೆದು ೬ ತಿಂಗಳಾಗಿದೆ. ಮಾನ್ಯ ಆಹಾರ ಖಾತೆಯ ಸಚಿವರು ಜೊತೆಯಲ್ಲಿ ಎರಡು ಸಾರಿ ಚರ್ಚೆ ಮಾಡಿದ್ದೇವೆ. ಅಂತರ ಜಿಲ್ಲಾ ಹಾಗೂ ಅಂತರ ತಾಲ್ಲೂಕು ಸಾಗಾಣಿಕೆ ಪ್ರತಿಬಂಧಕ ಏನಿದೆಯೋ ಅದನ್ನು ತೆಗೆಯಬೇಕು, ಈ ಬಗ್ಗೆ ಸದನದಲ್ಲಿ ಸರ್ಕಾರ ಘೋಷಿಸಬೇಕು ಎಂದು ನಾನು ಸರ್ಕಾರವನ್ನು ಪ್ರಾರ್ಥಿಸುತ್ತೇನೆ. ಮತ್ತು ಕೃಷಿಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಮಂಡ್ಯಕ್ಕೆ ಕೇವಲ ೫ ಮೈಲಿಗಳ ದೂರದಲ್ಲಿ ವಿಶ್ವೇಶ್ವರಯ್ಯ ಕೆನಾಲ್ ಫಾರಂ ಇದೆ. ಅಲ್ಲಿ ಈ ವರ್ಷ ಗೋಲ್ಡನ್ ಜೂಬಲಿ ಸೆಲೆಬರೇಷನ್‌ನ್ನು ಆಚರಿಸಲಿದ್ದೇವೆ. ಅದಕ್ಕೆ ೫೦ ವರ್ಷಗಳಾಯಿತು. ಕಳೆದ ಎರಡು ವರ್ಷಗಳಲ್ಲಿ ಸರ್ಕಾರದವರು ಈ ರಾಜ್ಯದಲ್ಲಿ ಹೊಸ ವ್ಯವಸಾಯ ಕಾಲೇಜುಗಳನ್ನು ಪ್ರಾರಂಭ ಮಾಡಬೇಕು ಎಂದು ಹೇಳಿದಾಗಲೂ ಕೂಡ ನಾನು ಹೇಳಿದೆ. ವ್ಯವಸಾಯ ಕಾಲೇಜುಗಳನ್ನು ಕುಶಾಲ ನಗರ ಮತ್ತು ಶಿವಮೊಗ್ಗ ಹಾಗೂ ಬೇರೆ ಕಡೆ ಪ್ರಾರಂಭ ಮಾಡುವುದಕ್ಕೆ ನಮ್ಮ ಅಭ್ಯಂತರವಿಲ್ಲ, ಅಡ್ಡಿಯಿಲ್ಲ. ಆದರೆ ಎಲ್ಲಾ ಅಂಶಗಳನ್ನು ನೀವು ಗಣನೆಗೆ ತೆಗೆದುಕೊಂಡಿದ್ದೇ ಆದರೆ ವಿಶ್ವೇಶ್ವರಯ್ಯ ನಾಲಾ ಫಾರಂನಲ್ಲಿ 'ಏನು' ಒಂದು ವ್ಯವಸ್ಥೆ ಇದೆ ಅದು, ವ್ಯವಸಾಯ ಕಾಲೇಜನ್ನು ಪ್ರಾರಂಭ ಮಾಡ ಬೇಕಾದರೆ ಏನೇನು ಪೂರ್ವ ಸಿದ್ಧತೆಗಳು ಬೇಕೋ ಆ ಎಲ್ಲಾ ಸಿದ್ಧತೆಗಳು ಅಲ್ಲಿವೆ ಎಂದು ಹೇಳಿದ್ದೇನೆ, ಸರ್ಕಾರ ಹೆಚ್ಚು ಹಣವನ್ನು ಖರ್ಚುಮಾಡಬೇಕಾದಲ್ಲಿ ವಿಶ್ವೇಶ್ವರಯ್ಯ ಕೆನಾಲ್ ಫಾರಂನಲ್ಲಿ ವ್ಯವಸಾಯ ಕಾಲೇಜನ್ನು ಪ್ರಾರಂಭ ಮಾಡಬೇಕು, ಮಂಜೂರಾತಿ ಕೊಡಬೇಕು ಎಂದು ನಾನು ಹೇಳಿದಾಗ ಮುಂದಿನ ವರ್ಷ ಕೊಡುತ್ತೇವೆಂದು ಹೇಳಿದರು. ಕಳೆದ ತಿಂಗಳು ಮಾನ್ಯ ಮಂತ್ರಿಗಳು ಮಂಡ್ಯಕ್ಕೆ ಬಂದು ಬೃಹತ್ ಬಹಿರಂಗ ಸಭೆಯಲ್ಲಿ ಈ ವರ್ಷ ಪ್ರಾರಂಭ ಮಾಡುತ್ತೇವೆಂದು ಆಶ್ವಾಸನೆ ಕೊಟ್ಟರು. ಏಪ್ರಿಲ್ ೧೫ನೇ ತಾರೀಖು ಇದೇ ವಿಶ್ವೇಶ್ವರಯ ಕೆನಾಲ್ ಫಾರಂನಲ್ಲಿ ಗೋಲ್ಡನ್ ಜೂಬಲಿ ಸೆಲೆಬರೇಷನ್‌ಗೆ ಸನ್ಮಾನ್ಯ ಮುಖ್ಯ ಮಂತ್ರಿಗಳನ್ನು ಆಹ್ವಾನಿಸಿದ್ದೇವೆ, ಅವರೂ ಒಪ್ಪಿದ್ದಾರೆ, ಈ ವರ್ಷವಾದರೂ ಕೃಷಿ ಕಾಲೇಜನ್ನು ಪ್ರಾರಂಭ ಮಾಡುವುದಕ್ಕೆ ಸರ್ಕಾರ ಮಂಜೂರಾತಿಯನ್ನು ಕೊಡಬೇಕು ಎಂದು ನಾನು ಈ ಸಂದರ್ಭದಲ್ಲಿ ಒತ್ತಾಯ ಮಾಡುತ್ತೇನೆ.

ಇನ್ನು ವ್ಯವಸಾಯದ ಬಗ್ಗೆ ಹೇಳುವುದಾದರೆ, ಮಾನ್ಯ ಅಧ್ಯಕ್ಷರೂ ಕೂಡ ವ್ಯವಸಾಯಗಾರರು, ಅವರಿಗೂ ಕೂಡ ಗೊತ್ತಿದೆ. ಈ ಸದನದಲ್ಲಿ ಶೇಕಡ ೮೦ ರಷ್ಟು ಮಾನ್ಯ ಸದಸ್ಯರುಗಳು ವ್ಯವಸಾಯಗಾರರಾಗಿದ್ದಾರೆ. ವ್ಯವಸಾಯ ಬರಬರುತ್ತಾ ಲಾಭದಾಯಕವಲ್ಲದ ವೃತ್ತಿಯಾಗಿ ಪರಿಣಮಿಸುತ್ತಾ ಇದೆ. ಈ ಸುದರ್ಭದಲ್ಲಿ ನಾನು ಸನ್‌ಮಾನ್ಯ ಮುಖ್ಯ ಮಂತ್ರಿಗಳಿಗೆ ಒಂದು ಸಲಹೆಯನ್ನು ಕೊಡುತ್ತೇ. ಇವತ್ತು ರೈತನ ಉತ್ಪನ್ನಗಳೇನಿವೆ ಉತ್ಪನ್ನಗಳಿಗೆ ಸರಿಯಾದ ಧಾರಣೆವಾಸಿ ಸಿಗದೇ ಇರುವುದರಿಂದ ರೈತ ಉಪಯೋಗಿಸ ತಕ್ಕಂಥ ವ್ಯವಸಾಯೋಪಕರಣಗಳಾಗಲಿ, ರಾಸಾಯನಿಕ ಗೊಬ್ಬರವಾಗಲಿ, ಯಂತ್ರೋಪಕಣಗಳಾಗಲಿ. ಔಷಧಿಗಳಾಗಲಿ ಇವುಗಳ ಮೇಲೆ ಸರ್ಕಾರ ವಿಧಿಸಿರತಕ್ಕ ಯಾವುದೇ ತೆರಿಗೆಯನ್ನು ಪೂರ್ಣವಾಗಿ ಮನ್ನಾಮಾಡಬೇಕು ಎಂದು ನಾನು ಒತ್ತಾಯ ಪೂರ್ವಕವಾಗಿ ಸರ್ಕಾರಕ್ಕೆ ಕಳಕಳಿಯಿಂದ ಕೇಳುವುದಕ್ಕೆ ಇಷ್ಟ ಪಡುತ್ತೇನೆ. ಅಭಿವೃದ್ಧಿ ತೆರಿಗೆಯನ್ನು ಯಾವರೀತಿ ಸರ್ಕಾರ ಮನ್ನಾ ಮಡಿತೋ ಅದೇರೀತಿ ನೀರಿನ ತೆರಿಗೆಯನ್ನು (ವಾಟರ್ ರೇಟ್) ಮನ್ನಾ ಮಾಡುವುದು ಸೂಕ್ತ. ಲೋಕಸಭಾಧ್ಯಕ್ಷರಾದ ಶ್ರೀ ಮಾನ್ ಬಲರಾಂ ಜಾಖರ್‌ರವರು ೨ ವರ್ಷಗಳ ಹಿಂದೆ ಮೈಸೂರಿನಲ್ಲಿ ಕೃಷಿಕರ ಸಮ್ಮೇಳನದಲ್ಲಿ ಮಾತನಾಡುತ್ತಾ, ನೀರಿನ ತೆರಿಗೆಯನ್ನು ಕೊಡಬೇಕಾದವರು ರೈತರಲ್ಲ, ಸಾರ್ವಜನಿಕರು ಕೊಡಬೇಕಾದುದು ಎಂದು ಒತ್ತಿ ಒತ್ತಿ ಹೇಳಿದ್ದಾರೆ. ಸನ್ಮಾನ್ಯ ಮುಖ್ಯ ಮಂತ್ರಿಗಳು ಶಿವಮೊಗ್ಗದಲ್ಲಿ ಈ ಬಗ್ಗೆ ಚರ್ಚೆ ಮಾಡಿದಾಗ ಕೂಡ ಹೇಳಿದರು, ನೀರಿನ ತೆರಿಗೆ ಒತ್ತಾಯ ಮಾಡುವುದು ಸರಿಯಲ್ಲ ಎಂದು. ನಾನು ಸರ್ಕಾರಕ್ಕೆ ಕಳಕಳಿಯಿಂದ ಕೇಳಿಕೊಳ್ಳುವುದೇನೆಂದರೆ, ಅಭಿವೃದ್ಧಿ ತೆರಿಗೆಯನ್ನು ಮನ್ನಾ ಮಾಡಿ ಒಳ್ಳೆಯ ಯಶಸ್ಸು ಪಡೆದಿದ್ದೀರಿ, ಅದೇರೀತಿ ನೀರಿನ ತೆರಿಗೆಯನ್ನು ಮನ್ನಾ ಮಾಡಿ ಯಶಸ್ಸನ್ನು ಪಡೆಯಬೇಕು ಎಂದು ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ.

ಇನ್ನು ಗ್ರಾಮಂದ ಜನತೆಗೆ ಕುಡಿಯುವ ನೀರಿನ ಸೌಲಭ್ಯವನ್ನು ಒದಗಿಸುವ ಬಗ್ಗೆ ಹೇಳುತ್ತೇನೆ. ಮಾನ್ಯ ಅರ್ಥ ಮಂತ್ರಿಗಳು, ತರುಣರು ಮತ್ತು ಉತ್ಸಾಹಿಗಳು. ಅವರ ವಿಷಯದಲ್ಲಿ ನನಗೆ ಗೌರವಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಈಗ ಕೆ. ಆರ್. ಎಸ್. ನಾಲೆಯನ್ನು ಮಾಡರ್ನೈಸೇಷನ್ ಮಾಡಬೇಕು ಎಂದು ಹೇಳಿದ್ದೀರಿ, ಕಾವೇರಿ ಬೇಸಿನ್‌ಗೆ ಹಣ ಕೊಡಬೇಕು ಎಂದು ಹೇಳಿದಿರಿ, ಆಮೇಲೆ ಅಲ್ಲಿ ನೀವು ಕಾಮಗಾರಿಗಳನ್ನು ಹೆಸರಿಸಿದ್ದೀರಿ, ಮೈನರ್ ಇರಿಗೇಷನ್ ಪ್ರಾಜೆಕ್ಟ್ಸ್‌ಗೆ ಗ್ರಾಂಟ್ ಕೊಟ್ಟಿಲ್ಲ ಎಂದು ಹೇಳಿದಿರಿ, ಈಗ ತೆರಿಗೆ ಏನೂ ಹಾಕಬೇಡಿ ಎಂದು ಹೇಳಿದಿರಿ. ತೆರಿಗೆ ಹಾಕದೆ ಕಾಮಗಾರಿಗಳನ್ನು ಮಾಡುವುದಕ್ಕೆ ಸಾಧ್ಯವೆ, ಇಂಥಾದ್ದು ಬೇಕು ಎಂದು ಯಾವುದಾದರೂ ಐಟಂ ಹೇಳಿದ್ದರೆ ನೆಮ್ಮದಿ ಇಗುತ್ತಿತ್ತು.

೫-೩೦ ಪಿ. ಎಂ.

ಶ್ರೀ ಎಂ. ವೀರಪ್ಪಮೊಯ್ಲಿ.—ವಾಟರ್ ರೇಟ್ ಹಾಕುವುದು, ಬೆಟರ್‌ಮೆಂಟ್ ಲೆವಿ ಹಾಕುವುದು ಬೇಡವೆಂದು ಹೇಳಿದರೆ ಇನ್ನು ಯಾವ ಐಟಂನ ಮೇಲೆ ಟ್ಯಾಕ್ಸ್ ಹಾಕಬೇಕೆಂದು ತಾವು ಸಲಹೆ ಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ಹೆಚ್. ಡಿ. ಚೌಡಯ್ಯ.—ಈಗ ಒಟ್ಟು ನಿಮಗೆ ನೀರಿನ ತೆರಿಗೆಯಿಂದ ಬಹುಶಃ ೫ ಕೋಟಿ ಬರುತ್ತಿರಬಹುದು. ಸುಸ್ತಿ ಬಾಕಿ ಏನಿದೆ ಅದು ೧೫-೨೦ ಕೋಟಿ ಇದೆ ಆದರೆ ನಿಮ್ಮ ಸಿಬ್ಬಂದಿ ವೆಚ್ಚವೇನಿದೆ ಅದು ಸ್ವಲ್ಪ ಹೆಚ್ಚು ಕಡಿಮೆ ಪ್ರತಿ ವರ್ಷವೂ ಜಾಸ್ತಿಯಾಗುತ್ತಲೇ ಹೋಗುತ್ತಿದೆ, ವಸೂಲಿ ಮಾಡುತ್ತಿರುವುದಕ್ಕಿಂತ ಅವರ ಸಂಬಳಕ್ಕೆ ಅಷ್ಟೂ ಖರ್ಚು ಆಗುತ್ತಿದೆ ಎಂದು ಮೊದಲೇ ಹೇಳಿದ್ದೇನೆ.

ಶ್ರೀ ಎಂ. ವೀರಪ್ಪ ಮೊಯ್ಲಿ.— ಇದಕ್ಕೆ ಕಾರಣವೇನೆಂದರೆ ವಸೂಲಿ ಆಗುತ್ತಲೇ ಇಲ್ಲ, ತೆರಿಗೆ ವಸೂಲಿ ಆಗದೇ ಇರುವುದರಿಂದ ಖರ್ಚು ಹೆಚ್ಚಾಗುತ್ತಿದೆ.

ಶ್ರೀ ಎಚ್. ಡಿ. ಚೌಡಯ್ಯ.—ಸೊಸೈಟಿಯಿಂದ ತೆಗೆದುಕೊಂಡಂಥ ಸಾಲವನ್ನು ರೀ ಪೇಮೆಂಟ್ ಮಾಡುತ್ತಿಲ್ಲ. ಏತಕ್ಕೆಂದರೆ ಅವರಿಗೆ ರಿ ಪೇಮೆಂಟ್ ಕ್ಯಾಪಾಸಿಟಿ ಇಲ್ಲ. ಸರ್ಕಾರಕ್ಕೆ ಇವತ್ತಿನ ದಿವಸ ಅಪ್ರತ್ಯಕ್ಷವಾಗಿ ಎಕ್ಸೈಜ್ ರೂಪದಲ್ಲಿ, ಸೇಲ್ಸ್ ಟ್ಯಾಕ್ಸ್ ರೂಪದಲ್ಲಿ, ಪರ್ಚೇಜ್ ಟ್ಯಾಕ್ಸ್ ರೂಪದಲ್ಲಿ ಹಣ ಸರ್ಕಾರಕ್ಕೆ ಬರುತ್ತಿದೆ. ಕಬ್ಬು ಏನು ಬೆಳೆಯುತ್ತಿದ್ದೇವೆ, ಆದರಿಂದ ಸರ್ಕಾರಕ್ಕೆ ಎಷ್ಟು ನೇರವಾಗಿ ಮತ್ತು ಅಪ್ರತ್ಯಕ್ಷವಾಗಿ ತೆರಿಗೆಗಳು ಬರುತ್ತಿವೆ, ಎಂದು ಹೇಳಿದರೆ ವಾಟರ್ ರೇಟ್‌ನಿಂದಲೇ ಸರ್ಕಾರಕ್ಕೆ ೮೦ ಲಕ್ಷ ರೂ. ಗಳಿಗೂ ಮೇಲ್ಪಟ್ಟು ನಮ್ಮ ವಿಶ್ವೇಶ್ವರಯ್ಯಾ ನಾಲಾ ರೈತರಿಂದ ಬರುತ್ತಿದೆ ಅದರಲ್ಲಿ ಸ್ವಲ್ಪ ಖರ್ಚು ಮಾಡಿ ಎಂದು ಹೇಳುತ್ತಿದ್ದೇವೆ.

ಇನ್ನು ಎಲ್. ಆರ್. ಡಬ್ಲ್ಯೂ. ಎಸ್. ಮತ್ತು ಎಸ್. ಆರ್. ಡಬ್ಲ್ಯೂ. ಎಸ್. ಎಲ್ಲಾ ಸ್ಕೀಂಗಳನ್ನೂ ಮಾನ್ಯ ಶ್ರೀ ಬೇಗಾನೆ ರಾಮಯ್ಯನವರು ಬಹಳ ಚೆನ್ನಾಗಿ ಕ್ರೋಢೀಕರಿಸಿ ಕಳೆದ ಅಕ್ಟೋಬರ್ ತಿಂಗಳಿನಲ್ಲಿ ಒಂದು ಹುಕುಂನ್ನು ಹೊರಡಿಸಿದರು. ಸುಮಾರು ೫ ತಿಂಗಳು ಆಯಿತು ಈ ಆಜ್ಞೆ ಬಂತು ಆದರೆ ಮಾರ್ಚ್ ೨ ರಂದು ನಾವು ಮಂಡ್ಯಾ ಜಿಲ್ಲಾ ಸಮಿತಿಯಲ್ಲಿ ಧೀರ್ಘವಾಗಿ ನಡೆದು ಸಂಬಂಧಪಟ್ಟ ಅಧಿಕಾರಿಗಳ ಜೊತೆಯಲ್ಲಿ ಸಹ ಚರ್ಚೆ ಮಾಡಿದಾಗ ಆಗ ಅವರು ಇನ್ನೂ ಅಂದಾಜನ್ನು ತಯಾರು ಮಾಡುತ್ತಿದ್ದೇವೆಂದು ಹೇಳಿದರು. ಇವರು ಇನ್ನೂ ಅಂದಾಜನ್ನು ತಯಾರು ಮಾಡುತ್ತಿದ್ದರೆ, ಕಾರ್ಯಗತ ಮಾಡುವುದು ಯಾವಾಗ ? ಅದನ್ನು ೧೯೮೨-೮೩ರಲ್ಲಿ ಕಾರ್ಯಗತ ಮಾಡಬೇಕಾಗುತ್ತದೆ, ಅದಕ್ಕೆ ಕಾರಣಗಳೇನು ಹೇಳುತ್ತಾರೆ ಎಂದರೆ ನಮಗೆ ಸಾಕಷ್ಟು ಸಿಬ್ಬಂದಿ ಇಲ್ಲ, ಹಾಗೆ, ಹೀಗೆ ಎಂದು ಎಲ್ಲಾ ಹೇಳಿ ಬಿಡುತ್ತಾರೆ. ಇದು ಒಂದು ಕಡೆಯಾದರೆ ಇನ್ನು ಬೋರ್‌ವೆಲ್ ವಿಷಯವನ್ನು ಹೇಳುವುದಾದರೆ, ತಾವು ಏನು ೧೯ ಲಕ್ಷ ರೂ. ಗಳನ್ನು ಪ್ರೊವೈಡ್ ಮಾಡಿದ್ದೇವೆಂದು ಹೇಳಿದ್ದೀರಿ; ಮತ್ತೆ ಅದಕ್ಕಾಗಿ ೪೪ ಘಟಕಗಳನ್ನಾಗಿ ಮಾಡಿದ್ದೇವೆ, ಜಿಲ್ಲಾಧಿಕಾರಿಗಳಿಗೂ ಸಹ ವಿಶೇಷವಾದ ಅಧಿಕಾರವನ್ನು ಕೊಟ್ಟಿದ್ದೇವೆಂದಲ್ಲಾ ಹೇಳಿದ್ದೀರಿ. ಅದೆಲ್ಲಾ ನಿಜ. ಆದರೆ ನಮ್ಮ ಅನುಭವದಲ್ಲಿ ಹೇಳುವುದಾದರೆ ನೀವು ಒದಗಿಸಿರುವ ಹಣ ಕಳೆದ ೮೧-೮೨ನೇ ಇಸ್ವೀಯ ೬-೭ ತಿಂಗಳಿಗೇ ಮುಗಿದು ಹೋಯಿತು. ನಾನು ಇವರ ಬಗ್ಗೆ ಫೋನ್ ಮಾಡಿ ಹೇಳಿದ್ದೇನೆ, ಕಾಗದ ಬರೆದು ತಿಳಿಸಿದ್ದೇನೆ, ಖುದ್ದು ಮಾತನಾಡಿ ಹೇಳಿದಾಗ ನಿಮ್ಮ ಅಧಿಕಾರಿಗಳು ಹಣವಿಲ್ಲ, ಹಣವಿಲ್ಲವೆಂದು ಹೇಳುತ್ತಿದ್ದಾರೆ. ಸ್ಪೇರ್

ಪಾರ್ಟ್ಸ್‌ಗಳಿಗೆ ಹಣವಿಲ್ಲ, ಸಣ್ಣಪುಟ್ಟ ಸಾಮಾನುಗಳನ್ನು ಕೊಂಡುಕೊಳ್ಳುವುದಕ್ಕೂ ಹಣವಿಲ್ಲವೆಂದು ಹೇಳುತ್ತಿದ್ದಾರೆ. ಆದುದರಿಂದ ಇವತ್ತಿನ ದಿವಸ ಶೇಕಡ ೫೦ ರಿಂದ ೭೦ ಭಾಗದವರೆಗೆ ಬೋರ್‌ವೆಲ್‌ಗಳು ಕೆಟ್ಟು ಹೋಗಿವೆ. ಅವುಗಳಿಂದ ಇವತ್ತಿನ ದಿವಸ ಏನೂ ಪ್ರಯೋಜನವಾಗುತ್ತಿಲ್ಲ. ಆದುದರಿಂದ ಕೂಡಲೇ ಇದರ ಕಡೆಗೆ ಗಮನ ನೀಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನೊಂದು ವಿಷಯ ಸ್ವಾಮಿ, ಪಿ. ಎಚ್. ಇ. ಗೆ ಸಂಬಂಧಪಟ್ಟ ಚೀಫ್ ಇಂಜಿನೀಯರ್‌ರವರ ಕೇಂದ್ರ ಕಚೇರಿಯನ್ನು ಧಾರವಾಡದಲ್ಲಿ ತೆರೆದಿದ್ದೀರಿ ಏತಕ್ಕೆ ಸ್ವಾಮಿ ? ಎಲ್ಲಾ ರಾಜ್ಯಮಟ್ಟದ ಆಫೀಸರ್‌ಗಳೂ ಎಲ್ಲಾ ಬೆಂಗಳೂರು ನಗರದಲ್ಲಿ ಇರುವಾಗ ಅದೊಂದನ್ನು ಮಾತ್ರ ಏತಕ್ಕೆ ಅಲ್ಲಿ ತೆರೆದಿದ್ದೀರಿ, ದಯವಿಟ್ಟು ಅದನ್ನು ಬೆಂಗಳೂರಿಗೆ ಕೂಡಲೇ ವರ್ಗಾವಣೆ ಮಾಡತಕ್ಕದ್ದು ಅತ್ಯಂತ ಸೂಕ್ತ ಎನ್ನತಕ್ಕ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಲೋಕೋಪಯೋಗಿ ಇಲಾಖೆಗೆ ಸಂಬಂಧಪಟ್ಟ ಹಾಗೆ ಹೇಳುವುದಾದರೆ, ಓ ಬಿ ಆರ್, ಎನ್. ಬಿ. ಆರ್. ಮತ್ತು ವಿಲೇಜ್ ರೋಡ್ಸ್, ಸ್ಟೇಟ್ ಹೈವೇಸ್‌ಗಳೇನಿವೆ ಇದರ ಬಗ್ಗೆ ನಾವು ಕಳೆದ ೪ ವರ್ಷಗಳಿಂದಲೂ ಹೇಳುತ್ತಲೇ ಇದ್ದೇವೆ ಇದರ ಪ್ರಮಾಣವನ್ನು ಜಾಸ್ತಿ ಮಾಡಬೇಕೆಂದು ಆದರೆ ಇನ್ನೂ ಮಾಡುತ್ತಿಲ್ಲ ಆದುದರಿಂದ ದಯವಿಟ್ಟು ಅದನ್ನು ಜಾಸ್ತಿ ಮಾಡಬೇಕೆಂದು ಹೇಳುತ್ತೇನೆ. ಇನ್ನೊಂದು ಬಹಳ ಪ್ರಮುಖ್ಯವಾದ ವಿಷಯ ನಮ್ಮನ್ನು ಕಾಡುತ್ತಿರತಕ್ಕದ್ದು ಎಂದರೆ, ನಾನು ಪಿ. ಡಬ್ಲ್ಯೂ. ಡಿ. ರೋಡ್ಸ್‌ಗಳನ್ನು ಬಿಟ್ಟು ಇತರೇ ಏಜೆನ್ಸಿಗಳ ರೋಡ್‌ಗಳೇನಿವೆ ಅಂದರೆ ತಾಲ್ಲೂಕ್ ಬೋರ್ಡ್ ರೋಡ್‌ಗಳು, ಎಲ್. ಆರ್. ಡಿ. ಗ್ರಾಂಟ್ಸ್ ರೋಡ್‌ಗಳು, ಇ. ಎ. ಎಸ್. ಗ್ರಾಂಟ್ಸ್ ರೋಡ್‌ಗಳು, ಫುಡ್ ಫಾರ್ ವರ್ಕ್ ರೋಡ್‌ಗಳು ಮತ್ತೆ ಹಿಂದೆ ರೂರಲ್ ಕಮ್ಯೂನಿಕೇಷನ್ ಗ್ರಾಂಟ್ಸ್‌ನಲ್ಲಿ ಮಾಡಿರತಕ್ಕ ರೋಡ್‌ಗಳು ಸಾವಿರಾರು ಮೈಲುಗಳು ಉಂಟು. ಇದರ ಮೇನ್‌–ಟೇನೆನ್ಸ್‌ನ್ನು ತಾಲ್ಲೂಕ್ ಬೋರ್ಡ್‌ಗಳಲ್ಲಿರತಕ್ಕ ಮೀಗರ್ ಗ್ರಾಂಟ್ಸ್‌ನಿಂದ ಮಾಡುವುದಕ್ಕಾಗುತ್ತಿಲ್ಲ. ಆದರೆ ಇವತ್ತು ತಾವು ಇದಕ್ಕೆ ಹೆಚ್ಚಿಗೆ ಹಣವನ್ನು ಒದಗಿಸಿಲ್ಲ ಆದುದರಿಂದ ತಾವೇ ಈ ರಸ್ತೆಗಳನ್ನು ತೆಗೆದುಕೊಂಡು ಮೇನ್‌ಟೇನ್ ಮಾಡತಕ್ಕ ಒಂದು ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ. ಇನ್ನು ರಾಷ್ಟ್ರೀಯ ಹೆದ್ದಾರಿ ವಿಷಯದಲ್ಲಿ ಹೇಳುವುದಾದರೆ ೯ ರಸ್ತೆಗಳನ್ನು ೧೯೮೨–೮೩ರಲ್ಲಿ ರಾಷ್ಟ್ರೀಯ ಹೆದ್ದಾರಿಯನ್ನಾಗಿ ಪರಿವರ್ತನೆ ಮಾಡುವ ಬಗ್ಗೆ ಕಾರ್ಯಕ್ರಮವನ್ನು ಕೈಗೊಳ್ಳುತ್ತೇವೆಂದು ಹೇಳಿದ್ದೀರಿ. ಆದುದರಿಂದ ಈ ಸಂದರ್ಭದಲ್ಲಿ ತಮ್ಮನ್ನು ಕೇಳಿಕೊಳ್ಳುವುದೇನೆಂದರೆ ಬೆಂಗಳೂರು ನೀಲಗಿರಿ ರೋಡ್ ಏನಿದೆ ಅದನ್ನು ಮರೆಯಬಾರದು, ಏತಕ್ಕೆಂದರೆ ಅದು ಹೆಚ್ಚಿಗೆ ಟ್ರಾಫಿಕ್ ಇರತಕ್ಕಂಥ ರಸ್ತೆ ಆದುದರಿಂದ ಅದನ್ನು ರಾಷ್ಟ್ರೀಯ ಹೆದ್ದಾರಿಯ ಪಟ್ಟಿಯಲ್ಲಿ ಸೇರಿಸುವುದಕ್ಕೆ ಕ್ರಮ ಕೈಗೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಫಿಶರೀಸ್ ಬಗ್ಗೆ ಹೆಚ್ಚಿಗೆ ಹೇಳುವುದಿಲ್ಲ, ಏತಕ್ಕೆಂದರೆ ತಮ್ಮ ಭಾಷಣದಲ್ಲಿ ಬಡ ಮೀನುಗಾರರಿಗೆ ಹೆಚ್ಚಿನ ಪ್ರೋತ್ಸಾಹ ಕೊಡುವ ಬಗ್ಗೆ ಹೇಳಿದ್ದಿರಿ ಬಹಳ ಸಂತೋಷ ಆದರೆ ಇನ್‌ಲ್ಯಾಂಡ್ ಫಿಶರೀಸ್ ಬಗ್ಗೆ ಪ್ರಸ್ತಾಪವೇ ಮಾಡಿಲ್ಲ, ದಯಮಾಡಿ ಇನ್‌ಲ್ಯಾಂಡ್ ಫಿಶರೀಸ್ ಬಗ್ಗೆ. ಒಳನಾಡಿನ ಮೀನುಗಾರರ ಬಗ್ಗೆ ಒಂದು ಪ್ರತ್ಯೇಕವಾಗಿ ಇಲಾಖೆಯನ್ನು ಮಾಡತಕ್ಕದ್ದು ಸೂಕ್ತವೆಂದು ಹೇಳ ಬಯಸುತ್ತೇನೆ.

ಇನ್ನು ಶಿಕ್ಷಣದ ವಿಷಯದ ಬಗ್ಗೆ ಹೇಳುವುದಾದರೆ, ಅದಕ್ಕಾಗಿ ನೀವು ಈ ವರ್ಷ ಹೆಚ್ಚಿಗೆ ಹಣವನ್ನು ಒದಗಿಸಿದ್ದೇವೆಂದು ಹೇಳಿದ್ದೀರಿ ಬಹಳ ಸಂತೋಷ. ಏನು ಪೂರ್ವಭಾವಿಯಾಗಿ ಪ್ರಾಥಮಿಕ ಶಿಕ್ಷಣ ವಿದ್ಯಾಭ್ಯಾಸ ಪದ್ಧತಿ ಇದೆ ಅದರ ಗುಣಮಟ್ಟವನ್ನು ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಬೇಕಾಗಿದೆ. ಪೂರ್ವಭಾವಿ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ಕೊಡತಕ್ಕದ್ದು ಸೂಕ್ತವೆಂದು ಹೇಳುತ್ತೇನೆ. ಇನ್ನು ನಾವು ಕಂಡ ಹಾಗೆ ಗ್ರಾಮಾಂತರ ಪ್ರದೇಶಗಳಲ್ಲಿ ಬೇಕಾದಷ್ಟು ಶಿಸುವಿಹಾರಗಳನ್ನು ಅನೇಕ ಸಣ್ಣ ಸಣ್ಣ ಸಂಸ್ಥೆಗಳವರು ನಡೆಸುತ್ತಿದ್ದಾರೆ. ಅಂಥಾ ಸಣ್ಣ ಸಂಸ್ಥೆಗಳವರಿಗೂ ತಾವು ಅನುದಾನವನ್ನು ಕೊಟ್ಟಿದ್ದೇ ಆದರೆ, ಸಹಾಯಧನವನ್ನು ಕೊಟ್ಟಿದ್ದೇ ಆದರೆ ಬಹಳ ಪ್ರಯೋಜನವಾಗುತ್ತದೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಇನ್ನು ಸ್ವಾಮಿ, ಹೈಸ್ಕೂಲ್‌ಗಳನ್ನು ಮಂಜೂರು ಮಾಡತಕ್ಕ ಕಾಲದಲ್ಲಿ ಒಂದು ಶರತ್ತನ್ನು ಹಾಕಿದ್ದೀರಿ, ೬೦ ಸಾವಿರ ರೂ. ಗಳನ್ನು ಕೊಡಬೇಕೆಂದು ಹೇಳಿದ್ದೀರಿ, ಆದರೆ ಆರ್ಥಿಕವಾಗಿ ಹಿಂದುಳಿದಿರತಕ್ಕ ಪ್ರದೇಶಗಳಲ್ಲಿ, ಮತ್ತು ಮಳೆಬೆಳೆ ಇಲ್ಲದೇ ಜನಜೀವನವನ್ನೇ

ನಡೆಸುವುದಕ್ಕೆ ದುರ್ಬಲವಾಗಿರತಕ್ಕಂಥ ಪ್ರದೇಶಗಳಲ್ಲಿ ವಿನಾಯಿತಿಯನ್ನು ಕೊಡತಕ್ಕದ್ದು ಸೂಕ್ತವೆಂದು ಹೇಳಬಯಸುತ್ತೇನೆ.

ಇನ್ನು ಕೆ. ಎಸ್. ಆರ್. ಟಿ. ಸಿ. ವಿಚಾರ ಹೇಳುವುದಾದರೆ, ಮಂಡ್ಯಾ ಜಿಲ್ಲಾ, ಜಿಲ್ಲಾ ಕೇಂದ್ರವಾಗಿದ್ದರೂ ಕೂಡ ಅಲ್ಲಿ ಒಂದು ಡಿಪೋ ಇಲ್ಲ. ಆದುದರಿಂದ ಅಲ್ಲಿ ಒಂದು ಡಿಪೋವನ್ನು ತೆರೆಯತಕ್ಕದ್ದು ಸೂಕ್ತವೆಂದು ಸರ್ಕಾರಕ್ಕೆ ಸೂಚನೆ ಮಾಡಬಯಸುತ್ತೇನೆ. ಇನ್ನು ಮಾನ್ಯ ಹಿರಿಯ ಸದಸ್ಯರಾದ ಶ್ರೀ ರಾಮೇಗೌಡರು ಮಾತನಾಡುತ್ತಾ ತೋಟಿ ತಳವಾರರಿಗೆ ಸಹಾನುಭೂತಿ ಭತ್ಯವೆಂದು ೭೫ ರೂ. ಗಳನ್ನು ಕೊಡುತ್ತಿದ್ದೀರಿ ಆದರೆ ಅದೇ ರೀತಿ ಪಟೇಲರಿಗೆ ಏತಕ್ಕೆ ಕೊಡುತ್ತಿಲ್ಲವೆಂದು ಹೇಳಿದರು. ಸ್ವಾಮಿ, ತಮಗೆ ಹೇಳಬೇಕೆಂದರೆ ನಾನೂ ಒಬ್ಬ ಪಟೇಲರ ಮೊಮ್ಮಗ. ನಮ್ಮ ತಾಯಿ ತಂದೆ ಪಟೇಲರಾಗಿರುವಾಗ ನಾನು ಪ್ರೈಮರಿ ಮಿಡ್ಲ್ ಸ್ಕೂಲ್‌ನಲ್ಲಿ ಓದುತ್ತಿದ್ದೆ, ಆಗ ನಮ್ಮ ಹಳೆ ಮೈಸೂರಿನ ಕಡೆ ಇರ್ಸಾಲು ಎಂದು ಹೇಳಿ ಜನವರಿ ೩೧ನೇ ತಾರೀಖಿನ ದಿವಸ ಫೆಬ್ರುವರಿ ೨೮ನೇ ತಾರೀಖಿನ ದಿವಸ ಮಾರ್ಚಿ ೩೧ನೇ ತಾರೀಖಿನ ದಿವಸ ಏನು ಇರ್ಸಾಲು ಆಗುತ್ತಿತ್ತು, ಅಷ್ಟು ಹಣವನ್ನು ಶ್ಯಾನುಭೋಗರು, ತೋಟಿತಳವಾರರು ಯಾರು ಇಟ್ಟುಕೊಳ್ಳುವುದಕ್ಕೆ ಹೆದರುತ್ತಿದ್ದರು. ಆಗ ಕೊನೆವಾರದಲ್ಲಿ ಕಲೆಕ್ಟ್ ಆಗಿದ್ದ ಹಣ ಏನಿರುತ್ತಿತ್ತು ಅಷ್ಟು ಹಣವನ್ನು ಪಟೇಲರೇ ಮನೆಯಲ್ಲಿಟ್ಟುಕೊಂಡು ಕಾವಲು ಕಾಯಬೇಕಾಗಿತ್ತು. ರಾತ್ರಿ ಯಾರು ಬಂದು ಹೊಡೆದುಕೊಂಡು ಹೋಗಿಬಿಡುತ್ತಾರೋ, ದುಡ್ಡು ಎಲ್ಲಾ ಹೊರಟು ಹೋದರೆ ಆಮೇಲೆ ನಮ್ಮ ಮನೆ ಎಲ್ಲಿ ಜಫ್ತಿಗೆ ಬರುತ್ತದೋ ಎನ್ನತಕ್ಕ ಭಯ ಭೀತಿ ಇರುತ್ತಿತ್ತು. ಆದುದರಿಂದ ಪಟೇಲರು ಕೂಡ ಹಿಂದಿನಿಂದಲೂ ಕೂಡ ಗೌರವಯುತವಾಗಿ ಕೆಲಸ ಮಾಡಿಕೊಂಡು ಬಂದಿರುವುದರಿಂದ ದಯಮಾಡಿ ಮುಂದಿನ ವರ್ಷದ ಬಡ್ಜೆಟ್‌ನಿಂದಲಾದರೂ ಅವರಿಗೂ ಅದೇ ರೀತಿ ಕೊಡಿಸಿ ಕೊಡಬೇಕೆಂದು ಹೇಳಬಯಸುತ್ತೇನೆ.

ಕೊನೆಯದಾಗಿ ಬಡ್ಜೆಟ್‌ನಲ್ಲಿ ಮುಜರಾಯಿಯ ಬಗ್ಗೆ ಪ್ರಸ್ತಾಪವನ್ನೇ ಮಾಡಿಲ್ಲವಾದುದರಿಂದ ಒಂದು ಮಾತನ್ನು ಹೇಳಬಯಸುತ್ತೇನೆ, ನಾವು ಆಸ್ತಿಕರು ನಾಸ್ತಿಕರಲ್ಲ, ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಸುಮಾರು ೪೦, ೫೦ ಸಾವಿರ ದೇವಸ್ಥಾನಗಳಿರಬಹುದೆಂದು ಕಾಣುತ್ತದೆ. ತಮಿಳು ನಾಡು, ಕೇರಳದಲ್ಲಿ ಮುಜರಾಯಿಗೆ ಪ್ರತ್ಯೇಕವಾದ ಇಲಾಖೆಯೇ ಇದೆ. ತಾಲ್ಲೂಕ್ ಆಫೀಸಿನಿಂದ ಹಿಡಿದು ಸೆಕ್ರಟರಿಯೇಟ್‌ರವರೆಗೆ ಪ್ರತ್ಯೇಕವಾದ ಸಿಬ್ಬಂದಿಗಳಿದ್ದಾರೆ. ಅದಕ್ಕಾಗಿ ಕೋಟ್ಯಾಂತರ ರೂ. ಗಳ ಹಣವನ್ನು ಖರ್ಚು ಮಾಡುತ್ತಿದ್ದಾರೆ. ಆದರೆ ನೀವು ಇವತ್ತು ಒದಗಿಸಿರತಕ್ಕದ್ದು ಕೇವಲ ೫೦, ೫೫ ಲಕ್ಷ ರೂ. ಗಳನ್ನು ಮಾತ್ರ, ಆದುದರಿಂದ ಅದನ್ನು ಅಕನಿಷ್ಟ ಪಕ್ಷ ಅದರ ೧೦ ಪಟ್ಟು ಜಾಸ್ತಿ ಮಾಡಬೇಕೆಂದು ಹೇಳಬಯಸುತ್ತೇನೆ.

ಇಷ್ಟು ಮಾತನಾಡಲು ಕಾಲಾವಕಾಶವನ್ನು ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಹೆಚ್. ಗಂಗಾಧರನ್.—ನಿನ್ನೆ ಜೈಲಿಗೆ ಕಳುಹಿಸಿದ ಹುಡುಗರನ್ನು ಸಾಮಾನ್ಯ ಕೈದಿಗಳ ರೀತಿ ಕಾಣುತ್ತಿದ್ದಾರೆ. ಅವರಿಗೆ ಒಳ್ಳೆಯ ಊಟ ಕೊಡುವುದಕ್ಕೆ ಇಲ್ಲವೇ ಅವರನ್ನು ಬಿಟ್ಟುಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಈ ವಿಷಯವನ್ನು ಬೆಳಿಗ್ಗೆಯೇ (ಮೊದಲೇ) ಪ್ರಸ್ತಾಪ ಮಾಡಿದ್ದರೆ ಆ ವಿಷಯವೇ ಬೇರೆ ಆಗುತ್ತಿತ್ತು. ಅಂದರೆ ತಾವು ಅರೆ ಮನಸ್ಸಿನಿಂದ ಇದ್ದೀರಿ ಎಂದು ಕಾಣುತ್ತದೆ.

ಶ್ರೀ ಹೆಚ್. ಗಂಗಾಧರನ್ ಹಾಗೆ ಏನೂ ಇಲ್ಲ, ಕೊನೆಯಲ್ಲಿ ಹೇಳೋಣವೆಂದು ಇದ್ದೆ.

ಶ್ರೀಮತಿ ಅನುಸೂಯ ಗಜಾನನ ಶರ್ಮ (ಅಂಕೋಲ).— ಮಾನ್ಯ ಅಧ್ಯಕ್ಷರೇ, ೧೯೭೨-೭೩ನೇ ಸಾಲಿನ ಆಯವ್ಯಯ ಪತ್ರವನ್ನು ಓದುವಾಗ ಬಹಳ ಆಸೆಯಿಂದ ಕೇಳಿದೆ ಮತ್ತು ನಾನು ಕೂಡ ಓದಿ ನೋಡಿದೆ. ಆದರೆ ಆದರಲ್ಲಿ ನಮ್ಮ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ಯಾವುದೇ ಒಂದು ವಿಶೇಷ ಯೋಜನೆಯನ್ನು ಹಾಕಿಕೊಂಡ ಹಾಗೆ ಕಾಣಲಿಲ್ಲ. ನೆರೆ ಜಿಲ್ಲೆಯವರಾದ ಮಾನ್ಯ ಹಣಕಾಸಿನ ಸಚಿವರು ನಮ್ಮ ಜಿಲ್ಲೆಯ ಬಗ್ಗೆ ಸಂಪೂರ್ಣ ಮಾಹಿತಿಯನ್ನು ಹೊಂದಿದ್ದಾರೆ. ಆದರೂ ಕೂಡ ಅದೇನು ಕಾರಣವೋ ಏನೋ ಎಂದಿನಂತೆ ನಮ್ಮ ಜಿಲ್ಲೆಯನ್ನು ಅಲಕ್ಷ್ಯ ಮಾಡಿದ್ದಾರೆ. ಬಡ ಜಿಲ್ಲೆ ಹಾಗೇ ಇರಲಿ ಎಂದು ಮಾಡಿದ್ದಾರೆಂದು ಕಾಣುತ್ತದೆ.

ಶ್ರೀ ಎಂ. ವೀರಪ್ಪಮೊಯ್ಲಿ.—ತಮ್ಮ ಜಿಲ್ಲೆ ಮಧ್ಯ ಪ್ರದೇಶದಲ್ಲಿದೆಯೋ ಅಥವಾ ಕರ್ನಾಟಕ ದಲ್ಲಿದೆಯೋ ಏಕೆಂದರೆ ಅಲ್ಲಿ ಮೀನುಗಾರಿಕೆಗಾಗಿ ಕೈಗೊಳ್ಳತಕ್ಕ ಕಾರ್ಯಕ್ರಮಗಳನ್ನೆಲ್ಲ ಸ್ಪಷ್ಟವಾಗಿ ಕಾಣಿಸಿದ್ದೇವೆ. ಕರಾವಳಿ ಇರುವುದೇ ತಮ್ಮ ಜಿಲ್ಲೆಯಲ್ಲಿ.

ಅಧ್ಯಕ್ಷರು.—ಅವರು ಘಟ್ಟದ ಮೇಲಿನವರು.

ಶ್ರೀ ಎಂ. ವೀರಪ್ಪ ಮೋಯ್ಲಿ.—ಮಂಗಳೂರಿನಲ್ಲಿ ಕರಾವಳಿ ಪ್ರದೇಶದ ಮೀನುಗಾರರ ಉದ್ಧಾರ ಕ್ಕೋಸ್ಕರ ಕೈಗೊಳ್ಳತಕ್ಕ ಕಾರ್ಯಕ್ರಮಗಳನ್ನು ಹೇಳಿದ್ದೇವೆ, ಮತ್ತು ಶಿವಮೊಗ್ಗದಲ್ಲಿ ಮಲೆನಾಡಿನ ಅಭಿವೃದ್ಧಿಯ ಸಲುವಾಗಿ ವಿಶ್ವವಿದ್ಯಾನಿಲಯವನ್ನು ಕೊಟ್ಟಿದ್ದೇವೆಂದು ಹೇಳಿದ್ದೇವೆ.

ಅಧ್ಯಕ್ಷರು.—ಅವರು, ಸಿರಸಿ ಸಿದ್ದಾಪುರದವರೆಗೆ ಬರುತ್ತದೆಯೇ ಎಂದು ಕೇಳುತ್ತಾರೆ,

ಶ್ರೀಮತಿ ಅನಸೂಯ ಗಜಾನನ ಶರ್ಮ,—ಶಿವಮೊಗ್ಗದಲ್ಲಿ ಮಲೆನಾಡಿನವರಿಗಾಗಿ ವಿಶ್ವವಿದ್ಯಾನಿಲಯವನ್ನು ಕೊಟ್ಟಿದ್ದೇವೆಂದು ಹೇಳಿದ್ದಾರೆ. ಇದನ್ನು ಒಪ್ಪಿಕೊಂಡರೆ ನಮ್ಮ ಜಿಲ್ಲೆ ಮಧ್ಯಪ್ರದೇಶ ದಲ್ಲಿಲ್ಲ, ಕರ್ನಾಟಕದಲ್ಲಿದೆ ಎಂದು ಹೇಳಬಹುದು, ಈ ಆಯವ್ಯಯ ಪತ್ರದಲ್ಲಿ ಯಾವುದೇ ಒಂದು ಯೋಜನೆ ಇರಲಿ, ನಮ್ಮ ಜಿಲ್ಲೆಯ ಜನರ ಸಂಕಷ್ಟ ಕೂಡ ಇದರಲ್ಲಿ ಎಲ್ಲಿಯೂ ಕಾಣುವುದಿಲ್ಲ. ನಮ್ಮ ಜಿಲ್ಲೆಗೆ ಬಂದಿರುವ ಸಂಕಷ್ಟ ಎಂದರೆ ಜಲ ವಿದ್ಯುತ್ ಯೋಜನೆಗಳು. ಅವುಗಳ ಪೈಕಿ ಈಗ ಕಾಳಿ ಯೋಜನೆ ನಡೆಯುತ್ತಿದೆ, ಶರಾವತಿ ಆಗಲೇ ಪೂರ್ಣವಾಗಿದೆ, ಬೇಡ್ತಿ ಯೋಜನೆಗೆ ಸರ್ಕಾರದವರು ದೊಡ್ಡ ಮನಸ್ಸು ಮಾಡಿ ಸ್ಟೇ ಕೊಟ್ಟಿದ್ದಾರೆ ಮತ್ತು ತಜ್ಞ ಸಮಿತಿಯನ್ನು ನೇಮಿಸಿದ್ದಾರೆ ಈ ಸಾರಿ ಬೇಡ್ತಿ ಯೋಜನೆಗೆ ಹಣ ಇಡಲಿಲ್ಲ ಅದೇ ಒಂದು ದೊಡ್ಡ ಸಮಾಧಾನ. ಅಷ್ಟರಲ್ಲಿ ಹೊನ್ನಾವರ ದಲ್ಲಿ ಅಣು ವಿದ್ಯುತ್ ಕೇಂದ್ರ ಬಂದಿದೆ ಮತ್ತು ಕಾರವಾರದಲ್ಲಿ ನೌಕಾನಾಲೆ ಬರುತ್ತದೆಂಬ ಸುದ್ದಿ ಹಬ್ಬುತ್ತಿದೆ. ಅದಕ್ಕೆ ಈಗಾಗಲೇ ಸರ್ವೆ ಕೂಡ ಆಗಿದೆ. ಆದುದರಿಂದ, ಈಗ ನಮ್ಮ ಜಿಲ್ಲೆಯ ಜನರು ಯಾರನ್ನು ಮೊರೆ ಹೋಗಬೇಕೆಂಬ ಪರಿಸ್ಥಿತಿ ಉದ್ಭವವಾಗಿದೆ. ಮಾನ್ಯ ಅರ್ಥ ಮಂತ್ರಿಗಳು ಹೇಳಿದ ಹಾಗೆ ನಮ್ಮ ಜಿಲ್ಲೆ ಮಧ್ಯ ಪ್ರದೇಶದ ಬದಿಗೆ ಹೋಗುತ್ತದೋ ಏನೋ ಗೊತ್ತಿಲ್ಲ. ಕರ್ನಾಟಕ ರಾಜ್ಯದಲ್ಲಿ ನಮ್ಮ ಜಿಲ್ಲೆ ಇರುತ್ತದೋ ಇಲ್ಲವೋ ಎಂಬ ಭಯ ಬಂದಿದೆ. ಇವತ್ತಿನ ದಿವಸ, ಹೊನ್ನಾವರ ದಲ್ಲಿ ಅಣು ವಿದ್ಯುತ್ ಕೇಂದ್ರ ಬರುತ್ತದೆ ಕೇಳಿ ಆ ಭಾಗದ ಜನರು ಕಂಗಾಲಾಗಿದ್ದಾರೆ. ಬೇಡ್ತಿ ಜಲ ವಿದ್ಯುತ್ ಯೋಜನೆಯನ್ನು ನಿಲ್ಲಿಸಿದ್ದರಿಂದ ಈ ಯೋಜನೆ ನಮ್ಮ ತಾಲ್ಲೂಕಿಗೆ ಬಂತೋ ಏನೋ ಎಂದು ಪರಿತಪಿಸುತ್ತಿದ್ದಾರೆ. ಮಾನ್ಯ ಮಂತ್ರಿಗಳು ನಮ್ಮ ಜಿಲ್ಲೆಗೆ ಹೋದಾಗ ಬೇಡ್ತಿ ಯೋಜನೆಯನ್ನು ಕೈಬಿಟ್ಟಿಲ್ಲವೆಂದು ಹೇಳಿದ್ದರು. ಆದರೂ ಕೂಡ ಅದರ ಬಗ್ಗೆ ಸ್ಟೇ ಕೊಟ್ಟು ತಜ್ಞ ಸಮಿತಿಯನ್ನು ನೇಮಿಸಿದೆಯಲ್ಲ ಎಂದು ಜನರು ಆಲೋಚಿಸುತ್ತಿದ್ದಾರೆ. ಇನ್ನು ನೌಕಾ ನಾಲೆ ಬಂದರೆ ಅದನ್ನು ತಡೆಯುವವರು ಯಾರೂ ಇಲ್ಲ. ಅದು ಕೇಂದ್ರ ಸರ್ಕಾರದ ಯೋಜನೆ ಎಂದು ಹೇಳುತ್ತಿದ್ದಾರೆ. ಒಟ್ಟಾರೆ ನಮ್ಮ ಸಂಕಷ್ಟವನ್ನು ಸರ್ಕಾರದ ಮುಂದೆ ಹೇಳುವುದಕ್ಕಿಂತ ದೇವರ ಹತ್ತಿರ ಮೊರೆ ಇಡಬೇಕೊ ಏನೋ ಎಂಬ ಪರಿಸ್ಥಿತಿ ನಮ್ಮ ಜಿಲ್ಲೆಗೆ ಬಂದಿರುವಾಗ ಈ ಆಯವ್ಯಯ ಪತ್ರದಲ್ಲಿ ನಮ್ಮ ಜಿಲ್ಲೆಯ ಬಗ್ಗೆ ಯಾವುದೇ ಒಂದು ಯೋಜನೆ ಇಲ್ಲ. ಒಂದು ಕಾಲೇಜನ್ನು ಕೊಟ್ಟಿಲ್ಲ. ಯಾವುದೇ ಒಂದು ವಿಶೇಷ ಯೋಜನೆ ಕೂಡ ನಮ್ಮ ಜಿಲ್ಲೆಗೆ ಇಲ್ಲ. ನಮ್ಮ ಜಿಲ್ಲೆಗಾಗಿ ೧೦ ರೂಪಾಯಿಗಳನ್ನು ಕೂಡ ಈ ಆಯವ್ಯಯದಲ್ಲಿ ಇಡಲಿಲ್ಲ. ನಮ್ಮ ಪಕ್ಕದ ಜಿಲ್ಲೆಯವರಾದ ಮಾನ್ಯ ಅರ್ಥ ಮಂತ್ರಿಗಳು ಇಂಥ ಆಯವ್ಯಯವನ್ನು ಮಂಡಿಸಿದ್ದಾರೆ. ಇದರ ಬಗ್ಗೆ ಏನು ಹೇಳಬೇಕೋ ಎಂಬುದು ತಿಳಿಯದಾಗಿದೆ, ರೈತರ ಉದ್ಯೋಗದ ಬಗ್ಗೆ ನಾನಾ ರೀತಿಯ ಯೋಜನೆಗಳನ್ನು ಹೇಳಿದ್ದಾರೆ ಆದರೆ ನಮ್ಮ ಜಿಲ್ಲೆಯಲ್ಲಿ ಅದು ಇದೆಯೋ ಇಲ್ಲವೋ ಗೊತ್ತಿಲ್ಲ. ಫಜ್ನಿ ಎಂದರೆ ಉಪ್ಪು ನೀರು ಗದ್ದೆಗಳಲ್ಲಿ ಬರುತ್ತದೆ. ಅದು ಬಂದರೆ ರೈತನ ಗದ್ದೆ ಹಾಳಾಗಿ ಬೆಳೆ ಬರುವುದಿಲ್ಲ. ಆದುದರಿಂದ, ನಮ್ಮ ಜಿಲ್ಲೆಯ ಬಡ ರೈತರ ಗದ್ದೆ ಗಳಲ್ಲಿ ಉಪ್ಪು ನೀರು ಹರಿದು ಬಾರದ ಹಾಗೆ ಕಟ್ಟೆ ಕಟ್ಟುವುದಕ್ಕೆ ಈಗಲಾದರೂ ಹಣದನ್ನು ಒದಗಿಸ ಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ವ್ಯವಸಾಯವೇ ಮುಖ್ಯ ಕಸಬು. ರೈತನಾದವನು ಮಳೆಯನ್ನು ಅವಲಂಬಿಸಿ ಬೆಳೆ ಬೆಳೆಯಬೇಕಾಗುತ್ತದೆ. ಹೀಗಿರುವಾಗ, ಒಂದು ವರ್ಷ ಬೇಗ ಮಳೆ ಬರುತ್ತದೆ, ಮತ್ತೊಂದು ವರ್ಷ ತಡವಾಗಿ ಬರುತ್ತದೆ ಬೆಳೆ ಬೆಳೆದು ನಿಂತಾಗ ಮಳೆ ಬಂದು ಹಾನಿ ಉಂಟಾಗುತ್ತದೆ. ಹೀಗೆ ರೈತ ತನ್ನ ಶ್ರಮವನ್ನು ಜಮೀನಿನಲ್ಲಿ ಹಾಕುತ್ತಾನೆ, ಆದರೆ ಅವನ ಶ್ರಮಕೆ ತಕ್ಕ ಪ್ರತಿಫಲ ದೊರೆಯುತ್ತದೋ ಇಲ್ಲವೋ ಗೊತ್ತಿಲ್ಲ. ಆದ್ದರಿಂದ, ನಮ್ಮ ಜಿಲ್ಲೆಗೆ ಒಂದ ನೀರಾವರಿ ಯೋಜನೆಯನ್ನು ರೂಪಿಸಿ ಅದಕ್ಕೆ ಏನಾದರೂ ಒಂದು ವಿಶೇಷ ನಿಧಿಯನ್ನು ಇಡಬೇಕೆಂದ

ಕೇಳಿಕೊಳ್ಳುತ್ತೇನೆ. ಇನ್ನು ಕಟ್ಟಿಗೆ ದರವನ್ನು ಕಡಿಮೆ ಮಾಡಿದ್ದೇವೆಂದು ಹೇಳಿದ್ದಾರೆ. ಆದರೂ ಕೂಡ ಅದು ಸಾಲದು, ಇನ್ನೂ ಕಡಿಮೆ ಮಾಡಬೇಕೆಂದು ಹೇಳುತ್ತೇನೆ. ಕಾಡಿನಿಂದ ಕಟ್ಟಿಗೆ ತಂದು ಜೀವನ ಮಾಡುವವರಿಗೆ ಪರ್ಮಿಟ್ ದರ ಕಡಿಮೆಯಾಗಬೇಕು. ಇಂಥ ಕೆಲವು ಸುಧಾರಣೆಗಳಾಗಬೇಕು. ಇನ್ನು ಭೂಸುಧಾರಣೆಯಿಂದ ಆಗಿರತಕ್ಕ ಅನಾಹುತವನ್ನಂತೂ ಹೇಳುವುದಕ್ಕೆ ಸಾಧ್ಯವಿಲ್ಲ. ಭೂಸುಧಾರಣೆಯಿಂದಾಗಿ ನಮ್ಮ ಜಿಲ್ಲೆಯಲ್ಲಿ ಲಕ್ಷಾಧಿಪತಿ ಬಿಕ್ಷಾಧಿಪತಿ, ಬಿಕ್ಷಾಧಿಪತಿ ಲಕ್ಷಾಧಿಪತಿಗಳಾಗಿದ್ದಾರೆಂದು ಹೇಳಬಹುದು. ನ್ಯಾಯವಾಗಿ ಭೂಮಿ ಉಳುವವರಿಗೆ ಸಿಕ್ಕಿದ್ದರೆ ಯಾರಿಗೂ ಪಶ್ಚಾತ್ತಾಪವಾಗುತ್ತಿರಲಿಲ್ಲ. ಭೂನ್ಯಾಯ ಮಂಡಲಿ ಎನ್ನುವುದಕ್ಕೆ ಬದಲಾಗಿ ಭೂ ಅನ್ಯಾಯ ಮಂಡಲಿ ಎಂದು ಬರೆಯುತ್ತಾರೆ ಆ ರೀತಿ ಕೆಲಸಗಳು ಅಲ್ಲಿ ನಡೆದಿವೆ. ಅದು ಜಾತಿ ಮೇಲೆ ನಡೆದಿದೆಯೋ ಅಥವಾ ಬೇರೆ ಯಾವುದರ ಮೇಲೆ ನಡೆದಿದೆ ಎಂಬುದು ಗೊತ್ತಿಲ್ಲ. ಭೂಮಿಯನ್ನೇ ಅವಲಂಬಿಸಿದ ಜನರು ನಿರ್ಗತಿಕರಾಗಿದ್ದಾರೆ. ಮಾನ್ಯ ಅರ್ಥಮಂತ್ರಿಗಳು ನೇಗಿಲ ಭಾಗ್ಯ, ಆಶಾಕಿರಣ ಎಂಬ ನಾನಾ ಉತ್ತಮ ಯೋಜನೆಗಳನ್ನು ಹಾಕಿದ್ದಾರೆ. ಅದೇ ರೀತಿ ಭೂಮಿಯನ್ನೇ ಅವಲಂಭಿಸಿ ಜೀವನ ಮಾಡತಕ್ಕವರಿಗೂ ಒಂದು ಒಳ್ಳೆಯ ಯೋಜನೆಯನ್ನು ರೂಪಿಸಿ ಅವರಿಗೆ ಆರ್ಥಿಕ ಸಹಾಯ ನೀಡುವ ವ್ಯವಸ್ಥೆ ಮಾಡಿದರೆ ಒಳ್ಳೆಯದೆಂದು ಅನ್ನಿಸುತ್ತದೆ. ಮಾನ್ಯ ಸಚಿವರಿಗೆ ರೈತರ ಕಷ್ಟ ಏನೆಂಬುದು ಗೊತ್ತಿರುವುದರಿಂದ ಅವರು ಈ ದಿಸೆಯಲ್ಲಿ ಒಂದು ಯೋಜನೆಯನ್ನು ಕೈಗೊಳ್ಳಬಹುದೆಂದು ಆಸೆ ಪಡುತ್ತೇನೆ. ಇನ್ನು ರೇಷ್ಮೆ ಅಭಿವೃದ್ಧಿಗೆ ವಿಶ್ವ ಬ್ಯಾಂಕಿನಿಂದ ಸಾಲದ ವ್ಯವಸ್ಥೆ ಇದೆ ಎಂದು ಹೇಳಿದ್ದಾರೆ. ಆದರೆ ನಮ್ಮ ಜಿಲ್ಲೆಯನ್ನು ರೇಷ್ಮೆ ಅಭಿವೃದ್ಧಿಗಾಗಿ ವಿಶ್ವ ಬ್ಯಾಂಕಿನಿಂದ ಸಾಲ ಪಡೆಯುವ ಯೋಜನೆಗೆ ಏಕೆ ಒಳಪಡಿಸಲಿಲ್ಲ ? ಪ್ರಾದೇಶಿಕ ಅಸಮತೋಲನವನ್ನು ದೂರ ಮಾಡಬೇಕೆಂದು ಹೇಳಿರುವ ಅರ್ಥ ಮಂತ್ರಿಗಳು ಏಕೆ ಈ ವಿಷಯದ ಬಗ್ಗೆ ಇಂಥ ಭಾವನೆಯನ್ನು ತಳೆದಿದ್ದಾರೆಂಬುದು ಗೊತ್ತಾಗುವುದಿಲ್ಲ. ಒಟ್ಟಿನಲ್ಲಿ ನಮ್ಮ ಜಿಲ್ಲೆಯನ್ನು ರೇಷ್ಮೆ ಅಭಿವೃದ್ಧಿಗಾಗಿ ವಿಶ್ವ ಬ್ಯಾಂಕಿನಿಂದ ಸಾಲ ಪಡೆಯುವ ಯೋಜನೆಗೆ ಒಳಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ ಅಲ್ಲದೆ ನಮ್ಮ ಜಿಲ್ಲೆಯಲ್ಲಿ ಬಡ ರೈತರೇನಿದ್ದಾರೆ ಅವರಿಗೆ ಬಿಡುವಿನ ವೇಳೆಯಲ್ಲಿ ಉದ್ಯೋಗ ದೊರೆಯುವಂಥ ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಸಾಕಷ್ಟು ಅಡವಿ ಇದೆ. ಅದರಿಂದ ಸರ್ಕಾರಕ್ಕೆ ರೆವಿನ್ಯೂ ಬರುತ್ತಿದೆ. ಕಾಳಿ ಜಲ ವಿದ್ಯುತ್ ಯೋಜನೆಯಿಂದ ೩೦ ಕೋಟಿ ರೂಪಾಯಿ ಸರ್ಕಾರಕ್ಕೆ ಬರುತ್ತಿದೆ. ಈ ರೀತಿ ರೆವಿನ್ಯೂ ನಮ್ಮ ಜಿಲ್ಲೆಯಿಂದ ಸರ್ಕಾರಕ್ಕೆ ಬಂದಾಗ್ಯೂ ನಮ್ಮ ಜಿಲ್ಲೆಯನ್ನು ಬಡತನದಿಂದ ದೂರ ಮಾಡುವ ಸಲುವಾಗಿ ಯಾವುದೇ ಒಂದು ಯೋಜನೆಯನ್ನು ಸರ್ಕಾರ ಹಾಕಿಕೊಳ್ಳಲಿಲ್ಲವೆಂಬುದು ವಿಷಾದಕರ. ಇನ್ನಾದರೂ ಯೋಜನೆಯನ್ನು ಹಾಕಿಕೊಳ್ಳಬೇಕೆಂದು ಹೇಳಬಯಸುತ್ತೇನೆ. ಇನ್ನು ಶಾಲಾ ಕಾಲೇಜುಗಳಿಗಂತೂ ಏನೇನು ಆದ್ಯತೆ ನೀಡಿಲ್ಲ. ನಮ್ಮ ಜಿಲ್ಲೆಯಲ್ಲಿ ಅರಣ್ಯ ಕಾಲೇಜನ್ನು ಮಾಡಿದರೆ ಮಕ್ಕಳಿಗೆ ಪ್ರಾಯೋಗಿಕವಾಗಿ ವಿದ್ಯೆ ಕಲಿಸಲು ಸುಲಭವಾಗುತ್ತದೆ ಕಾಲೇಜಿನ ಹೊರಗಡೆ ಕರೆದುಕೊಂಡು ಹೋಗಿ ಗಿಡಮರಗಳನ್ನು ತೋರಿಸುವ ಪ್ರಮೇಯ ಇರುವುದಿಲ್ಲ ಕಾಲೇಜಿನಲ್ಲಿ ಕುಳಿತುಕೊಂಡೇ ಪಾಠ ಹೇಳತಕ್ಕ ಅವಕಾಶ ಇದೆ. ಆದರೂ ಕೂಡ ನಮ್ಮ ಜಿಲ್ಲೆಗೆ ಕಾಲೇಜನ್ನು ಕೊಟ್ಟಿಲ್ಲ. ನಮ್ಮ ಜಿಲ್ಲೆಗಂತೂ ಮೆಡಿಕಲ್ ಕಾಲೇಜು ಸಿಕ್ಕುವುದಕ್ಕಂತೂ ಸಾಧ್ಯವಿಲ್ಲ. ಆದರೆ ಆಯುರ್ವೇದಿಕ ಮೆಡಿಕಲ್ ಕಾಲೇಜನ್ನಾದರೂ ಏಕೆ ಕೊಡುವುದಿಲ್ಲ ? ಆಯುರ್ವೇದಿಕ್ ರೀಸರ್ಚ್ ಸೆಂಟರನ್ನು ಏತಕ್ಕೆ ಸ್ಥಾಪನೆ ಮಾಡುವುದಿಲ್ಲ ? ಪ್ರಾದೇಶಿಕ ಅಸಮತೋಲನ ಅಂದಾಗ ಈ ಎಲ್ಲ ಭಾವನೆಗಳು ಎದ್ದು ಬರುತ್ತವೆ. ಹಣ್ಣಿನ ತೋಟ ಮಾಡುವುದಕ್ಕೆ ನಮ್ಮ ಜಿಲ್ಲೆಯಲ್ಲಿ ಬೇಕಾದಹಾಗೆ ಅವಕಾಶವಿದೆ. ಆದ್ದರಿಂದ ಸರ್ಕಾರದವರು ನಮ್ಮ ಜಿಲ್ಲೆಯಲ್ಲಿ ಹಣ್ಣಿನ ತೋಟ ಬೆಳೆಸಲು ಯೋಜನೆಯೊಂದನ್ನು ಮಾಡಿಕೊಡಬೇಕು ಇನ್ನು ಹಳ್ಳಿಗಳ ಬಗ್ಗೆ ಹೇಳಬೇಕೆಂದರೆ ನಮ್ಮ ಜಿಲ್ಲೆಯಲ್ಲಿ ಬರೀ ಹಳ್ಳಿಗಳೇ ತುಂಬಿವೆ. ವೈದ್ಯರು ಮುಂತಾದ ಸರ್ಕಾರೀ ನೌಕರರನ್ನು ಹಳ್ಳಿಗಳಿಗೆ ವರ್ಗ ಮಾಡಿದರೆ ಹೋಗುವುದಿಲ್ಲ. ದೊಡ್ಡ ದೊಡ್ಡ ಊರುಗಳಲ್ಲಿ ಜನ ಇರುವುದಕ್ಕೆ ಅಪೇಕ್ಷೆ ಪಡುತ್ತಾರೆ, ಹಳ್ಳಿಗಳಿಗೆ ಹೋಗುವುದಿಲ್ಲ ಎಂದು ಎಲ್ಲರೂ ಹೇಳುತ್ತಾರೆ. ಹಳ್ಳಿಗಳಲ್ಲಿ ರಸ್ತೆ ಇರುವುದಿಲ್ಲ ಕೆಲವು ಕಡೆ ರಸ್ತೆ ಇದ್ದರೂ ವಾಹನಸೌಕರ್ಯ ಇರುವುದಿಲ್ಲ. ಎರಡೂ ಇದ್ದಲ್ಲಿ ಶಾಲೆಗಳಿರುವುದಿಲ್ಲ. ದವಾಖಾನೆ, ವಿದ್ಯುತ್ ಸೌಕರ್ಯವಂತೂ ಮೊದಲೇ ಇರುವುದಿಲ್ಲ. ಇಂಥ ಒಂದು ಪರಿಸ್ಥಿತಿಯಲ್ಲಿ ಹಳ್ಳಿಯಲ್ಲಿ ಹೋಗಿ ಉದ್ಯೋಗ ಮಾಡಬೇಕು. ಹಳ್ಳಿಗಳು ಬೆಳೆಯಬೇಕು ಎಂದರೆ ಅದು ಅಸಾಧ್ಯದ ಮಾತು. ಆದ್ದರಿಂದ ಹಳ್ಳಿಗಳ ಉದ್ಧಾರ ಮಾಡುವುದಕ್ಕೆ ಸರ್ಕಾರದವರು ಪ್ರಯತ್ನ ಮಾಡಬೇಕು. ರಾಜ್ಯದ ಎಲ್ಲಾ ಕಡೆಗಳಲ್ಲೂ ಹಳ್ಳಿಗಳ ಅಭಿವೃದ್ಧಿ ಮಾಡಬೇಕು.

ಶ್ರೀ ಕೆ. ಭಾಸ್ಕರ ನಾಯಿಡು.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಹೇಳುತ್ತಿದ್ದಾರೆ ? ಮಂತ್ರಿಗಳು ಯಾರೂ ಇಲ್ಲ. ದಯಮಾಡಿಟ್ಟು ಅಡ್ಜರ್ನ್ ಮಾಡಿ.

ಅಧ್ಯಕ್ಷರು.—ನೀವು ಕುಳಿತುಕೊಳ್ಳಿ. ಮಾನ್ಯ ಸದಸ್ಯರು ಭಾಷಣವನ್ನು ಮುಂದುವರೆಸಿ.

ಶ್ರೀಮತಿ ಅನಸೂಯ ಗಜಾನನ ಶರ್ಮ.—ನಾನು ಶಾಸಕಳಾಗಿ ೧೯೭೮ನೇ ಇಸವಿಯಲ್ಲಿ ಆರಿಸಿ ಬಂದಾಗ ಈ ಸಭೆಯಲ್ಲಿ ಮಾತನಾಡಬೇಕಾದರೆ ಬಹಳ ಉತ್ಸಾಹ ಬರುತ್ತಿತ್ತು. ಇಲ್ಲಿ ಮಾತನಾಡಿದರೆ ಏನೋ ಆಗಿಬಿಡುತ್ತದೆ ನಮಗೂ ಸ್ವರ್ಗಕ್ಕೂ ಮೂರೇ ಗೇಣು ಅಂತರ ಎಂದುಕೊಂಡಿದ್ದೆವು. ಆದರೆ ಈಗ ಮಾನ್ಯ ಭಾಸ್ಕರ ನಾಯಿಡು ಅವರು ಹೇಳುವುದನ್ನು ನೋಡಿದರೆ ಅದು ಸರಿ ಎನಿಸುತ್ತದೆ. ನನಗೇನು ಆಶ್ಚರ್ಯವಾಗುವುದಿಲ್ಲ. ನಾವು ಏನು ಮಾತನಾಡಿದರೂ ಏನೂ ಆಗುವುದಿಲ್ಲ. ಏನೋ ನಾವು ಆರಿಸಿಬಂದಿದ್ದೇವೆ, ಸದನದಲ್ಲಿ ಮಾತನಾಡುತ್ತಿದ್ದೇವೆ. ಆದರೆ ಏನು ಪ್ರಯೋಜನ ಆಗುತ್ತದೋ ಗೊತ್ತಿಲ್ಲ. ಮಾನ್ಯ ಸಚಿವರಾದ ರಾಮಕೃಷ್ಣ ಅವರು ಕೇಳುತ್ತಿದ್ದಾರೆ. ಅಷ್ಟೇ ಸಮಾಧಾನ.

ಶ್ರೀ ಜೆ. ಹೆಚ್. ಪಟೇಲ್.—ಇವರಿಗೂ ಏನಾದರೂ ಕೆಲಸ ಇದ್ದರೆ ಹೋಗಲಿ.

ಶ್ರೀಮತಿ ಅನಸೂಯ ಗಜಾನನ ಶರ್ಮ.—ಪಶ್ಚಿಮಘಟ್ಟ ಅಭಿವೃದ್ಧಿ ಯೋಜನೆ ಬಂತು ಎಂದು ಹೋದವರ್ಷ ಬಹಳ ಸಂತೋಷವಾಗಿತ್ತು. ಡೈರಿ ಬಗ್ಗೆ, ಸಿರಿಕಲ್ಚರ್ ಬಗ್ಗೆ ಏನೋ ಅದರಲ್ಲಿ ಸ್ವಲ್ಪ ಮಾಡಿರುವಹಾಗೆ ಕಾಣುತ್ತದೆ. ಈ ಅಭಿವೃದ್ಧಿ ಯೋಜನೆಯಿಂದ ಆ ಕಾರ್ಯಕ್ರಮಗಳು ಬಂತೋ ಏನೋ ಗೊತ್ತಿಲ್ಲ. ನಮ್ಮ ಜಿಲ್ಲೆಯಲ್ಲಂತೂ ಅದು ಕಾಣುತ್ತಿದೆ. ನಮ್ಮ ಜಿಲ್ಲೆಯಲ್ಲಿ ಪ್ರವಾಸಿ ಕೇಂದ್ರ ಮಾಡುವುದಕ್ಕೆ ಬೇಕಾದಷ್ಟು ಅವಕಾಶವಿದೆ. ಆದರೆ ಅವರ ಕಡೆ ಯಾರೂ ಲಕ್ಷ್ಯ ಕೊಡುತ್ತಿಲ್ಲ. ನಮ್ಮಲ್ಲಿ ಯಾಣ ಎಂಬ ಸ್ಥಳವಿದೆ. ಅದು ಅತೀ ಸುಂದರವಾದ ಪ್ರದೇಶ. ಅಲ್ಲಿ ಪ್ರವಾಸಿ ಕೇಂದ್ರ ಮಾಡಿದರೆ ಬಹಳ ಅನುಕೂಲವಾಗುತ್ತದೆ ಈ ಬಗ್ಗೆ ಸರ್ಕಾರದವರು ಗಮನ ಕೊಡಬೇಕು. ರಸ್ತೆ ಸಾರಿಗೆ ಬಸ್ಸುಗಳನ್ನು ಹೆಚ್ಚು ಮಾಡಿದ್ದೇವೆಂದು ಆಯವ್ಯಯ ಭಾಷಣದಲ್ಲಿ ಹೇಳಿದ್ದಾರೆ. ಆದರೆ ನಮ್ಮ ಜಿಲ್ಲೆಯ ಹೆಸರು ಅದರಲ್ಲಿಲ್ಲ. ಏತಕ್ಕೆ ಎಂಬುದು ಗೊತ್ತಾಗುತ್ತಿಲ್ಲ. ನಮ್ಮ ಜಿಲ್ಲೆಯಲ್ಲಿ ಎಸ್.ಟಿ. ಬಸ್ ಬಿಟ್ಟರೆ ಬೇರೆ ಯಾವುದೇ ವಾಹನ ಸೌಕರ್ಯ ಇಲ್ಲ. ಆದ್ದರಿಂದ ನಮ್ಮ ಜಿಲ್ಲೆಯ ಹೆಚ್ಚಿನ ಬಸ್ ಸೌಕರ್ಯ ನೀಡಬೇಕೆಂದು ಕೇಳಿಕೊಳ್ಳುತ್ತೇನೆ. ೨೫೦ ರೂಪಾಯಿಗಳಿಗಿಂತ ಕಡಿಮೆ ಇರುವ ಮಂಗಳ ಸೂತ್ರಕ್ಕೆ ತೆರಿಗೆ ಇಲ್ಲ ಎಂದು ಮಾನ್ಯ ಅರ್ಥ ಮಂತ್ರಿಗಳು ಹೇಳಿದ್ದಾರೆ, ೨೫೦ ರೂಪಾಯಿಗೆ ಯಾವ ಮಂಗಳಸೂತ್ರ ಬರುತ್ತದೋ ನನಗಂತೂ ಗೊತ್ತಿಲ್ಲ. ನಮ್ಮ ಕಡೆಯಲ್ಲಿ ಕರಿಮಣಿಯನ್ನು ನುಗುಲಲ್ಲಿ ಸುರಿದು ಹಾಕುತ್ತಾರೆ. ಅದರಲ್ಲಿ ಒಂದು ಚಿಪ್ಪಿ ಬಂಗಾರದ್ದು ಹಾಕಿದರೂ ೨೫೦ ರೂಪಾಯಿಗಳಿಗಿಂತ ಜಾಸ್ತಿಯಾಗುತ್ತದೆ. All that glitters is not gold ಎಂದು ಹೇಳಿದ್ದಾರೆ. ಅದು ನಿಜ. ಮಂಗಳ ಸೂತ್ರಕ್ಕೆ ತೆರಿಗೆ ಹಾಕಿಲ್ಲ ಎಂದಾಗ ಶ್ರೀಮತಿ ಇಂದಿರಾಗಾಂಧಿಯವರು ಮಂಗಳಸೂತ್ರದ ಬಗ್ಗೆ ಹೇಳುತ್ತಿದ್ದರು, ಆದ್ದರಿಂದ ಇವರು ಏನೋ ಮಾಡಿದ್ದಾರೆ ಎಂದು ಅಂದುಕೊಂಡಿದ್ದೆ. ಆದರೆ ೨೫೦ ರೂಪಾಯಿಗಳಿಗಿಂತ ಕಡಿಮೆ ಬೆಲೆಯ ಮಂಗಳಸೂತ್ರಕ್ಕೆ ಎಂದಾಗ ಆಶ್ಚರ್ಯವಾಯಿತು. ಈ ಕಡೆ ನುಗಿಲಲ್ಲಿ ಸುರಿಯುವುದಿಲ್ಲ. ನಮ್ಮ ಕಡೆ ನುಗಿಲಲ್ಲಿ ಸುರಿದು ಕರಿಮಣಿಯನ್ನು ಸೇರಿಸಿ ಬಂಗಾರದ ಚಿಪ್ಪಿ ಹಾಕಿಕೊಳ್ಳುತ್ತಾರೆ. ಇಷ್ಟೆಲ್ಲಾ ಮಾಡಬೇಕಾಗಿರುವಾಗ ೨೫೦ ರೂಪಾಯಿ ಮಂಗಳಸೂತ್ರವೆಂದರೆ ಏನೋ ನನಗೆ ಅರ್ಥವಾಗುವುದಿಲ್ಲ. ಕೊನೇಪಕ್ಷ ಅರ್ಧ ತೊಲ ಬಂಗಾರ ಹಾಕಿದರೂ ಒಂದು ಸಾವಿರ ರೂಪಾಯಿವರೆಗೆ ಖರ್ಚಾಗುತ್ತದೆ ಇನ್ನು ನುಗಿಲಿಲ್ಲ ಹಾಕಿಕೊಳ್ಳುವುದಕಂತೂ ತೆರಿಗೆಯ ಪ್ರಶ್ನೆಯೇ ಇಲ್ಲ. ಆದ್ದರಿಂದ ೨ ಸಾವಿರ ರೂಪಾಯಿ ಬೆಲೆಯ ಮಂಗಳಸೂತ್ರಕ್ಕೆ ತೆರಿಗೆ ಇಲ್ಲ ಎಂದು ಹೇಳಿ ಇಲ್ಲದಿದ್ದರೆ ಆಯವ್ಯಯದಲ್ಲಿ ಮಂಗಳಸೂತ್ರಕ್ಕೆ ತೆರಿಗೆ ವಿನಾಯಿತಿ ಮಾಡಿದ್ದೇವೆ ಎಂದು ಹೇಳುವ ಅಗತ್ಯವೇ ಇಲ್ಲ. ೨೫೦ ರೂಪಾಯಿಗೆ ಬೆಳ್ಳಿ ಮಂಗಳಸೂತ್ರವು ಬರುತ್ತದೋ ಇಲ್ಲವೋ ಗೊತ್ತಿಲ್ಲ ಇನ್ನು ಹೆಣ್ಣು ಮಕ್ಕಳಿಗೆ ಅಂದರೆ ನೀತಿಗೆಟ್ಟ ಹೆಣ್ಣುಮಕ್ಕಳಿಂದ ಹಿಡಿದು ಎಲ್ಲರಿಗೂ ಅನ್ವಯವಾಗುವಂತೆ ಒಂದು ತರಹ ಯೋಜನೆ ಮಾಡಬೇಕೆಂದು ಹೆಣ್ಣು ಮಕ್ಕಳ ಮೇಲೆ ಕನಿಕರ ಇಟ್ಟು ಮಾಡಿದ್ದಾರೆ. ಕೆಲವು ಒಳ್ಳೆಯ ಯೋಜನೆಯನ್ನು ಮಾಡಿದ್ದರೂ ಕೂಡ ಅದು ಎಷ್ಟರಮಟ್ಟಿಗೆ ಫಲಕಾರಿಯಾಗುತ್ತದೆ ಎಂಬುದನ್ನು ನೋಡದ ಹೊರತು ಏನೂ ಹೇಳುವುದಕ್ಕಾಗುವುದಿಲ್ಲ. ಈ ಆಯವ್ಯಯ ಪತ್ರದಿಂದ ನಮ್ಮ ಜಿಲ್ಲೆಯ ಜನರಿಗೆ ಯಾವುದೇ ತರಹ ಹೆಚ್ಚಿನ ಲಾಭ ಇಲ್ಲ. ಇಷ್ಟು ಬಜೆಟ್ ಇಟ್ಟಿದ್ದರೂ ಕೂಡ ಮುಂದೆ ಸಪ್ಲಿಮೆಂಟರಿ ಬಜೆಟ್ ಎಂದು ಕೋಟಿಗಟ್ಟಲೆ ಹಣ ಪಾಸ್ ಮಾಡುವುದಿದೆ. ಆದ್ದರಿಂದ ನಮ್ಮ ಜಿಲ್ಲೆಯನ್ನು ಕರ್ನಾಟಕ ರಾಜ್ಯದಲ್ಲಿರುವ ಒಂದು ಜಿಲ್ಲೆ ಎಂದು ತಿಳಿದುಕೊಂಡು ನಮ್ಮ ಜಿಲ್ಲೆಗೆ ಸಂಬಂಧಪಟ್ಟಂತೆ ಕೆಲವು ಯೋಜನೆಗಳನ್ನು ಹಾಕಿ ಕಾಲೇಜುಗಳನ್ನು, ಔದ್ಯೋಗಿಕ ಕೇಂದ್ರಗಳನ್ನು ಕೊಡಬೇಕೆಂದು ತಮ್ಮ ಮುಖಾಂತರ ಕೇಳಿಕೊಂಡು ಇಷ್ಟು ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

SRI C.M. ARUMUGHAM.-Sir, I have given a notice under Rule 312 I hope you will kindly consider it now.

MR. SPEAKER.—I have gone through it. Your notice conforms to the provision. I am going to send it to the Government.

SRI C.M. ARUMUGHAM.—Thank you very much. Sir.

ಅಧ್ಯಕ್ಷರು.—ಪ್ರಭಾಕರ ತೇಲ್ಕರ್ ಅವರು ಈಗ ಮಾತನಾಡಲಿ.

ಶ್ರೀ ಜೆ. ಹೆಚ್. ಪಟೇಲ್.—ಇನ್ನು ಮೂರು ನಿಮಿಷ ಇದೆ ೬ ಗಂಟೆಗೆ, ಈಗ ಏತಕ್ಕೆ ಅವರ ಭಾಷಣವನ್ನು ಪ್ರಾರಂಭ ಮಾಡಬೇಕು ?

ಶ್ರೀ ಪ್ರಭಾಕರ ತೇಲ್ಕರ್.—ಇನ್ನು ಎರಡು ನಿಮಿಷ ಇದೆ ಸ್ವಾಮಿ.

ಶ್ರೀ ಎಸ್. ಎಂ. ಶೀರಸ್ನಾಳಿ ಚಂದ್ರಶೇಖರ್.—ಅಷ್ಟೇ ಮಾತನಾಡಿ.

ಶ್ರೀ ರಾಮಭಟ್ —ಪೀಠಿಕೆ ಮಾಡುವುದರಲ್ಲಿ ವೇಳೆ ಮುಗಿಯುತ್ತದೆ.

ಅಧ್ಯಕ್ಷರು.—ಎಷ್ಟಾಗುತ್ತದೋ ಅಷ್ಟು ಮಾತನಾಡಿ.

While welcoming the budget that has been presented by the hon'ble Finance Minister, I commend some of the proposals that have been initiated in the budget particularly with regard to the construction of about 100 hostels for Scheduled Caste/Scheduled Tribe people, 50 hostels for backward classes people and temporary jobs to the Scheduled Caste/Scheduled Tribe People. I also commend proposals with regard to Gnanamandiras for about 2000 villages, Schemes like Gruhakalyana, Ashakirana, Munnede, Sagaradeepa etc While placing proposals for all these Schemes, the Finance Minister has tried to uplift the downtrodden and also develop our State in a better manner. One point which I want to stress is with regard to the alarming situation that has arisen due to the increase of population in the State of Karanataka. It has been...

SRI K. BHASKAR NAIDU.—Sir, it is already 6.00 clock now.

MR. SPEAKR.—I am aware of this. Don't take the trouble. The hon'ble Member Sri Prabhakar Telkar may please continue his speech tomorrow.

The House now stands adjourned to meet tomorrow at 9.00 A.M.

The House adjourned at Six of the Clock to meet again at Nine of the Clock on Wednesday, the 24th March 1982.